ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೧೯ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೭ ಸಂಚಿಕೆ: ೧೨

ಚಂದಾ ರೂ. ೨೦೦/- (ವ್ಯಕ್ತಿಗಳಿಗೆ) ರೂ. ೩೦೦/- (ಸಂಸ್ಥೆಗಳಿಗೆ) ಬೆಲೆ: ಬಿಡಿ ಪ್ರತಿ: ರೂ. ೨೦/- ಪುಟ: ೨೦

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೫೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಒಂದು ಧಾರ್ಮಿಕ-ಸಾಂಸ್ಕೃತಿಕ ಸಂಘಟನೆಯ ಅಧ್ಯಕ್ಷರಾಗಿರುವ ನನ್ನ ಗೆಳೆಯರೊಬ್ಬರು ಅದರ ಮುಖವಾಣಿಯಂತಿರುವ ಮಾಸಿಕವೊಂದರ ಸಂಪಾದಕರೂ ಆಗಿದ್ದಾರೆ. ಅದರ ಕಳೆದ ಸಂಚಿಕೆಯಲ್ಲಿ ಅವರು ತಮ್ಮ ಸಂಪಾದಕೀಯದಲ್ಲಿ ತಾವೆದುರಿಸಿದ ಇಕ್ಕಟ್ಟಿನ ಪ್ರಸಂಗವೊಂದನ್ನು ಬಹು ಸಂಕಟದಿಂದ ನಿವೇದಿಸಿಕೊಂಡಿದ್ದಾರೆ. ಇವರ ಸಂಘಟನೆಯ ಸಹಯೋಗದಲ್ಲಿ ಮತ್ತೊಂದು ಇಂತಹುದೇ ಸಂಘಟನೆ ಕೆಲವರಿಗೆ ಪ್ರಶಸ್ತಿಗಳನ್ನು ಪ್ರಕಟಿಸಿತಂತೆ. ಪ್ರಶಸ್ತಿ ಪ್ರದಾನ ಸಮಾರಂಭದ ಉಸ್ತುವಾರಿ ನನ್ನ ಗೆಳೆಯರದ್ದು. ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಪ್ರಶಸ್ತಿ ಪುರಸ್ಕೃತರೂ ಸೇರಿ ಎಲ್ಲರಿಗೂ ಅವನ್ನು ಕಳಿಸಲಾಯಿತು. ಆದರೆ ಸಮಾರಂಭ ಇನ್ನೆರಡು ದಿನಗಳಿರುವಂತೆ ಪ್ರಶಸ್ತಿ ಪುರಸ್ಕೃತ ಸ್ವಾಮೀಜಿಯೊಬ್ಬರಿಂದ ತಮ್ಮ ಹೆಸರಿನೊಂದಿಗೆ 'ಪರಮಪೂಜ್ಯ' ಎಂಬ ಅಭಿದಾನವಿಲ್ಲದಿರುವುದರಿಂದ ತಾವು ಸಮಾರಂಭವನ್ನು ತಮ್ಮ ಅನುಯಾಯಿಗಳೊಂದಿಗೆ ಬಹಿಷ್ಕರಿಸುವುದಾಗಿ ನನ್ನ ಗೆಳೆಯರಿಗೆ ಸಂದೇಶ ಕಳಿಸಿದರಂತೆ. ಇವರು ಇದು ತಮ್ಮಿಂದಾದ ವೈಯಕ್ತಿಕ ಲೋಪವೆಂದೂ, ಅದಕ್ಕಾಗಿ ಕ್ಷಮೆ ಕೋರುವುದಾಗಿಯೂ, ಸಮಾರಂಭದಲ್ಲಿ ಈ ತಪ್ಪಿಹೋದ ಅಭಿದಾನ ಬಳಸಿಯೇ ಅವರನ್ನು ಸ್ವಾಗತಿಸುವುದಾಗಿಯೂ ಕೇಳಿಕೊಂಡರೂ, ಅವರು ಆಹ್ವಾನ ಪತ್ರಿಕೆಯನ್ನು ಪರಿಷ್ಕರಿಸಿ ಮುದ್ರಿಸಿ ಕೂಡಲೇ ಕಳಿಸದಿದ್ದರೆ ತಮ್ಮ ನಿರ್ಧಾರ ಬದಲಾಗದು ಎಂದು ಎಚ್ಚರಿಕೆ ನೀಡಿದರಂತೆ. ಹಾಗಾಗಿ ಏನೂ 'ಬೇರೆ ದಾರಿ ತೋಚದೆ' ನನ್ನ ಗೆಳೆಯರು ಆಹ್ವಾನ ಪತ್ರಿಕೆ ಮತ್ತು ಅದರೊಡನೆಯ ಇತರ ಸಾಹಿತ್ಯ-ಸ್ಮರಣಿಕೆಗಳನ್ನೂ ಈ ಸ್ವಾಮೀಜಿಯ ಬಿರುದು ಬಾವಲಿಗಳೊಂದಿಗೆ ಹೊಸದಾಗಿ ಸಜ್ಜುಗೊಳಿಸಿ ಆ ಮಹಾನುಭಾವರನ್ನು ಆಹ್ವಾನಿಸಿದರು. ಅವರು ಬಂದರು, ಮುಖ ಬಿಗಿ ಮಾಡಿಕೊಂಡೇ ಪುರಸ್ಕಾರ-ಆತಿಥ್ಯಗಳನ್ನೆಲ್ಲ ಸ್ವೀಕರಿಸಿ ಹೋದರು. ಹೋಗುವ ಮುನ್ನ ತಾವು ಆರು ಪುಟಗಳ ಪರಿಚಯ ಕಳಿಸಿದ್ದರೂ ಅದರ ಚೋಟುದ್ದ ಮಾತ್ರ ಹಾಕಿದ್ದಾರೆ ಎಂದು ತಮ್ಮ ಮುನಿಸನ್ನು ಹೊರಹಾಕಿಯೇ ಹೋದರು.

ಇದನ್ನೆಲ್ಲ ನನ್ನ ಗೆಳೆಯನ ಸಂಪಾದಕೀಯದಲ್ಲಿ ಓದಿ ಹೇಸಿಗೆಯೆನಿಸಿ, ಆ ಗೆಳೆಯನಿಗೆ ನಾನು ಈ ಅರ್ಥದ ಒಂದು ಸಂದೇಶ ಕಳಿಸಿದೆ: 'ಇಂತಹ ಟೊಳ್ಳು ವ್ಯಕ್ತಿತ್ವದ'ಸ್ವಾಮೀಜಿಗೆ ಪ್ರಶಸ್ತಿ ನೀಡಿದ್ದಲ್ಲದೆ ಹೀಗೆ ಆತನನ್ನು ಓಲೈಸಿದ ನಿಮ್ಮ ಮತ್ತು ನಿಮ್ಮ ಸಂಘಟನೆಯ ಟೊಳ್ಳುತನವನ್ನೂ ಬಯಲುಗೊಳಿಸಿರುವ ಈ ಸಂಪಾದಕೀಯವು ಕರುಣಾಜನಕವಾಗಿದೆ.' ಆದರೆ ಓದುಗರಿಂದ ತನ್ನ ಈ ಸಂಪಾದಕೀಯದ 'ದಿಟ್ಟತನ'ಕ್ಕಾಗಿ ಮೆಚ್ಚುಗೆಯನ್ನು ನಿರೀಕ್ಷಿಸಿದ್ದ ಈ ಮುಗ್ಧ ಗೆಳೆಯ ಇದಕ್ಕೆ ನನಗೆ ನೀಡಿದ ಉತ್ತರ: 'ನಿಮ್ಮ ಕರುಣೆಗಾಗಿ ವಂದನೆಗಳು.'! ಧರ್ಮದ ಸುಗಂಧ ಪೂಸಿಕೊಂಡ ಜಾತಿ ತಿಪ್ಪೆಯ ಗಮಲೇ ಹಾಗೆ. ಅದಕ್ಕೆ ಒಳಗಾದವರಿಗೆ ಆತ್ಮಗೌರವ ಅಥವಾ ಸಾಮಾಜಿಕ ಪ್ರಜ್ಞೆ ಇರಲಿ, ಕನಿಷ್ಠ ತನ್ನ ಪದನಿಮಿತ್ತವಾದ ನೈತಿಕ ಪ್ರಜ್ಞೆಯೂ ಇರಲಾರದು. ಎಲ್ಲವನ್ನೂ ನಾಶಪಡಿಸಲು ಎಂಥದೋ ಒಂದು ಪದವಿ ಸಾಕು.

ನಾವು ಸುತ್ತ ಎಲ್ಲ ಮೌಲ್ಯಗಳೂ ಕುಸಿಯುತ್ತಿವೆ ಎಂದು ಬೊಬ್ಬಿಡುತ್ತೇವೆ. ಆದರೆ ಕುಸಿಯುತ್ತಿರುವುದು ನಿಜವಾಗಿ ಏನು? ಯಾರು? ಏಕೆ? ಎಂದು ಎಂದಾದರೂ ಯೋಚಿಸಿದ್ದೇವೆಯೆ?

ಇದಕ್ಕೆ ಇನ್ನೊಂದು ಉದಾಹರಣೆ: ನಮ್ಮ ಪ್ರಗತಿಪರರು ತಮ್ಮ ಮುಖವಾಣಿಯೆಂದು ನಂಬಿರುವ/ನಂಬಿದ್ದ ಕನ್ನಡದ ದಿನಪತ್ರಿಕೆಯೊಂದರ ಒಳಾಡಳಿತದಲ್ಲಿ ಒಂದು ಸಣ್ಣ ಬದಲಾವಣೆಯಾಗಿ ಪತ್ರಿಕೆಯ ಸಂಪಾದಕೀಯ ಪುಟದ ಬರಹಗಳ ಗಾತ್ರ ಕಡಿಮೆಯಾಗಿ ಗಂಭೀರ ಚಿಂತನೆಗೆ ಅಡ್ಡಿಯಾಗಿದೆ ಎಂದು 'ನೊಂದ' ಪ್ರಗತಿಪರರ ಗುಂಪೊಂದು ಪತ್ರಿಕೆಯ ಆಡಳಿತ ಮಂಡಳಿಗೆ ಒಂದು ಮನವಿಯನ್ನು ಸಿದ್ಧಪಡಿಸಿ ಸಹಿಗಾಗಿ ನನಗೆ ಕಳಿಸಿತು. ನಾನು ಸಹಿ ಹಾಕಲು ನಿರಾಕರಿಸಿದೆ. ಇದಕ್ಕೆ ಮುಖ್ಯ ಕಾರಣ, ಈ ಮನವಿಯ ಓಲೈಕೆಯ ಶೈಲಿ ಯಾವುದೇ ಪತ್ರಿಕೆಯ ಓದುಗವರ್ಗದ ಘನತೆಗೆ ತಕ್ಕುದಾಗಿಲ್ಲವೆಂದು ನಾನು ಭಾವಿಸಿದ್ದು. ಹಾಗಾಗಿ ನಾನು ಪತ್ರಿಕೆಯ ಆ ಪುಟಕ್ಕೆ ಲೇಖನಗಳನ್ನು ಬರೆಯುವವರು ಅಲ್ಲಿ ಬರೆಯುವುದನ್ನು ಸದ್ಯಕ್ಕಾದರೂ ನಿಲ್ಲಿಸುವುದು ಹೆಚ್ಚು ಪರಿಣಾಮಕಾರಿ ಮಾರ್ಗವಾಗಬಹುದೆಂದು ಸೂಚಿಸಿದೆ. ನನ್ನ ಈ ಸಲಹೆಗೆ ಸಹಮತ ಸೂಚಿಸಿ ಕರೆ ಮಾಡಿದ ಆ ಪತ್ರಿಕೆಯ ಅಂಕಣಕಾರರೊಬ್ಬರು, 'ಆದರೆ ಏನು ಮಾಡುವುದು ಸರ್, ನಾನು ಬರೆಯುವುದನ್ನು ನಿಲ್ಲಿಸಿದರೆ ಆಡಳಿತ ಮಂಡಳಿಯು ಬಲಪಂಥೀಯರೊಬ್ಬರಿಗೆ ಆ ಜಾಗದಲ್ಲಿ ಅವಕಾಶ ನೀಡುತ್ತದೆಂದು ಆ ಪುಟದ ಸಂಪಾದಕ ಸಿಬ್ಬಂದಿ ಹೇಳುತ್ತಿದೆ' ಎಂಬ ಆತಂಕವನ್ನು ವ್ಯಕ್ತಪಡಿಸಿದರು. ನಾನು ಹೇಳಿದೆ: 'ಪತ್ರಿಕೆ ಯಾಕೆ ದಾರಿ ತಪ್ಪಿದೆ ಎಂದು ಈಗಲಾದರೂ ನಿಮಗೆ ಗೊತ್ತಾಯಿತೇ? ಯಾರಿಂದ ಬರೆಸಬೇಕೆಂದು ಆಡಳಿತ ಮಂಡಳಿ ನಿರ್ಧರಿಸುವುದಾದರೆ ಸಂಪಾದಕೀಯ ಸಿಬ್ಬಂದಿ ಎಂಬುದು ಏಕಿದೆಯಂತೆ?

ಎಲ್ಲ ಹಾಳಾಗುತ್ತಿದೆ ಎಂದು ಬೊಬ್ಬಿರಿಯುತ್ತೇವೆ. ಆದರೆ ಹಾಳಾಗುತ್ತಿರುವುದು ನಿಜವಾಗಿ ಏನು? ಯಾರು? ಏಕೆ? ನಾವು ಯಾವ ಕೆಲಸ ಮಾಡಲು ಬಂದಿದ್ದೇವೆ? ಏಕೆ ಸಂಬಳ ಪಡೆಯುತ್ತಿದ್ದೇವೆ ಎಂಬುದನ್ನೇ ಮರೆಸುತ್ತಿರುವ ಅಂಶ ಯಾವುದು? ಇನ್ನೂ ಸ್ಪಷ್ಟವಾಗದಿದ್ದರೆ ಇನ್ನೊಂದು ಉದಾಹರಣೆ ನೋಡಿ:

ಮೊನ್ನೆ ಕನ್ನಡ ಅಧ್ಯಾಪಕ ಗೆಳೆಯರೊಬ್ಬರು ಕರೆಮಾಡಿ, 'ಇಂದು ನನ್ನ ಪ್ರಾಧ್ಯಾಪಕ ಬದುಕಿನ ಅತ್ಯಂತ ಕೆಟ್ಟ ದಿನ!' ಎಂದು ಗೋಳಾಡಿದರು. ವಿಷಯ ಏನೆಂದು ವಿಚಾರಿಸಿದಾಗ ಅವರು ಹೇಳಿದ್ದು: 'ಇವೊತ್ತು ನಮ್ಮ ವಿಶ್ವವಿದ್ಯಾಲಯದ ಪಠ್ಯಕ್ರಮ ಪರಿಶೀಲನಾ ಸಭೆ ಸೇರಿತ್ತು. ಅದರಲ್ಲಿ ಭಾಷೆ ಮತ್ತು ಸಾಹಿತ್ಯಬೋಧನೆಯ ಪಠ್ಯಕ್ರಮವನ್ನು ರಾಷ್ಟ್ರ ಮಟ್ಟದಲ್ಲಿ ನಿರ್ಧರಿಸಿರುವುದಾಗಿ ತಿಳಿದು ಆಘಾತಗೊಂಡೆ. ಇದರ ಪ್ರಕಾರ ಕನ್ನಡ ವ್ಯಾಕರಣದ ಒಂದಂಶವನ್ನೂ ಅರಿಯದೆ ವಿದ್ಯಾರ್ಥಿ ಕನ್ನಡ ಪದವಿ ಪಡೆಯಬಹುದಾಗಿದೆ. ಇದೆಂತಹ ಘೋರ ಅನ್ಯಾಯ ಸಾರ್!

ನಾನು ಇತ್ತೀಚೆಗೆ ನಮ್ಮ ಅಧ್ಯಾಪಕರಲ್ಲಿ ಅಪರೂಪವಾಗುತ್ತಿರುವ ಪಠ್ಯ ಸಂಬಂಧಿ ವಿಷಯಗಳ ಕುರಿತ ಈ ಗೆಳೆಯನ ಬದ್ಧತೆಯನ್ನು ಮೆಚ್ಚಿದೆನಾದರೂ, ಆತನೇಕೆ ಈ ಸಭೆಯಲ್ಲಿ ಪ್ರತಿರೋಧ ಒಡ್ಡಲಿಲ್ಲ ಎಂದು ಆಶ್ಚರ್ಯವಾಗಿ ಆತನನ್ನು ಪ್ರಶ್ನಿಸಿದೆ. ಅದಕ್ಕೆ ಆತನ ಒಂದೇ ವಾಕ್ಯದ ಉತ್ತರ: 'ಹಿರಿಯ ಪ್ರಾಧ್ಯಾಪಕರೇ ಮಾತಿಲ್ಲದೆ ಕೂತಿರುವಾಗ ನನ್ನ ಮಾತು ಯಾವ ಲೆಕ್ಕ?' ನಾನು ಹೇಳಿದೆ: 'ನಮ್ಮ ಕಾಲದಲ್ಲಾಗಿದ್ದರೆ ಮೇಷ್ಟ್ರುಗಳು ಇಂತಹ ವಿಷಯದಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸಿ ಪ್ರತಿಭಟನೆ ಮಾಡಿ ತಮ್ಮ ವೃತ್ತಿ ಮರ್ಯಾದೆಯನ್ನು ಮೆರೆಯುತ್ತಿದ್ದರು. ನಿಮಗೇನಾಗಿದೆ?' ಆತನ ತಣ್ಣನೆಯ ಉತ್ತರ: 'ಸೆಮಿಸ್ಟರ್ ಪದ್ಧತಿ ಮತ್ತು ಯುಜಿಸಿ ವೇತನಶ್ರೇಣಿ!'

ಎಂತಹ ಚಕ್ರವ್ಯೂಹವಿದು! ಇದು ಯಾರೋ ಹೊರಗಿನವರು ರೂಪಿಸಿ ನಮ್ಮ ಮೇಲೆ ಪ್ರಯೋಗಿಸಿರುವುದೋ ಅಥವಾ ನಮ್ಮೊಳಗೇ ಹುಟ್ಟಿ ಹೊರಕ್ಕೆ ಬೆಳೆದು ನಮ್ಮನ್ನು ಬಂಧಿಸಿರುವುದೋ? ಬದುಕೇ ಒಂದು ಮಾರುಕಟ್ಟೆಯಾಗಿ ವೃತ್ತಿ-ಪದಗೌರವಗಳೆಲ್ಲವೂ ವ್ಯಾಪಾರಾಟದ ವಸ್ತುಗಳಾಗತೊಡಗಿದಾಗ ಆತ್ಮಗೌರವವೆಂಬುದಕ್ಕಾದರೂ ಎಲ್ಲಿ ಜಾಗವಿದ್ದೀತು? ಬದುಕಿಗೆ ಯಾವ ಅರ್ಥವಿದ್ದೀತು?

ಓದುಗರೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

-ಸಂಪಾದಕ

ತಿಂಗಳ ನೋಟ

ಅಲ್ಲಿ ಕುಗ್ಗಿದ ಮೋದಿ ರಾಜಕಾರಣದ ಪೊಗರು; ಇಲ್ಲಿ ಸಾಹಿತಿಗಳ ಹುಸಿ ಗುಟುರು!

ಬಹು ನಿರೀಕ್ಷಿತ ಐದು ರಾಜ್ಯಗಳ ಚುನಾವಣಾ ಫಲಿತಾಂಶಗಳು ಹೊರಬಿದ್ದು ಆ ರಾಜ್ಯಗಳಲ್ಲಿ ಹೊಸ ಸರ್ಕಾರಗಳೂ ಅಸ್ತಿತ್ವಕ್ಕೆ ಬಂದಾಗಿದೆ. ಈ ಫಲಿತಾಂಶಗಳ ಬಗ್ಗೆ ಒಂದೇ ವಾಕ್ಯದಲ್ಲಿ ವ್ಯಾಖ್ಯಾನ ಮಾಡುವುದಾದರೆ, ಸರ್ವಾಧಿಕಾರ ಬೆಳೆಯುತ್ತಿದೆ; ಪ್ರಜಾಪ್ರಭುತ್ವ ಅಳಿಯುತ್ತಿದೆ ಎಂಬ 'ಪ್ರಗತಿಪರ'ರ ಹುಯ್ಲಿಗೆ ಒಂದಿಷ್ಟು ವಿರಾಮ ನೀಡಿದೆ. ದೇಶದ ಹಿಂದಿ ಹೃದಯಭಾಗದ ಮೂರು ದೊಡ್ಡ ರಾಜ್ಯಗಳಾದ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢಗಳಲ್ಲಿ ಬಿಜೆಪಿ ಪ್ರಾಬಲ್ಯ ಅಳಿದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಛತ್ತೀಸ್‌ಗಢದ ಹೊರತಾಗಿ ಮಿಕ್ಕೆರಡು ರಾಜ್ಯಗಳಲ್ಲಿ ಕಾಂಗ್ರೆಸ್‌ನ ಗೆಲುವು ಬಹಳ ಕಡಿಮೆ ಅಂತರದ್ದಾಗಿದ್ದು ಇಲ್ಲಿ ಕಾಂಗ್ರೆಸ್‌ನ ಜನಪ್ರಿಯತೆಗಿಂತ ಹೆಚ್ಚಾಗಿ ಆಡಳಿತ ವಿರೋಧಿ ಅಲೆಯ ಪರಿಣಾಮವೇ ಆ ಪಕ್ಷಕ್ಕೆ ವರದಾನವಾಗಿ ಪರಿಣಮಿಸಿರುವುದು ಎದ್ದು ಕಾಣುತ್ತದೆ. ಆದರೆ ಛತ್ತೀಸ್‌ಗಢದಲ್ಲಿ ಮಾತ್ರ ಕಾಂಗ್ರೆಸ್‌ನ ಗೆಲುವಿನ ಭಾರಿ ಅಂತರ ಗಮನಾರ್ಹವಾಗಿದೆ. ರಾಜಸ್ಥಾನದಲ್ಲಿ ವಸುಂಧರಾ ರಾಜೆ ಅವರ 'ರಾಣಿ'ಯ ಆಡಳಿತ ಮತ್ತು ಹಸುವಿನ ಹೆಸರಿನಲ್ಲಿ ನಡೆದ ಗೂಂಡಾಗಿರಿ ರಾಜಕಾರಣದ ಜೊತೆಗೆ ಉಳಿದೆರಡು ರಾಜ್ಯಗಳಲ್ಲಿದ್ದಂತೆಯೇ ಹರಡಿದ್ದ ರೈತ ಅಶಾಂತಿ ಮತ್ತು ನೋಟು ರದ್ದತಿ ಹಾಗೂ ಜಿಎಸ್‌ಟಿ ಗೊಂದಲಗಳು ಸೃಷ್ಟಿಸಿದ್ದ ಸಣ್ಣ ವ್ಯಾಪಾರಿಗಳಲ್ಲಿನ ಅಸಮಧಾನ ಈ ಮೂರೂ ರಾಜ್ಯಗಳಲ್ಲಿ ಬಿಜೆಪಿ ಆಳ್ವಿಕೆಯನ್ನು ಕೊನೆಗೊಳಿಸಿದಂತೆ ಕಾಣುತ್ತದೆ. ಜೊತೆಗೆ ಸೋತು ಸುಣ್ಣವಾಗಿದ್ದ ಕಾಂಗ್ರೆಸ್ ನಾಯಕರು ಗೆಲ್ಲುವ ಛಲದಿಂದ ಒಗ್ಗಟ್ಟಾಗಿ ಕೆಲಸ ಮಾಡಿದ್ದೂ ಇದಕ್ಕ ಕಾರಣವಾಗಿರುವಂತೆ ತೋರುತ್ತದೆ.

ಅದೇನೇ ಇರಲಿ, ದೇಶದ ಅತ್ಯುತ್ತಮ ಮುಖ್ಯಮಂತ್ರಿ ಎಂದು ಹೆಸರಾಗಿದ್ದ ಮಧ್ಯಪ್ರದೇಶದ ಶಿವರಾಜ್‌ಸಿಂಗ್ ಚೌಹಾಣ್ ಅವರ ಆಡಳಿತವಾಗಲೀ, ಅಥವಾ ಛತ್ತೀಸ್‌ಗಡದಲ್ಲಿನ ರಮಣ ಸಿಂಗ್ ಅವರ ದಕ್ಷ ಮತ್ತು ಜನಪ್ರಿಯ ಕಾರ್ಯಕ್ರಮಗಳ ಆಡಳಿತವಾಗಲೀ ಅಲ್ಲಿನ ಬಿಜೆಪಿ ಸರ್ಕಾರಗಳನ್ನು ರಕ್ಷಿಸಲಾಗಲಿಲ್ಲವೆಂದರೆ ಆ ಪಕ್ಷದಲ್ಲೇನೋ ಜನ ಗುರುತಿಸಿರುವ ಸಮಸ್ಯೆ ಇದೆ ಎಂದರ್ಥ. ಇದು ಮುಖ್ಯವಾಗಿ ಅದರ ರಾಜಕಾರಣದ ವರಸೆಗಳು ಮತ್ತು ಕೇಂದ್ರದಲ್ಲಿನ ನರೇಂದ್ರ ಮೋದಿಯವರ ಆಡಳಿತ ಶೈಲಿಗೆ ಸಂಬಂಧಿಸಿದ್ದು. ಮೊದಲಾಗಿ ಈ ಫಲಿತಾಂಶಗಳು ಮೋದಿಯವರ ವರ್ಚಸ್ಸು ಕುಂದಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅದಕ್ಕೆ ಕಾರಣವೂ ಈ ಫಲಿತಾಂಶಗಳಿಂದಲೇ ಸ್ಪಷ್ಟವಾಗಿದೆ. ಅವರು ಯಾವ ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದರೋ ಬಹುಪಾಲು ಆ ಭರವಸೆಗಳು ಹುಸಿಯಾಗಿವೆ ಎಂದು ಜನ ಭಾವಿಸತೊಡಗಿದ್ದಾರೆ. ಮೋದಿ ಆಗ ಈ ದೇಶದ ಜನಸಾಮಾನ್ಯರ ಆಸೆಗಣ್ಣುಗಳನ್ನು ತೆರೆಸಿ ಅವರನ್ನು ಸಾಮೂಹಿಕವಾಗಿ ತಮ್ಮೆಡೆಗೆ ಸೆಳೆದುಕೊಂಡಿದ್ದ ವಿದೇಶಗಳಲ್ಲಿರುವ ಭಾರತೀಯರ ಕಪ್ಪು ಹಣವನ್ನು ಮೂರೋ ಆರೋ ತಿಂಗಳಲ್ಲಿ ಹೊತ್ತುತಂದು ಪ್ರತಿ ಭಾರತೀಯನ ಬ್ಯಾಂಕ್ ಖಾತೆಗೆ ೧೫ ಲಕ್ಷ ರೂ. ಗಳನ್ನು ತುಂಬುವ ಮಹಾಭರವಸೆಯ ಮಾತಾಡುವುದಿರಲಿ, ಆ ಬಗ್ಗೆ ಒಂದು ಸಮಜಾಯಿಷಿ ಅಥವಾ ಕ್ಷಮೆಯ ಮಾತನ್ನೂ ಆಡುತ್ತಿಲ್ಲ. ಅವರ 'ಅಚ್ಛೇ ದಿನ'ಗಳ ಮಾತಂತೂ ಈಗ ಅವರ ಕಲ್ಪನಾಶೀಲತೆಯೇ ಇಲ್ಲದೆ ಕೇವಲ ಸರ್ವಜ್ಞ ಗರ್ವದಿಂದ ಕೂಡಿದ ಕಾರ್ಪೋರೇಟ್ ಹಿತಾಸಕ್ತಿಗಳ ಪರವಾದ ಆಡಳಿತ ನೀತಿಗಳಿಂದಾಗಿ ರೈತ ಸಮುದಾಯದ ಮತ್ತು ಬಡವರ್ಗಗಳು ಅನುಭವಿಸುತ್ತಿರುವ ಸಂಕಷ್ಟಗಳ ಎದುರಿನಲ್ಲಿ ಕ್ರೂರ ವ್ಯಂಗ್ಯದ ಮಾತಾಗಿ ಕೇಳಿಸುತ್ತಿದೆ. ಹಾಗಾಗಿಯೇ ಬಹು ನಿರೀಕ್ಷೆಯಿಂದ ಅವರ ಜೊತೆ ಗುರುತಿಸಿಕೊಂಡಿದ್ದ ಆಡಳಿತಗಾರರು, ಸಲಹಾಕಾರರು, ವಿಶೇಷಜ್ಞರು ಅವರ ಸಹವಾಸದಿಂದ ದೂರ ಸರಿಯತೊಡಗಿದ್ದಾರೆ. ಈ ಪರಿಣಾಮವನ್ನು ಸರಿದೂಗಿಸಲೆಂಬಂತೆ ಮೋದಿಯವರ ಸರ್ಕಾರ ಪ್ರಗತಿ ದರವನ್ನು ಲೆಕ್ಕ ಹಾಕುವ ಆಧಾರಗಳನ್ನೇ ಬದಲಿಸಿ ತಮ್ಮದೇ ಹೆಚ್ಚಿನ ಪ್ರಗತಿ ದರದ ಸರ್ಕಾರವೆಂದು ಸಾಬೀತುಪಡಿಸುವ ಪ್ರಯತ್ನ ಮಾಡಿ ಹಾಸ್ಯಾಸ್ಪದತೆಗೂ ಗುರಿಯಾಗಿದೆ!

ಅಂದ ಮಾತ್ರಕ್ಕೆ ಮೋದಿ ರಾಜಕಾರಣ ಮುಗಿಯಿತು ಎಂದು ಯಾರಾದರೂ ಭಾವಿಸಿದ್ದರೆ ಅದು ತಪ್ಪಾದೀತು. ಆದರೆ ಮೋದಿಯವರು ಗೆದ್ದಾಗ ಇಲ್ಲಿ ಎಲ್ಲ ಮುಗಿಯಿತು ಎಂಬ ಕೆಲ ಸ್ಥಾಪಿತ ಹಿತಾಸಕ್ತ ಪ್ರಗತಿಪರ ಗುಂಪುಗಳು ಎಬ್ಬಿಸಿದ್ದ ಹುಸಿ ಹುಯ್ಲಿನ ಸಂದರ್ಭದಲ್ಲಿ ನಮ್ಮ ಪತ್ರಿಕೆ ಪ್ರಜಾಪ್ರಭುತ್ವದಲ್ಲಿನ ಜನರ ನಂಬಿಕೆ ಕಳೆಯುವ ಇಂತಹ ಹುಸಿಹುಯ್ಲಿನ ಬಗ್ಗೆ ಎಚ್ಚರಿಸುತ್ತಾ, ಮೋದಿ ರಾಜಕಾರಣವನ್ನು ಅದರ ದೌರ್ಬಲ್ಯಗಳ ಆಧಾರದ ಮೇಲೇ ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕವೇ ಎದುರಿಸಿ ಸೋಲಿಸಬಹುದೆಂದು ಬರೆದಿತ್ತು. ಪತ್ರಿಕೆಯ ಈ ಮಾತನ್ನು ಸಿನಿಕತನದಿಂದ ಕಂಡಿದ್ದ ಆ ಕೆಲವರು ಈಗ ಏನು ಹೇಳುತ್ತಾರೋ ತಿಳಿಯದು. ಇವರ ಇಂತಹ ಏಕಮುಖಿ ಮತ್ತು ಏಕಪಕ್ಷೀಯ ರಾಜಕೀಯ ದೃಷ್ಟಿ ಮತ್ತು ನಡೆಗಳೇ ಮೋದಿ ರಾಜಕಾರಣದ ಉತ್ಕರ್ಷಕ್ಕೆ ಕಾರಣವಾಯಿತು ಎಂಬುದನ್ನು ಇವರಿನ್ನೂ ಅರಿತಂತಿಲ್ಲ. ಇದು ಇನ್ನೊಂದ ರೀತಿಯ ಸರ್ವಜ್ಞ ಗರ್ವ ಅಥವಾ ಮೌಢ್ಯ ಅಷ್ಟೆ.

ಹಾಗೆ ನೋಡಿದರೆ ಬಿಜೆಪಿಯೇತರ ಪಕ್ಷಗಳು, ನಿರ್ದಿಷ್ಟವಾಗಿ ಕಾಂಗ್ರೆಸ್ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಏನಾದರೂ ಬದಲಾಗಿರುವ ಸೂಚನೆ ಇದೆಯೇ? ಬದಲಾಗಿದ್ದರೆ ತೆಲಂಗಾಣದಲ್ಲಿ ಅದು ಅವಿವೇಕಿ ಮೈತ್ರಿ ಮಾಡಿಕೊಂಡು ಹೀನಾಯ ಸೋಲನ್ನು ಅನುಭವಿಸುತ್ತಿರಲಿಲ್ಲ. ಹಾಗೇ ಮಿಜೋರಾಂನಲ್ಲಿ ತಮ್ಮ ಸರ್ಕಾರ ಕಳೆದುಕೊಂಡು ಧೂಳಿಪಟವಾಗುತ್ತಿರಲಿಲ್ಲ. ಮೋದಿ ವಿರೋಧಿ ಮೈತ್ರಿಕೂಟ ರಚನೆಯ ಚೌಕಾಶಿ ಈ ಐದೂ ರಾಜ್ಯಗಳ ಚುನಾವಣೆಗಳ ಸಂದರ್ಭದಲ್ಲಿ ಕಂಡಂತೆ ಪರಸ್ಪರ ಬೆನ್ನಿಗೆ ಚೂರಿ ಹಾಕುವ ಮಟ್ಟ ಮುಟ್ಟುತ್ತಿರಲಿಲ್ಲ. ಜೊತೆಗೆ ಕಾಂಗ್ರೆಸ್ ತಲೆಯ ಮೇಲೆ ನ್ಯಾಷನಲ್ ಹೆರಾಲ್ಡ್, ವಾಡ್ರಾ ಮತ್ತು ಚಿದಂಬರಂ ಹಾಗೂ ಡಿಕೆಶಿ ಆಸ್ತಿ ಹಗರಣಗಳು ತೂಗಾಡುತ್ತಾ ಏನು ಪರಿಣಾಮ ಕಾದಿದೆಯೋ ತಿಳಿಯದು! ಇನ್ನು ಲಾಲೂ, ಮಾಯಾವತಿ ಮತ್ತು ಮಮತಾ ಇತ್ಯಾದಿಗಳ ವಿರುದ್ಧದ ಮೊಕದ್ದಮೆಗಳು ಮುಂದೆ ಅವರನ್ನು ಯಾವ ಆಟ ಆಡಿಸುತ್ತವೋ ಗೊತ್ತಿಲ್ಲ! ಚೆನ್ನೈನಲ್ಲಿ ಡಿಎಂಕೆ ನಾಯಕ ಸ್ಟಾಲಿನ್ ತಮ್ಮ ಪ್ರಧಾನ ಮಂತ್ರಿ ಅಭ್ಯರ್ಥಿ ರಾಹುಲ್ ಗಾಂಧಿ ಎಂದು ಘೋಷಿಸಿದಾಗ ಇತರ ಮೈತ್ರಿ ಪಕ್ಷಗಳಿಂದ ಕೇಳಿಬಂದ ಮಾರ್ದನಿಗಳು ಸದ್ಯಕ್ಕೆ ಯಾವ ಆಸೆಯನ್ನೂ ಹುಟ್ಟಿಸುತ್ತಿಲ್ಲ. ಈ ಎಲ್ಲ ಗೊಂದಲದ ಮಧ್ಯೆ ಕೇಂದ್ರದಲ್ಲಿ ಮೋದಿಯವರೇ ಇರಲಿ ಎಂದು ಜನ ನಿರ್ಧರಿಸಿದರೆ ಯಾವ ಆಶ್ಚರ್ಯವೂ ಇಲ್ಲ.

ಕರ್ನಾಟಕದ ಮೈತ್ರಿ ಸರ್ಕಾರವಂತೂ ಯಾವ ಆಸೆಯನ್ನೂ ಹುಟ್ಟಿಸದೆ ಸದಾ ತನ್ನ ಅಸ್ತಿತ್ವದ ಚಿಂತೆಯಲ್ಲೇ ಅದಕ್ಕೆ ಬೇಕಾದ ರಾಜಕೀಯ ತಂತ್ರಗಳ ಬಗ್ಗೆಯೇ ಯೋಚಿಸುತ್ತಾ, ಅದರ ರಾಜಕೀಯ ಸದ್ದುಗಳ ಮಧ್ಯೆಯೇ ಸಾಗಿದೆ. ಆರು ತಿಂಗಳಾದರೂ, ಎಲ್ಲ ರೈತರ ಎಲ್ಲ ಸಾಲಗಳನ್ನೂ ೨೪ ತಾಸುಗಳಲ್ಲಿ ಮನ್ನಾ ಮಾಡುವ ಶ್ರೀಮಾನ್ ಕುಮಾರಸ್ವಾಮಿಯವರ ವಚನ ಪಾಲಿಸಲ್ಪಡದೆ ಒಂದು ತಾಂತ್ರಿಕ ರಗಳೆಯಲ್ಲಿ ಕಳೆದುಹೋದಂತಿದೆ. ಸರ್ಕಾರ ಜನಪರ ಆಡಳಿತಕ್ಕಿಂತ ಶಾಸಕರಿಗೆ ಮಂತ್ರಿಗಿರಿ, ನಿಗಮ–ಮಂಡಳಿಗಳ ಅಧ್ಯಕ್ಷಗಿರಿ ಮುಂತಾದ ಆಮಿಷಗಳನ್ನೊಡ್ಡುವ ಮೂಲಕವೇ ಉಳಿಯುವ ಹಂತ ತಲುಪಿದೆ! ಇದು ಖಂಡಿತ ರಾಜಕಾರಣವಲ್ಲ;ಶುದ್ಧ ದಂಧೆ.

ಇನ್ನು ನಮ್ಮ ಸಾಹಿತ್ಯ ಪರಿಷತ್ತು ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾದ ಸಾಹಿತ್ಯ ಸಮ್ಮೇಳನದ ಹೊತ್ತಿಗೆ ಸರಿಯಾಗಿ ಎದ್ದುಕೂತು ಸಮ್ಮೇಳನಾಧ್ಯಕ್ಷ ಕಂಬಾರರೂ ಸೇರಿದಂತೆ ಒಂದಷ್ಟು ವೃದ್ಧ ಸಾಹಿತಿಗಳನ್ನು ಕೂಡಿ ಹಾಕಿ ರಾಜ್ಯಾದ್ಯಂತ ಸಾವಿರ ಸರ್ಕಾರಿ ಶಾಲೆಗಳಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮ ಆರಂಭಿಸುವುದಾಗಿ ಮುಖ್ಯಮಂತ್ರಿಗಳು ಮಾಡಿರುವ ಪ್ರಕಟಣೆಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿದೆ. ಕುಮಾರಸ್ವಾಮಿಯವರು ತಾವು ಸರಿಯಾಗಿ ಇಂಗ್ಲಿಷ್ (ಹಾಗೆ ದಾಖಲೆ ನೋಡಿದರೆ ಏನನ್ನೂ) ಕಲಿಯದ ಲೋಪವನ್ನು ಸಾರಾಸಗಟಾಗಿ ತಾವು ಕಲಿತ ಸರ್ಕಾರಿ ಶಾಲೆಗಳ ಮೇಲೆ ಹಾಕಿ ನಿರಾಳವಾಗುವ ವೈಯಕ್ತಿಕ ಪ್ರಯತ್ನದಂತೆ ಈ ನಿರ್ಧಾರ ಕಾಣಿಸುತ್ತಿದೆ. ಆದರೆ ಇದರ ಬಗ್ಗೆ, ಶಿಕ್ಷಣ ಮಾಧ್ಯಮದ ಪ್ರಶ್ನೆ ಕುರಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರದ ಈ ಮೂರು ವರ್ಷಗಳಲ್ಲಿ ಸೊಲ್ಲೇ ಎತ್ತದಿದ್ದ ಸಾಹಿತ್ಯ ಪರಿಷತ್ತು ಇದ್ದಕ್ಕಿದ್ದಂತೆ ತನ್ನ ನಿಲುವು ಪ್ರಕಟಿಸಲು ಇರುವುದು ಬಹುಶಃ ಒಂದೇ ಕಾರಣ. ಇಂಗ್ಲಿಷ್ ಮಾಧ್ಯಮ ಶಾಲೆಗಳ ಬಗೆಗಿನ ಒಲವುಳ್ಳ ಮುಖ್ಯಮಂತ್ರಿಯನ್ನು ಧಾರವಾಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಕರೆದಿರುವ ಅಭಾಸದ ಮುಜುಗರದಿಂದ ಪಾರಾಗುವುದು. ಆದರೆ ನಿಜವಾಗಿ ಸಾಹಿತ್ಯ ಪರಿಷತ್ತಿಗೆ ಈ ಮುಜುಗರದ ಅಗತ್ಯವಿರಲಿಲ್ಲ. ಏಕೆಂದರೆ ಈ ಕನ್ನಡ ಸಾಹಿತ್ಯ ಪರಿಷತ್ತಿಗೂ, ಕನ್ನಡಕ್ಕೂ, ಸಾಹಿತ್ಯಕ್ಕೂ ಏನೂ ಸಂಬಂಧ ಇಲ್ಲವೆಂಬುದು ಜನಕ್ಕೆ ಗೊತ್ತಾಗಿ ಬಹಳ ವರ್ಷಗಳೇ ಆಗಿವೆ. ಅದೊಂದು, ಸರ್ಕಾರ ವರ್ಷಕ್ಕೊಮ್ಮೆ ಕನ್ನಡ ಕುರಿತ ತನ್ನ ಅಭಿಮಾನ ಪ್ರದರ್ಶಿಸಲು ಕೋಟ್ಯಾಂತರ ರೂ. ಗಳ ವೆಚ್ಚದಲ್ಲಿ ಪೋಷಿಸುತ್ತಿರುವ ಒಂದು ಆಶ್ರಯ ಸಂಸ್ಥೆಯಾಗಿದೆ.

ಆದರೆ ಇದೇ ಒಂದು ಅವಕಾಶವೆಂದು ನಮ್ಮ ಇಂಗ್ಲಿಷ್ ಶಿಕ್ಷಣ ಪರವಾದ ಗೆಳೆಯರು ಸಾಹಿತ್ಯ ಪರಿಷತ್ತಿನ ಸಾಹಿತಿಗಳ ಈ ಹುಸಿ ಪ್ರತಿಭಟನೆಗೆ ಪ್ರತಿಕ್ರಿಯಿಸುತ್ತಾ, ಸಮಾನ ಶಿಕ್ಷಣದ ಆದರ್ಶ ಮತ್ತು ತತ್ವದ ವಿಶ್ವಾಸಾರ್ಹತೆಯನ್ನೇ ಘಾಸಿಗೊಳಿಸುವ ಪ್ರಯತ್ನ ಮಾಡುತ್ತಿರುವುದು ಮಾತ್ರ ವಿಷಾದಕರ.

–ಡಿಎಸ್ಸೆನ್

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂಬರ್ ಸಂಚಿಕೆಯಲ್ಲಿನ ಯೋಗೇಂದ್ರ ಯಾದವ್ ಅವರ ಆರೆಸ್ಸೆಸ್ ಕುರಿತ ಲೇಖನ ಚೆನ್ನಾಗಿದೆ. ಸುಹೃದ್ ಲೇಖನದ ಅನುವಾದ ಯಾಕೋ ಸರಿಯಾಗಿ ಬಂದಿಲ್ಲ 'ಮದುಮಗಳು' ಕುರಿತ ನಿಮ್ಮ ಮಾತು ನನ್ನವೂ. ಇದೇ ಕೃತಿ ಕುರಿತ ಓ.ಎಲ್.ಎನ್ ಅವರ ತೌಲನಿಕ ಬರಹವೂ ಚೆನ್ನಾಗಿ ಬಂದಿದೆ. ತುಂಬ ಖುಷಿ ನೀಡಿದ್ದೆಂದರೆ, ವಿಲಿಯಂ ಅವರ ಕ್ರೈಸ್ತ ಧರ್ಮ ವಿಚಾರಗಳು. ಅವು ನಮ್ಮ ಉಪನಿಷತ್ ಮಾತುಗಳೇ ಆಗಿವೆ. ಧರ್ಮ ವಿಚಾರ ಪುಟ ಯಾವತ್ತೂ ಇರುವಂತೆ ನೋಡಿಕೊಳ್ಳಿ.

–ಡಾ. ನಿತ್ಯಾನಂದ ಬಿ.ಶೆಟ್ಟಿ, ತುಮಕೂರು

ತ್ರಿದಿಪ್ ಸುಹೃದ್ ಅವರ ಬರಹ ಪುಟ್ಟದಾದರೂ ಅಂಬೇಡ್ಕರ್–ಗಾಂಧಿ ಸಂವಾದದಲ್ಲಿನ ತೊಡಕಿನ ಮೇಲೆ ವಿಶೇಷ ಬೆಳಕು ಚೆಲ್ಲುವಂತಿದೆ. ಅವರು ಹೇಳುವ ಅಪಮಾನ ಮತ್ತು ನಾಚಿಕೆಗಳ ಅನುಭವಗಳಿಗಿರುವ ಗುಣಾತ್ಮಕ ವ್ಯತ್ಯಾಸಗಳನ್ನು ಸ್ವತಃ ಅಂಬೇಡ್ಕರ್ ಗಾಂಧೀಜಿಗೆ ಮನದಟ್ಟು ಮಾಡುವಲ್ಲಿ ಎಷ್ಟು ಯಶಸ್ವಿಯಾಗಿದ್ದರೋ ತಿಳಿಯದಾದರೂ, ಒಂದು ವೇಳೆ ಆ ವ್ಯತ್ಯಾಸ ಗಾಂಧೀಜಿಗೆ ಮನವರಿಕೆಯಾಗಿದ್ದರೆ ಅದು ದಲಿತ ಪ್ರಶ್ನೆ ಕುರಿತ ಅವರ ನಿಲುವು ಹೇಗೆ ಭಿನ್ನವಾಗಿರುತ್ತಿತ್ತೆಂದೂ ಸುಹೃದ್ ವಿವರಿಸಿದ್ದರೆ ಚೆನ್ನಿತ್ತು. ಇನ್ನು ಅಂಬೇಡ್ಕರ್‌ರನ್ನು ಕೆಲ ದಲಿತರೂ ಸೇರಿದಂತೆ ಪ್ರತಿಷ್ಠಿತ ವರ್ಗವೊಂದು ಆರ್ಥಿಕ ಉದಾರೀಕರಣದ ಪರವಾದ ಅರ್ಥಶಾಸ್ತ್ರಜ್ಞರೆಂದು ಬಿಂಬಿಸುವ ಪ್ರಯತ್ನವನ್ನು ಆನಂದ ತೇಲ್‌ತುಂಬ್ಡೆ ಅವರ ಲೇಖನ ಬುಡಮೇಲುಗೊಳಿಸುವಂತಿದೆ. ಎಂ. ರಾಜು ಅವರ ಅನುವಾದ 'ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. 'ಹೊಸ ಮನುಷ್ಯ' ಇಪ್ಪತ್ತೇ ಪುಟಗಳಿದ್ದರೂ ವೈವಿಧ್ಯಮಯ ಮತ್ತು ಗಟ್ಟಿ ಬರಹಗಳಿಂದ ಕೂಡಿ ತಿಂಗಳ ಪೂರ್ತಿ ನಮ್ಮನ್ನು ಆಲೋಚನೆಗೆ ಹಚ್ಚುವಷ್ಟು ಸಮರ್ಥವಾಗಿದೆ,

–ಎನ್. ಬಾಲಚಂದ್ರ, ಬೆಂಗಳೂರು

'ಮಲೆಗಳಲ್ಲಿ ಮದುಮಗಳು' ಕುರಿತ ಡಿಎಸ್ಸೆನ್ ಬರಹ ಆ ಕಾದಂಬರಿಯನ್ನು ಹೊಚ್ಚಹೊಸ ರೀತಿಯಲ್ಲಿ ಓದಿಕೊಳ್ಳಲು ನನಗೆ ನೆರವಾಯಿತು. ಹಾಗೇ ಈ ಲೇಖನದ ಜೊತೆಗೆ ಅಚ್ಚಾದ ಹಿರಿಯ ಕಲಾವಿದ ಗುಜ್ಜಾರಪ್ಪನವರ ರೇಖಾಚಿತ್ರ ಕಾದಂಬರಿಯ ಚೈತನ್ಯವನ್ನೇ ಹಿಡಿದಿಡುವಂತಿತ್ತು. ಇಬ್ಬರಿಗೂ ಅಭಿನಂದನೆಗಳು.

–ಎಂ.ಶೈಲಾಕುಮಾರಿ, ಮೈಸೂರು

' ಹೊಸ ಮನುಷ್ಯ' ಕನ್ನಡದ ಒಂದು ಅತ್ಯುತ್ತಮ ಮಾಸಪತ್ರಿಕೆ. ಇದನ್ನು ನಾನು ಕಾದು ಓದುವುದು, ಅದರಲ್ಲಿನ ನಿಮ್ಮ ಮುಖಪುಟ ಸಂಪಾದಕೀಯದ ಒಳನೋಟಗಳು ಮತ್ತು ಚುರುಕುತನಕ್ಕಾಗಿ. ಇದು ಶ್ಲಾಘನೆಯಲ್ಲ; ವಾಸ್ತವ

.–ಪ್ರೊ. ಎಚ್. ಸಿದ್ದೇಗೌಡ, ಚನ್ನರಾಯಪಟ್ಟಣ

ಧಾರವಾಡದಲ್ಲಿ 'ಮಲೆಗಳಲ್ಲಿ ಮದುಮಗಳು-೫೦' : ಒಂದು ವರದಿ



ಕನ್ನಡದ ಶ್ರೇಷ್ಠ ಸಾಹಿತಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಜಾಗತಿಕ ಶ್ರೇಷ್ಠ ಕಾದಂಬರಿಗಳ ಸಾಲಿನಲ್ಲಿ ನಿಲ್ಲಬಲ್ಲ ಅಪರೂಪದ ಕೃತಿಯಾಗಿದ್ದು ಅದರಲ್ಲಿನ ನೂರಾರು ಪಾತ್ರಗಳು, ನಿಸರ್ಗ ಮತ್ತು ಸಂಸ್ಕೃತಿಯ ಅಪೂರ್ವ ವರ್ಣನೆಯಿಂದಾಗಿ ಕಾದಂಬರಿಯ ತುಂಬೆಲ್ಲಾ ಜೀವಂತಿಕೆಯು ಮೈಗೂಡಿಕೊಂಡಿದೆ ಎಂದು ಕನ್ನಡದ ಹಿರಿಯ ಕವಿ ಚೆನ್ನವೀರ ಕಣವಿ ಹೇಳಿದರು. ಅವರು ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ, ಧಾರವಾಡದ ಗಿರಡ್ಡಿ ಗೋವಿಂದರಾಜ ಪ್ರತಿಷ್ಠಾನ ಹಾಗೂ ಕುಪ್ಪಳಿಯ ಕುವೆಂಪು ಪ್ರತಿಷ್ಠಾನದ ಸಹಯೋಗದಲ್ಲಿ ಡಿಸೆಂಬರ್ ೯ರಂದು ಧಾರವಾಡದ ರಂಗಾಯಣದ ಆವರಣದಲ್ಲಿ ಹಮ್ಮಿಕೊಂಡಿದ್ದ 'ಮಲೆಗಳಲ್ಲಿ ಮದುಮಗಳು– ೫೦' ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು,

ಪಾತ್ರರಚನೆಯಲ್ಲಿನ ವೈವಿಧ್ಯತೆ, ವಾಸ್ತವಿಕತೆಗೆ ದೂರವಾಗದ ಕಥನ, ಪ್ರಾದೇಶಿಕತೆಯ ಗಾಢ ಕಸುವು, ನಿಸರ್ಗದ ಜೊತೆಗಿನ ಮನುಷ್ಯನ ಅವಿನಾಭಾವ ಸಂಬಂಧಗಳು ಪರಸ್ಪರ ಒಂದಕ್ಕೊಂದು ಬೇರ್ಪಡದಂತೆ ಬೆಸೆದುಕೊಂಡಿರುವ ಚಿತ್ರಣವನ್ನು ಈ ಕೃತಿಯಲ್ಲಿ ನೋಡುತ್ತೇವೆ. ಮಾನವ ಪ್ರವೃತ್ತಿಗಳು ಇಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡಿದ್ದು ,ಮಲೆನಾಡಿನ ದಟ್ಟ ಅರಣ್ಯದ ನಡುವೆ ಬದುಕುತ್ತಿರುವ ಕಾದಂಬರಿಯ ಪಾತ್ರಗಳು ಈ ಮಣ್ಣಿನಿಂದ ಹೊರತಾದುದಲ್ಲ ಎನ್ನುವುದನ್ನು ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ ಎಂದು ಕಣವಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್.ನಾಗಭೂಷಣ ಅವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಕುವೆಂಪು ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ಪಡದಿರಲು ಒಂದು ಕಾರಣವೆಂದರೆ ಅದು ಅದುವರೆಗಿನ ಅವರ ಸಾಹಿತ್ಯಕ್ಕಿಂತ ನಿರ್ಣಾಯಕವಾಗಿ ಭಿನ್ನವಾಗಿರುವುದು ಎಂದರು. ಆ ಕೃತಿಯವರೆಗಿನ ಕುವೆಂಪು ಸಾಹಿತ್ಯದ ನಂಬಿಕೆಯಾಗಿ ಆವರೆಗಿನ ಅವರ ಮೇರು ಕೃತಿಯೆಂದು ಪರಿಗಣಿತವಾಗಿದ್ದ 'ಶ್ರೀರಾಮಯಣ ದರ್ಶನಂ' ಎತ್ತಿ ಹಿಡಿಯುವ 'ನೆಯ್ದಾಳುವ ವಿರಾಣ್ಮನಂ' ಮತ್ತು ಅದು ನೀಡುವ 'ಜೀವಿಗಳ್ಗಿಚ್ಛೆಯಾ ಸ್ವಾತಂತ್ರಮಂ' ನಡುವಣ ಸಂಬಂಧದಲ್ಲಿ ಕಾಣಿಸುವ ಅವಿಶದತೆ ಇಲ್ಲಿ ಜೀವಿಗಳ ಇಚ್ಛಾ ಸ್ವಾತಂತ್ರ್ಯದ ಕ್ರಿಯಾಶೀಲತೆಯೇ ವಿರಾಣ್ಮನದ ಚಲನಶೀಲತೆಗೆ ಕಾರಣವೆಂದು ಸೂಚಿಸುವ ಮೂಲಕ ಪರಿಹಾರವಾಗಿ, ಕುವೆಂಪು ಸಾಹಿತ್ಯದ ಅಧ್ಯಾತ್ಮಿಕತೆಗೆ ಮಣ್ಣಿನ ಗುಣ ಒದಗಿದೆ ಎಂದು ಅವರು ವಿವರಿಸಿದರು. ಹಾಗಾಗಿಯೇ ಈ ಕಾದಂಬರಿಯ ಅಂತ್ಯದಲ್ಲಿ ಮುಕುಂದಯ್ಯ ಮತ್ತು ಚಿನ್ನಮ್ಮರ ಪ್ರೇಮದ ಸಾಫಲ್ಯದ ಪ್ರತೀಕವಾಗೆಂಬಂತೆ ಆ ಹಳ್ಳಿಗಾಡಿನಲ್ಲಿ ಸರ್ವರಿಗೂ ಪ್ರವೇಶವಿರುವ ಶಾಲೆಯೊಂದರ ಸ್ಥಾಪನೆಯನ್ನು ಕುವೆಂಪು, '...ಇದೆಲ್ಲದರ ಪರಿಣಾಮವಾಗಿ ಅದರಲ್ಲಿ ಅಂತರ್ಗತವಾಗಿದ್ದ ದೈವ ಸಂಕಲ್ಪವೊಂದು ಸಹ ಈಡೇರಿತು' ಎಂದು ಹೇಳುತ್ತಾರೆ ಎಂದು ನಾಗಭೂಷಣ ಸೂಚಿಸಿದರು.

ನಂತರ ನಡೆದ ವಿವಿಧ ಗೋಷ್ಠಿಗಳಲ್ಲಿ "ಮಲೆಗಳಲ್ಲಿ ಮದುಮಗಳು– ಕನ್ನಡ ಕಾದಂಬರಿ ಲೋಕದ ಅಪೂರ್ವ ಕೃತಿ"ವಿಷಯವಾಗಿ ಡಾ.ರಾಜೇಂದ್ರ ಚೆನ್ನಿ ಮಾತನಾಡಿ, ಇದು ಎಲ್ಲ ವಿಮರ್ಶೆಗಳನ್ನೂ ಮೀರಿ ಇನ್ನೂ ಉಳಿಸಿಕೊಳ್ಳುವಂಥ ಸತ್ವವನ್ನು ಹೊಂದಿದ 'ಅಭಿಜಾತ' ಕೃತಿಯಾಗಿದೆ ಎಂದರು. ಕಾದಂಬರಿಯ ಆಯ್ದ ಭಾಗಗಳನ್ನು ಎ.ಎಂ.ಶಿವಸ್ವಾಮಿ ವಾಚಿಸಿದರು.'ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕಾಡು" ವಿಷಯವಾಗಿ ಡಾ.ನಿತ್ಯಾನಂದ ಶೆಟ್ಟಿ ಮಾತನಾಡಿ ಈ ಕಾದಂಬರಿಯಲ್ಲಿ ಕಾಡು ಮನುಷ್ಯರು ಮೃಗಗಳ ಅಂತಃಪ್ರವೃತ್ತಿಯೊಂದಿಗೆ ಬಾಳುತ್ತಾ ಅದನ್ನು ದಾಟುವಂತೆ ಅವರನ್ನು ಪೊರೆಯುವ ಆಸರೆಯಾಗಿ ಚಿತ್ರಣವಾಗಿರುವ ಬಗೆಯನ್ನು ವಿವರಿಸಿದರು. 'ಮಲೆಗಳಲ್ಲಿ ಮದುಮಗಳು–ಸ್ತ್ರೀತ್ವದ ಶೋಧನೆ' ವಿಷಯವಾಗಿ ಡಾ.ವಿನಯ ಒಕ್ಕುಂದ ಮಾತನಾಡಿ ಬದುಕಿನ ಹಲವು ನೆಯ್ಗೆಗಳ ಅದ್ಭುತ ಹೆಣಿಗೆಯಲ್ಲಿ ಸ್ತ್ರೀ ಪಾತ್ರಗಳ ನಿರ್ಣಯ ಶಕ್ತಿಯನ್ನು, ಸ್ತ್ರೀತ್ವದ ಪ್ರಾಣಶಕ್ತಿಯನ್ನು ಕಾದಂಬರಿಯುದ್ದಕ್ಕೂ ಕುವೆಂಪು ಸೂಕ್ಷ್ಮವಾಗಿ ಹೆಣೆಯುತ್ತಾ ಹೋಗಿದ್ದಾರೆ ಎಂದರು.

ಹಿರಿಯ ಸಾಹಿತಿ ಡಾ.ಗುರುಲಿಂಗ ಕಾಪಸೆ ಸಮಾರೋಪ ಮಾತುಗಳನ್ನಾಡುತ್ತಾ 'ಮಲೆಗಳಲ್ಲಿ ಮದುಮಗಳು' ಮಲೆನಾಡಿನ ಬದುಕಿನ ನೈಜ ಚಿತ್ರಣ, ಸ್ವಾಭಾವಿಕವಾದ ವರ್ಣನೆಗಳು ಮೂಲಕ ಓದುಗರ ಮನಸೂರೆಗೊಳ್ಳುವ ಅದ್ಭುತ ಕೃತಿ ಎಂದರು. ಅಧ್ಯಕ್ಷತೆ ವಹಿಸಿದ್ದ 'ಗಿರಡ್ಡಿ ಗೋವಿಂದರಾಜ ಫೌಂಡೇಶನ್'ನ ಅಧ್ಯಕ್ಷ ವೆಂಕಟೇಶ ಮಾಚಕನೂರ ಅವರು ಕಾದಂಬರಿಯಲ್ಲಿ ಕುವೆಂಪು ಅವರು ಬಳಸಿದ ವೈವಿಧ್ಯಮಯ ಭಾಷೆಯ ಸೊಗಸನ್ನು ಸವಿಯಲಾದರೂ ವಿದ್ಯಾರ್ಥಿಗಳು ಇಂತಹ ಮಹತ್ಕೃತಿಯನ್ನು ಓದಬೇಕೆಂದು ಸಲಹೆ ನೀಡಿದರು. ಎಂ.ರಾಜು, ಸವಿತಾ ನಾಗಭೂಷಣ ಮತ್ತು ಬಾಳಣ್ಣ ಶೀಗೆಹಳ್ಳಿ ಕಾರ್ಯಕ್ರಮವನ್ನು ನಿರೂಪಿಸಿದರು.

(ವರದಿ :ಬಿ.ವಿ.ಸುರೇಂದ್ರ)

ಸಂವಿಧಾನದತ್ತ ನೋಟ-೧

ನಮ್ಮ ಸಂವಿಧಾನ : ಮೂಲ ತತ್ವ, ನಂಬಿಕೆ ಮತ್ತು ಮೌಲ್ಯಗಳು

-ಸಲೀಲ್ ಮಿಶ್ರ



ನಮ್ಮ ಸಂವಿಧಾನ ಒಂದು ಕಡೆಯಿಂದ ಮೂಲಭೂತ ಬದಲಾವಣೆಯ ಒತ್ತಾಯಕ್ಕೂ, ಇನ್ನೊಂದು ಕಡೆಯಿಂದ ಬಲವಾದ ಸಮರ್ಥನೆಗೂ ಒಳಗಾಗುತ್ತಿರುವ ಇಂದಿನ ಸಂದರ್ಭದಲ್ಲಿ ಸಂವಿಧಾನ ರಚನೆಯನ್ನು ಕುರಿತ ಈ ಕಥಾನಕ ಈ ಎರಡು ಬದಿಯ ಚರ್ಚೆಗಳಿಗೆ ಒಂದು ತಾತ್ವಿಕ ಪರಿಪ್ರೇಕ್ಷ್ಯವನ್ನು ಒದಗಿಸಬಹುದಾಗಿದೆ

ಸಾಮಾನ್ಯವಾಗಿ, ಜಗತ್ತಿನ ಬಹುತೇಕ ಸಂವಿಧಾನಗಳು ಎರಡು ವಿಭಿನ್ನ ಹಾದಿಗಳಲ್ಲಿ ರಚನೆಯಾಗಿವೆ ಎಂದು ಹೇಳಬಹುದು. ಒಂದು ಪ್ರಜಾತಂತ್ರೀಯ ಒಮ್ಮತದ ಹಾದಿಯಲ್ಲಿ, ಮತ್ತೊಂದು ಗಣ್ಯರನ್ನೊಳಗೊಂಡ ಆಡಳಿತಶಾಹಿ ಕಾರ್ಯ ವಿಧಾನದ ಹಾದಿಯಲ್ಲಿ. ಭಾರತೀಯ ಸಂವಿಧಾನವು ಪ್ರಜಾತಂತ್ರೀಯ-ಒಮ್ಮತ ಹಾಗೂ ವಿಶೇಷಜ್ಞರ ತಾಂತ್ರಿಕ ಪರಿಣತಿಗಳು, ಇವು ಭಾರತದ ಸಂವಿಧಾನ ರಚನೆಗೊಳ್ಳುವಾಗ ಸಮಾನವಾಗಿ ಕ್ರಿಯಾಶೀಲವಾಗಿದ್ದವು. ಇವೆರಡರ ಒಟ್ಟು ಗೂಡುವಿಕೆಯಿಂದ ಆದದ್ದು ಭಾರತೀಯ ಸಂವಿಧಾನದ ಅತ್ಯಂತ ವಿಶಿಷ್ಟತೆಯಾಗಿದೆ. ಎರಡೂ ಪ್ರಚೋದನೆಗಳು, ಭಾರತದ ಕೇಂದ್ರ ಹಾಗೂ ಪ್ರಾಂತೀಯ ಶಾಸನಸಭೆಗಳ ಪ್ರತಿನಿಧಿಗಳಿಂದ ಆಯ್ಕೆಯಾದ ಮುನ್ನೂರಕ್ಕೂ ಹೆಚ್ಚು ಜನರಿಂದ ಕೂಡಿದ ಸಭೆಯಾದ, ಸಂವಿಧಾನ ಸಭೆಯಿಂದ ಅನುಮೋದನೆ ಗಳಿಸಿತ್ತು. ಆದರೆ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಆ ಸಭೆಗೆ ಅತ್ಯುತ್ತಮ ಸಂವಿಧಾನ ತಜ್ಞರನ್ನು ತರಬೇಕೆಂಬ ಪೂರ್ವ ನಿರ್ಧರಿತ ಉದ್ದೇಶವು ಕೆಲಸಮಾಡಿತ್ತು. ಹೀಗೆ, ಬಿ.ಆರ್. ಅಂಬೇಡ್ಕರ್ ಕೆ.ಟಿ.ಶಾ, ಕೆ.ಎಂ. ಮುನ್ಷಿ ಹಾಗೂ ಎನ್.ಗೋಪಾಲಸ್ವಾಮಿ ಅಯ್ಯಂಗಾರರಂತಹ ತಜ್ಞರನ್ನು ಈ ಸಭೆಗೆ ತರಲಾಯಿತು. ಅಂಬೇಡ್ಕರ್ ಅವರ ವಿರುದ್ಧ ಯಾವ ಅಭ್ಯರ್ಥಿಯನ್ನೂ ನಿಲ್ಲಿಸದೆ ಇರುವ ಮೂಲಕ, ಬಾಂಬೆ ಪ್ರೆಸಿಡೆನ್ಸಿಯಿಂದ ಅವರ ಆಯ್ಕೆಯನ್ನು ನಿಶ್ಚಿತಗೊಳಿಸಲಾಯಿತು. ಇದೆಲ್ಲಕ್ಕಿಂತ ಮಿಗಿಲಾಗಿ, ಆಧುನಿಕ ಭಾರತಕ್ಕೆ ಅತ್ಯುತ್ತಮವಾದ ಹಾಗೂ ಅತ್ಯಂತ ಪ್ರಾತಿನಿಧಿಕವಾದ ನೀಲನಕ್ಷೆಯನ್ನು ತಯಾರಿಸಲು ಕಾಂಗ್ರೆಸ್‌ನ ಅತಿ ಮುಖ್ಯ ನಾಯಕರಾದ – ಜವಹಾರ್ ಲಾಲ್ ನೆಹರೂ, ಸರ್ದಾರ್ ಪಟೇಲ್, ಮೌಲಾನಾ ಆಜಾದ್ ಹಾಗೂ ರಾಜೇಂದ್ರಪ್ರಸಾದ್ ಅವರ ಪರಿಣತಿಯನ್ನು ೧೯೪೬-೪೯ರವರೆಗೂ ಸತತವಾಗಿ ಬಳಸಿಕೊಳ್ಳಲಾಯಿತು.

ಅರವತ್ತು ವರ್ಷಗಳ ನಂತರವೂ ಭಾರತೀಯ ಸಂವಿಧಾನವು ಇಂದಿಗೂ ಸಲ್ಲುತ್ತಿರುವ ಹಾಗೂ ಜೀವಮಿಡಿತ ಹೊಂದಿರುವ ದಾಖಲೆಯಾಗಿ ಮುಂದುವರೆದಿದೆ ಎಂದರೆ ಅದಕ್ಕೆ ಮೇಲಿನ ಎಲ್ಲ ಸಂಗತಿಗಳು ಕಾರಣವಾಗಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು.. ಅದರ ಸಂರಚನೆಯಲ್ಲಿ ಮೂಲಭೂತವಾದ ಬದಲಾವಣೆಗಳಾಗಿಲ್ಲ. ಅದರ ಮೂಲ ಆಶಯದಲ್ಲಿ ಅದು ೧೯೫೦ರಲ್ಲಿ ಯಾವ ದಾಖಲೆಯಾಗಿದ್ದಿತೋ, ಅದು ಇಂದಿಗೂ ಅದೇ ಆಗಿದೆ. ೧ನೇಯ, ೪೨ನೇಯ ಹಾಗೂ ೭೨ನೇ, ೭೩ನೇ ತಿದ್ದುಪಡಿಗಳಂತಹ ಮೂರು ದೊಡ್ಡ ತಿದ್ದುಪಡಿಗಳನ್ನು ಬಿಟ್ಟರೆ ಉಳಿದೆಲ್ಲಾ ತಿದ್ದುಪಡಿಗಳು ಅದನ್ನು ಗಟ್ಟಿಗೊಳಿಸುವಂತಹವಾಗಿವೆಯೇ ಹೊರತು ಅದರ ಮೂಲ ಲಕ್ಷಣವನ್ನು ನಿಜವಾಗಿಯೂ ಬದಲಾಯಿಸುವಂತಹವಾಗಿಲ್ಲ.

ಭಾರತೀಯ ಸಂವಿಧಾನ ರಚನೆಯ ಮೊದಲ ಹೆಜ್ಜೆಗಳು

ಭಾರತೀಯ ಸಂವಿಧಾನದ ರಚನೆಯ ಕಥಾನಕವು ಬಹಳ ದೀರ್ಘವಾಗಿದೆ ಮತ್ತು ಅದು ಇಪ್ಪತ್ತನೇ ಶತಮಾನದ ಪ್ರಾರಂಭದಷ್ಟು ಹಿಂದಕ್ಕೆ ಹೋಗುತ್ತದೆ. ೧೯೪೬-೪೯ರ ನಡುವೆ ಪ್ರತ್ಯಕ್ಷವಾಗಿ ನಡೆದ ಸಂವಿಧಾನ ರಚನೆಯು ಈ ದೀರ್ಘ ಕಥಾನಕದ ಒಂದು ಸಣ್ಣ ಆದರೆ ಮಹತ್ವದ ಭಾಗ ಮಾತ್ರವಾಗಿದೆ. ಭಾರತಕ್ಕಾಗಿ ತಯಾರಾದ ಒಂದು ಸಂವಿಧಾನವನ್ನು ಹೋಲುವಂತಹ ಅತ್ಯಂತ ಮೊದಲಿನ ದಾಖಲೆಗಳೆಂದರೆ ಬ್ರಿಟನ್ನಿನ ಸಂಸತ್ತು ತನ್ನ ವಸಾಹತಾದ ಭಾರತಕ್ಕಾಗಿ ಪಾಸು ಮಾಡಿದ ಕೌನ್ಸಿಲ್ ಆ್ಯಕ್ಟ್‌ಗಳು, ಮೊದಮೊದಲಿನ ಭಾರತೀಯ ರಾಷ್ಟ್ರೀಯವಾದಿ ನಾಯಕಗಣ ಬ್ರಿಟಿಷರ್ ಈ ಹಕ್ಕನ್ನು ಒಪ್ಪಿದ್ದರು ಮತ್ತು ಅವರ ತಗಾದೆ, ಬ್ರಿಟಿಷ್ ಸಂಸತ್ತು ಭಾರತಕ್ಕಾಗಿ ಇನ್ನೂ ಉತ್ತಮ ಶಾಸನಗಳನ್ನು ಪಾಸು ಮಾಡಬೇಕೆಂಬುದಾಗಿ ಮಾತ್ರ ಇತ್ತು. ೧೯೨೦ರ ದಶಕದಲ್ಲಿ ಮೋತಿಲಾಲ್ ನೆಹರೂ ಮತ್ತು ಸಿ.ಆರ್.ದಾಸ್ ಅವರಂತಹ ನಾಯಕರು ಭಾರತೀಯ ಸಂವಿಧಾನವು ಭಾರತೀಯರಿಂದಲೇ ರಚಿತವಾಗಬೇಕೆಂದು ಒತ್ತಾಯಿಸುವ ಮೂಲಕ ಇದಕ್ಕೆ ಒಂದು ಹೊಸ ಆಯಾಮವನ್ನು ಸೇರಿಸಿದರು. ಈ ಭಾರತೀಯ ನಾಯಕರು ತಮ್ಮ ಒತ್ತಾಯವನ್ನು ಅನುಸರಿಸಿ ನಿಜವಾಗಿಯೂ ಒಂದು ಪೂರ್ಣ ಪ್ರಮಾಣದ ಭಾರತೀಯ ಸಂವಿಧಾನವನ್ನು ಪರ್ಯಾಲೋಚನೆಗೆ ಮುಂದಿಟ್ಟರು. ಅದರ ಶಿಲ್ಪಿಗಳಲ್ಲಿ ಒಬ್ಬರಾಗಿದ್ದ ಮೋತಿಲಾಲ್ ನೆಹರೂ ಅವರ ಹೆಸರಿನಿಂದಲೇ ಅದು ನೆಹರೂ ವರದಿ ಎಂದು ಪ್ರಸಿದ್ಧವಾಯಿತು. ಈ ವರದಿಯ ರಚನೆಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ನೆಹರೂ ವರದಿ ಒಂದು ಗಮನಾರ್ಹವಾದ ದಾಖಲೆಯಾಗಿತ್ತು. ಅದು ಜನರಿಗೆ ಮೂಲಭೂತ ಹಕ್ಕುಗಳನ್ನು, ಪಾರ್ಲಿಮೆಂಟರಿ ಮಾದರಿಯ ಸರ್ಕಾರವನ್ನೂ, ಎರಡು ಸಭೆಗಳುಳ್ಳ ಶಾಸನಸಭೆಯನ್ನು, ವಯಸ್ಕರೆಲ್ಲರಿಗೂ ಮತದಾನದ ಹಕ್ಕನ್ನು, ಜನರಾಡುವ ಭಾಷೆಗಳನ್ನು ಆಧರಿಸಿದ ಆಡಳಿತ ಘಟಕಗಳನ್ನು ಹಾಗೂ ತನ್ನ ಉಚ್ಚ ಸ್ಥಾನದಲ್ಲಿ ಸರ್ವೋಚ್ಚ ನ್ಯಾಯಾಲಯವನ್ನು ಹೊಂದಿದ ಸ್ವತಂತ್ರ ನ್ಯಾಯಾಂಗವನ್ನೂ ಶಿಫಾರಸ್ಸು ಮಾಡಿತು. ನೆಹರೂ ವರದಿಗಿಂತ ಮೊದಲು ಮತ್ತು ನಂತರವೂ ಬ್ರಿಟಿಷರು ತಂದ ಕಾನೂನುಗಳು ಜನರಿಗೆ ಮೂಲಭೂತ ಹಕ್ಕುಗಳನ್ನು ಕೊಡುವ ಅಥವಾ ವಯಸ್ಕ ಮತದಾನದ ಬಗ್ಗೆ ಸೊಲ್ಲೆತ್ತಿರಲಿಲ್ಲ. ಬ್ರಿಟಿಷರು ಶ್ರೀಮಂತರಿಗೆ ಮತ್ತು ಬಲಾಢ್ಯರಿಗೆ ಮತದಾನದ ಹಕ್ಕನ್ನು ಕೊಟ್ಟಿದ್ದರು ಮತ್ತು ಜನರ ಮೂಲಭೂತ ಹಕ್ಕುಗಳ ಬಗ್ಗೆ ಹೇಳುವ ಅವಶ್ಯಕತೆ ಇದೆ ಎಂಬುದೇ ಅವರ ಗಮನದಲ್ಲಿರಲಿಲ್ಲ.

ಯಾರಾದರೂ ನಿರೀಕ್ಷಿಸಿರಬಹುದಾದಂತೆ ಬ್ರಿಟಿಷ್ ಸರ್ಕಾರ ನೆಹರೂ ವರದಿಯನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ದುರದೃಷ್ಟವಶಾತ್, ಕೆಲವು ಭಾರತೀಯ ರಾಜಕೀಯ ಪಕ್ಷಗಳು ಕೂಡ, ಅದರಲ್ಲೂ ಮುಖ್ಯವಾಗಿ ಮುಸ್ಲಿಂ ಲೀಗ್, ತಮ್ಮ ಬೆಂಬಲವನ್ನೂ ಹಿಂತೆಗೆದುಕೊಂಡವು. ಇದರಿಂದಾಗಿ ನೆಹರೂ ವರದಿ ಆಧುನಿಕ ಭಾರತದ ಒಂದು ತುಡಿತದಿಂದ ಕೂಡಿದ ಪ್ರಬಲವಾದ ಸಾಂವಿಧಾನಿಕ ಪರ್ಯಾವಾಗುವುದರ ಬದಲಿಗೆ ಒಂದು ಕಾಗದದ ದಾಖಲೆಯಾಗಿ ಮಾತ್ರ ಉಳಿಯಿತು. ಆದರೂ ನಾವು ಭಾರತದ ಸಂವಿಧಾನ ಮತ್ತು ನೆಹರೂ ವರದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಭಾರತೀಯ ಸಂವಿಧಾನವು ನೆಹರೂ ವರದಿಯಿಂದ ಅಗಾಧವಾದ ಪ್ರೇರಣೆ ಪಡೆದಿರುವುದನ್ನು ನಾವು ಕಾಣಬಲ್ಲೆವು. ಆ ವರದಿ ಜನರ ಹತ್ತೊಂಬತ್ತು ಮಾನವ ಹಕ್ಕುಗಳನ್ನು ಪಟ್ಟಿಮಾಡಿತ್ತು. ಅವುಗಳಲ್ಲಿ ಹತ್ತನ್ನು ಭಾರತೀಯ ಸಂವಿಧಾನದಲ್ಲಿ ಸೇರಿಸಲಾಗಿದೆ.

ಸಂವಿಧಾನ ಸಭೆ ರಚನೆಯ ಪ್ರಸ್ತಾಪ

ಇದರ ನಂತರ ಭಾರತೀಯ ಸಂವಿಧಾನದ ರಚನೆಯ ಹಾದಿಯಲ್ಲಿ ಬಹುದೊಡ್ಡ ಹೆಜ್ಜೆಯೆಂದರೆ ೧೯೩೦ರ ದಶಕದಲ್ಲಿ ಹುಟ್ಟು ಪಡೆದ ಒಂದು ಸಂವಿಧಾನ ಸಭೆಯ ಕಲ್ಪನೆ. ನೆಹರೂ ವರದಿಯನ್ನು ಸಮಾಲೋಚನಾ ಕ್ರಮದಲ್ಲಿ ತಯಾರಿಸಲಾಗಿತ್ತು. ಯುವಕ ಜವಹರಲಾಲ್ ನೆಹರೂ ಅವರೇ ಸಂವಿಧಾನ ರಚನೆಯ ಈ ವಿಧಾನದ ಬಗ್ಗೆ ತಮ್ಮ ಅತೃಪ್ತಿಯನ್ನು ಹೊರಹಾಕಿದರು. ಭಾರತೀಯ ಸಂವಿಧಾನವನ್ನೂ, ಅದಕ್ಕಾಗಿಯೇ ಸಾಧ್ಯವಾದಷ್ಟು ಮಟ್ಟಿಗೆ ಅತ್ಯಂತ ವ್ಯಾಪಕವಾಗಿ ಮತದಾನದ ಹಕ್ಕನ್ನು ಪಡೆದವರಿಂದ ಚುನಾಯಿಸಲ್ಪಟ್ಟ ಸಂವಿಧಾನ ಸಭೆಯಿಂದ ರಚನೆಗೊಳ್ಳಬೇಕೆಂದು, ಅವರು ೧೯೩೩ರಿಂದ ಒತ್ತಾಯಿಸತೊಡಗಿದರು. ಬಹುಬೇಗನೆ ಸಂವಿಧಾನ ಸಭೆಯ ಕಲ್ಪನೆ ತೀವ್ರತೆಯನ್ನು ಗಳಿಸಿಕೊಂಡಿತು. ೧೯೩೪ರಲ್ಲಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಬ್ರಿಟಿಷರ ಸಂವಿಧಾನ ಪ್ರಸ್ತಾಪವನ್ನು ತಿರಸ್ಕರಿಸಿತು ಮತ್ತು 'ವಯಸ್ಕರೆಲ್ಲರಿಗೂ ಮತದಾನದ ಹಕ್ಕನ್ನು

ಕೊಟ್ಟು ಅಥವಾ ಅದಕ್ಕೆ ಅತಿ ಹತ್ತಿರವಾದ ಒಂದು ಮತದಾನದ ವಿಧಾನದಿಂದ ಚುನಾಯಿಸಲ್ಪಟ್ಟ ಸಂವಿಧಾನ ಸಭೆಯೊಂದೆ" ಬ್ರಿಟಿಷ್ ಪ್ರಸ್ತಾಪಕ್ಕೆ ತೃಪ್ತಿದಾಯಕ ಪರ್ಯಾಯವೆಂದು ನಿರ್ಧರಿಸಿತು. ಸಂವಿಧಾನ ಸಭೆಗಾಗಿನ ಒತ್ತಾಯವು ನೆಹರೂ ಅವರು ನಾಯಕತ್ವ ವಹಿಸಿದ್ದ ರಾಷ್ಟ್ರೀಯ ಆಂದೋಲನದ ಒತ್ತಾಯದ ಕೇಂದ್ರ ಕಾಳಜಿಯಾಯಿತು. ೧೯೪೦ರಲ್ಲಿ ವಾರ್ಧಾದಲ್ಲಿ ನೆಹರೂ ಮತ್ತು ಗಾಂಧಿಯವರ ನಡುವೆ ನಡೆದ ಒಂದು ಸ್ವಾರಸ್ಯಕರ ಚರ್ಚೆಯಲ್ಲಿ, ನೆಹರೂ ಯುದ್ಧದ ಒಂದು ಪ್ರಮುಖ ನೆಲೆಯಾಗಬಹುದೆಂಬ ಚಿಂತೆಯಿಂದ ಕಳವಳಕ್ಕೊಳಗಾದ ಭಾರತೀಯ ಜನತೆ ಗಾಂಧಿಯವರ ನಾಯಕತ್ವದಲ್ಲಿ ಆಗಸ್ಟ್ ೧೯೪೨ರಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿಯನ್ನು ಪ್ರಾರಂಭಿಸಿತು. ಇದರಿಂದ ಗಾಬರಿಗೊಳಗಾದ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ ನಾಯಕರನ್ನೆಲ್ಲಾ ಬಂಧಿಸಿತು ಮತ್ತು ಆ ಆಂದೋಲನವನ್ನು ನಿರ್ದಯವಾಗಿ ಹತ್ತಿಕ್ಕಿತು. ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಲಾಯಿತು, ರಾಷ್ಟ್ರೀಯ ಆಂದೋಲನ ನಿಲುಗಡೆಯಾಯಿತು ಮತ್ತು ಸಂವಿಧಾನ ಸಭೆಯ ಬಗೆಗಿನ ಮಾತುಕತೆಗಳೆಲ್ಲ ಹಿನ್ನೆಲೆಗೆ ಸರಿದವು.

ಯುದ್ಧದ ಅಂತ್ಯ ಮತ್ತು ೧೯೪೫ರಲ್ಲಿ ನಡೆದ ಬ್ರಿಟಿಷ್ ಚುನಾವಣೆಯಲ್ಲಿ ಲೇಬರ್ ಪಕ್ಷದ ವಿಜಯ ಸಂವಿಧಾನ ಸಭೆಯ ಪ್ರಸ್ತಾಪವನ್ನು ಮತ್ತೆ ಜೀವಗೊಳಿಸಿತು. ಆ ಹೊತ್ತಿಗೆ ಭಾರತಕ್ಕೆ ಸ್ವಾತಂತ್ರ್ಯ ನೀಡಿಕೆ ಅನಿವಾರ್ಯವೆನಿಸತೊಡಗಿತ್ತು... ಈ ಸಂದರ್ಭದಲ್ಲೆ ವೈಸ್‌ರಾಯ್ ಲಾರ್ಡ್ ವೇವೆಲ್ ಅವರು ಹೊಸ ಲೇಬರ್ ಸರ್ಕಾರದ ಭಾರತದ ಬಗೆಗಿನ ನೀತಿಯನ್ನು ಘೋಷಿಸುತ್ತಾ ಆದಷ್ಟು ಬೇಗನೆ ಭಾರತಕ್ಕೊಂದು ಸಂವಿಧಾನ ರಚಿಸುವ ಉಪಕ್ರಮ ಆರಂಭಿಸುವುದಾಗಿ ಭರವಸೆ ನೀಡಿದರು. ಭಾರತದ ಬಿಡುಗಡೆ ಮತ್ತು ಸಂವಿಧಾನ ರಚನೆಯ ಎರಡು ಪ್ರಶ್ನೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಭಾರತಕ್ಕೆ ಸಂಪುಟದ ನಿಯೋಗವೊಂದನ್ನು (ಕ್ಯಾಬಿನೆಟ್ ಮಿಷನ್) ಕಳಿಸುವುದಾಗಿ ಬ್ರಿಟಿಷ್ ಸರ್ಕಾರ ಪ್ರಕಟಿಸಿತು. ಈ ಸಂಪುಟದ ನಿಯೋಗವು ಈ ಎರಡಕ್ಕೂ ಒಂದು ನೀಲನಕ್ಷೆಯೊಡನೆ ಮಾರ್ಚ್ ೧೯೪೬ ರಂದು ಬಂದಿತು.

ಸಂವಿಧಾನ ಸಭೆಯ ರಚನೆ

ಕೊನೆಗೆ ಜುಲೈ–ಆಗಸ್ಟ್ ೧೯೪೬ರಲ್ಲಿ ಪರೋಕ್ಷ ಚುನಾವಣೆಯ ಮೂಲಕ ಸಂವಿಧಾನ ಸಭೆಯನ್ನು ನೆಲೆಗೊಳಿಸಲಾಯಿತು. ಅದನ್ನು ೩೮೯ ಸದಸ್ಯರನ್ನು ಒಳಗೊಂಡ (ಬ್ರಿಟಿಷ್ ಇಂಡಿಯಾದಿಂದ ೨೯೬ ಮತ್ತು ಭಾರತೀಯ ಸಂಸ್ಥಾನಗಳಿಂದ ೯೩) ದೊಡ್ಡ ಕೂಟವಾಗಿ ಯೋಜಿಸಿ ರೂಪಿಸಲಾಗಿತ್ತು. ಮೊದಲಿಗೆ ಬ್ರಿಟಿಷ್ ಇಂಡಿಯಾದ ಸದಸ್ಯರನ್ನು ಮಾತ್ರ ಸೇರಿಸಲಾಗಿತ್ತು. ಸಭೆಯ ಮೊದಲ ಅಧಿವೇಶನ ೧೯೪೬ರ ಡಿಸೆಂಬರ್ ೯ ರಂದು ನೆರವೇರಿತು. ಅದು ನಿಜವಾಗಿಯೂ ಸ್ವತಂತ್ರ ಭಾರತದ ಐತಿಹಾಸಿಕ ದಿನವಾಗಿತ್ತು. ಮುಸ್ಲಿಂ ಲೀಗ್ ಸಭೆಯನ್ನು ಬಹಿಷ್ಕರಿಸಿದ್ದರಿಂದ ಆರಂಭದಲ್ಲಿ ೨೦೭ ಸದಸ್ಯರು ಮಾತ್ರ ಮೊದಲ ಅಧಿವೇಶನದಲ್ಲಿ ಹಾಜರಿದ್ದರು. ರಾಜೇಂದ್ರ ಪ್ರಸಾದ್ ಅವರನ್ನು ಸಭೆಯ ಅಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ನೆಹರೂ ಅವರು ಸಂವಿಧಾನವು ಒಳಗೊಳ್ಳಬೇಕಾದ ಮೂಲಭೂತ ತತ್ತ್ವಗಳನ್ನು ಮತ್ತು ವಿಚಾರಗಳನ್ನು ನಿರೂಪಿಸುವ 'ಆಬ್ಜೆಕ್ಟಿವ್ ರೆಸೆಲ್ಯೂಷನ್' ಎಂಬ ಪ್ರಸಿದ್ಧ ಗೊತ್ತುವಳಿಯನ್ನು ಮಂಡಿಸಿದರು. ಇದು ಸಂವಿಧಾನ ರಚನೆಯ ಇಡೀ ಪ್ರಕ್ರಿಯೆಯನ್ನು ನಿರ್ದೇಶಿಸುವ ತತ್ತ್ವವಾಯಿತು. ಬಿ.ಆರ್. ಅಂಬೇಡ್ಕರ್ ಅವರು ಕರಡು ರಚನಾ ಸಮಿತಿಯ ಮುಖ್ಯಸ್ಥರಾದರು. ೧೯೪೭ರ ಆಗಸ್ಟ್ ೧೫ರಂದು ಭಾರತ ಸ್ವತಂತ್ರವಾದುದರಿಂದ ಸಂವಿಧಾನ ಸಭೆ ಸಾರ್ವಭೌಮ ಸಂಘಟನೆಯಾಯಿತು ಮತ್ತು ಅದು ಹೊಸದಾಗಿ ಸ್ವತಂತ್ರವಾದ ಭಾರತದ ಶಾಸನ ಸಭೆಯಾಗಿಯೂ ಕೆಲಸಮಾಡಿತು. ಅದು ಈಗ ಸಂವಿಧಾನವನ್ನು ರಚಿಸುವುದರ ಜೊತೆಗೆ ಸಾಮಾನ್ಯ ನಿತ್ಯದ ಕಾನೂನುಗಳನ್ನೂ ಮಾಡುವ ಹೊಣೆಯನ್ನು ಪಡೆಯಿತು.

ಬಹುಮತದ ನಿರ್ಣಯ ಒಳ್ಳೆಯದಲ್ಲ!

ಸಭೆಯ ನಾಯಕರುಗಳು ಅತಿ ಮೊದಲಿಗೆ ತೆಗೆದುಕೊಂಡ ನಿರ್ಣಯಗಳಲ್ಲಿ ಒಂದೆಂದರೆ, ಯಾವುದೇ ನಿರ್ಣಯವನ್ನು ಬಹುಮತದ ಮೂಲಕ ತೆಗೆದುಕೊಳ್ಳಬಾರದೆಂಬುದು. ಬಹುಮತದ ನಿರ್ಣಯದ ಮೂಲಕ ಸಂವಿಧಾನವನ್ನು ರಚಿಸುವುದು ಅತ್ಯಂತ ಸಮರ್ಪಕ ಹಾದಿಯೇನಲ್ಲ ಎಂದು ಸಭೆಯು ನಿರ್ಧರಿಸಿತು. ಒಂದು ಪ್ರಸ್ತಾಪವು ಮಂಡನೆಯಾಗಿ ಮತ್ತು ಕಡಿಮೆ ಸಂಖ್ಯೆಯಲ್ಲಿರುವ ಒಂದು ಗುಂಪು ಅದಕ್ಕೆ ವಿರೋಧ ವ್ಯಕ್ತಪಡಿಸಿದರೆ ಹಾಗೆ ವಿರೋಧಿಸಿದವರನ್ನು ಸಮಾಧಾನಪಡಿಸಿ ಅವರನ್ನು ತೃಪ್ತಿಪಡಿಸುವ ಮತ್ತು ಆ ಮೂಲಕ ಒಮ್ಮತಕ್ಕೆ ಬರುವ ಹೊಣೆಯು, ಪ್ರಸ್ತಾಪವನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸಿದವರ ಮೇಲಿರುತ್ತದೆ. ಒಮ್ಮತಕ್ಕೆ ಬರದ ಯಾವುದೇ ನಿರ್ಣಯವೂ ಸಂವಿಧಾನದೊಳಕ್ಕೆ ಬರಬಾರದು. ಹೀಗೆ ಬಹುಮತದ ಅಭಿಪ್ರಾಯದ ದಬ್ಬಾಳಿಕೆಯಿಂದ ಸಂವಿಧಾನವನ್ನು ಕಾಪಾಡುವ ಎಲ್ಲಾ ಪ್ರಯತ್ನಗಳನ್ನೂ ಮಾಡಲಾಯಿತು. ಬಹುಮತದ ಅಭಿಪ್ರಾಯದೊಂದಿಗೆ ಮಾತ್ರ ಮುಂದುವರೆಯಬಾರದು ಮತ್ತು ಒಮ್ಮತಾಭಿಪ್ರಾಯಕ್ಕೆ ಬರುವವರೆಗೆ ಪ್ರಯತ್ನಿಸುತ್ತಲೇ ಇರಬೇಕೆಂಬ ನಿರ್ಣಯದಿಂದಾಗಿ ಸಹಜವಾಗಿ ಒಂದು ನಿರ್ಧಾರಕ್ಕೆ ಬರುವುದಕ್ಕೆ ಅಡಚಣೆಗಳಿರುತ್ತಿದ್ದವು. ಹೀಗಾಗಿ ಇಡೀ ಪ್ರಕ್ರಿಯೆಗೆ ಮೂರು ವರ್ಷಗಳನ್ನೇ ತೆಗೆದುಕೊಂಡದ್ದು ಅನಿವಾರ್ಯವಾಗಿತ್ತು. ನಾನಾ ವಿಧದ ಉಪವಾಕ್ಯಗಳಿಗೆ (ಕ್ಲಾಸಸ್) ಒಟ್ಟು ೭,೬೩೫ ತಿದ್ದುಪಡಿಗಳನ್ನು ಸೂಚಿಸಲಾಯಿತು. ಇವುಗಳಲ್ಲಿ ೨,೪೭೩ ಮಾತ್ರ ವಾಸ್ತವವಾಗಿ ಮಂಡಿತವಾದವು. ಹೀಗಿದ್ದರೂ ಇದೆಲ್ಲದರ ಕೊನೆಗೆ, ಈ ವಿಧಾನದಿಂದ ಉತ್ಪತ್ತಿಯಾದ ಸಂವಿಧಾನವನ್ನು ಇಡೀ ಸಭೆ ತನ್ನದೆಂದು ಮತ್ತು ಈ ಸಭೆಯ ಮೂಲಕ ಇಡೀ ದೇಶ ಕೂಡ ಒಪ್ಪಿಕೊಂಡಿತು.

ಎಲ್ಲಕ್ಕೂ ಮಿಗಿಲಾಗಿ ಯಾವುದೇ ಭಾರತೀಯ ಸಂವಿಧಾನವನ್ನು ನಿಜವಾಗಿಯೂ ಒಮ್ಮತದ್ದಾಗಿ ಮಾಡಿದ್ದು ಎಂದರೆ, ರಾಷ್ಟ್ರೀಯ ಆಂದೋಲನ. ಇದು ಅದರ ಹಲವು ದಶಕಗಳ ದೀರ್ಘಾವಧಿಯಲ್ಲಿ ಸಂಸತ್ತೀಯ ಪ್ರಜಾತಂತ್ರ (ಪಾರ್ಲಿಮೆಂಟರಿ ಡೆಮಾಕ್ರಸಿಸಂ), ಗಣತಂತ್ರೀಯ ಮನೋಭಾವ (ರಿಪಬ್ಲಿಕನಿಸಂ), ನಾಗರೀಕ ಸ್ವಾತಂತ್ರ್ಯಗಳು ಮತ್ತು ಸಾಮಾಜಿಕ ಹಾಗೂ ಆರ್ಥಿಕ ನ್ಯಾಯಗಳ ಕಲ್ಪನೆಗಳನ್ನು ಜನಪ್ರಿಯಗೊಳಿಸಿತ್ತು. ಇದರ ಪರಿಣಾಮವಾಗಿ ಭಾರತದ ಜನರು ಈ ಮೌಲ್ಯಗಳನ್ನು ವಿದೇಶಿ ಹೇರಿಕೆಗಳಾಗಿರದೆ ಅವು ತಮ್ಮವೇ ಎಂದು ಕಂಡುಕೊಳ್ಳಲು ಪ್ರಾರಂಭಿಸಿದ್ದರು. ಇದರಿಂದಾಗಿ ಭಾರತೀಯ ಸಂವಿಧಾನವು ಮೇಲ್ತುದಿಯ ಕೆಲವೇ ಜನರದ್ದಲ್ಲ ಎಂದು ಸರಿಯಾಗಿಯೆ ಕಾಣಲಾಯಿತು.

ಹಿಂದೊಮ್ಮೆ ತಿರುಗಿ ನೋಡಿದಾಗ...

ಹಾಗಾದರೆ ಈ ಸಂವಿಧಾನವು ಭಾರತೀಯ ಸಮಾಜ ಮತ್ತು ಆಡಳಿತ ವ್ಯವಸ್ಥೆಯನ್ನು ಪರಿವರ್ತಿಸುವ ನೀಲನಕ್ಷೆಯಾಗಿ ಹೇಗೆ ಕೆಲಸಮಾಡಿದೆ? ಪರಿವರ್ತನೆಯ ನಡೆ ನಿಧಾನ ಗತಿಯದ್ದಾಗಿದೆ ಎಂಬುದರ ಬಗ್ಗೆ ಅನುಮಾನವಿಲ್ಲ. ಆದರೆ ಈ ಪರಿವರ್ತನೆಯನ್ನು ಆಗುವಂತೆ ಮಾಡಬೇಕಾಗಿರುವುದು ಜನರೇ. ಸಂವಿಧಾನವು ಸಬಲೀಕರಣಗೊಳಿಸುವ ಪಾತ್ರವನ್ನು ಮಾತ್ರ ನಿರ್ವಹಿಸಬಲ್ಲದು. ಸಂವಿಧಾನಗಳು ತಾವಾಗಿಯೇ ಕೆಲಸ ಮಾಡಲಾರವು. ಅವುಗಳನ್ನು ಕೆಲಸಮಾಡುವಂತೆ ಮಾಡಬೇಕು. ಬಹಳ ಅಗತ್ಯವಾಗಿರುವ ಪರಿವರ್ತನೆ ಸಂಭವಿಸಿಲ್ಲದಿದ್ದರೂ, ಸಮಾಜದ ಅಂಚಿನಲ್ಲಿರುವ ಜನರು ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಲು ಸಂಘಟಿತ ಹೋರಾಟಗಳನ್ನು ನಡೆಸಲು ಮತ್ತು ಸಾಮಾಜಿಕ ಸವಲತ್ತುಗಳಲ್ಲಿ ಪಾಲು ಪಡೆಯಲು ಈ ಸಂವಿಧಾನವು ಸಾಕಷ್ಟು ಅವಕಾಶವನ್ನು ಸೃಷ್ಟಿಸಿದೆ ಎಂಬದನ್ನು ಅಲ್ಲಗಳೆಯಲಾಗದು.

ಭಾರತದ ಸಂವಿಧಾನದ ಯಶಸ್ಸುಗಳಲ್ಲಿ ಒಂದೆಂದರೆ ಸಂಘರ್ಷಮಯ ಸನ್ನಿವೇಶಗಳಲ್ಲಿ ಅದು ಮಧ್ಯಮ ಮಾರ್ಗವೊಂದನ್ನು ಗುರುತಿಸಿಕೊಡಬಲ್ಲ ಅದರ ಸಾಮರ್ಥ್ಯ. ಸ್ಥಿರವಾಗಿರುವುದು ಮತ್ತು ಬದಲಾಗದಿರುವ ಸ್ಥಿತಿ ಹಾಗೂ ಬಹಳ ಚಂಚಲವಾಗಿರುವ ಇನ್ನೊಂದು ಸ್ಥಿತಿ. ಇವುಗಳೆರಡರ ನಡುವೆ ಇರುವ ಮಧ್ಯದ ಮಾರ್ಗ ಇದಕ್ಕೊಂದು ಪರಿಹಾರ.. ನಿಜವಾದ ಸವಾಲಿರುವುದು ಸಂವಿಧಾನದ ವಾಚ್ಯಾರ್ಥ ನಿಜವಾದ ಸಾಮಾಜಿಕ ಬದಲಾವಣೆಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದು ಮತ್ತು ನಿಜವಾದ ಸಾಮಾಜಿಕ ಬದಲಾವಣೆಯಾಗುತ್ತಿರುವ ಸಂದರ್ಭಗಳನ್ನು ಗಮನಿಸಿ ಸಂವಿಧಾನವು ತನ್ನನ್ನು ತಾನೇ ಬದಲಾಯಿಸಿಕೊಳ್ಳುವಂತಾಗುವುದು.

ಕೊನೆಯದಾಗಿ, ನಿಜವಾದ ದೊಡ್ಡ ಸವಾಲೆಂದರೆ, ಸಾಮಾಜಿಕ ಕಾನೂನಾತ್ಮಕ ನಿಯಂತ್ರಣಗಳಿಂದ ಬಿಡುಗಡೆಗೊಳಿಸುವ ಕಡೆಗೆ ತೀವ್ರವಾಗಿ ವಾಲುವ ಮತ್ತು ಪಾರಂಪರಿಕ ಸಾಮಾಜಿಕ ವ್ಯವಸ್ಥೆಯಲ್ಲೆ ಬೇರುಬಿಟ್ಟುಕೊಂಡಿರುವುದರ ಕಡೆಗೆ ವಾಲುವ ನಡುವೆ ಒಂದು ಮಧ್ಯಮ ಮಾರ್ಗವನ್ನು ಕಂಡುಕೊಳ್ಳುವುದು. ನಿಜವಾದ ದ್ವಂದ್ವ ಎಂದರೆ ಇದು. ಪರಿವರ್ತನಶೀಲವಾಗಬೇಕಾದರೆ ಈ ನೀಲನಕ್ಷೆ ಬಿಡುಗಡೆಯ ಪರವಾಗಿರಬೇಕು. ನಿಜವಾಗಿ ಬಿಡುಗಡೆಯ ಪರವಾಗಿರುವ ದಾಖಲೆಯು ಪೂರ್ತಿ ಪ್ರಾತಿನಿಧ್ಯವನ್ನು ಹೊಂದಿರುವುದಿಲ್ಲ. ಇನ್ನೊಂದು ಕಡೆ, ಅದು ಹಳೆಯಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿದ್ದರೆ ಅದು ಪರಿವರ್ತನಶೀಲತೆಯನ್ನು ಕಳೆದುಕೊಳ್ಳುತ್ತದೆ.

ಪ್ರಾಯಶಃ ಇದು ಭಾರತದ ಸಂವಿಧಾನದ ಅತಿ ದೊಡ್ಡ ಶಕ್ತಿ ಮತ್ತು ಸಾಧನೆಯೆಂದರೆ, ಅದು ಭಾರತೀಯ ಪರಿಸ್ಥಿತಿಗಳಲ್ಲಿ ಸಾಕಷ್ಟು ಬೇರುಬಿಟ್ಟಿದೆ

(೧೨ನೇ ಪುಟಕ್ಕೆ

ಸಂವಿಧಾನದತ್ತ ನೋಟ-೨

ನಮ್ಮ ಸಂವಿಧಾನದ ರಾಷ್ಟ್ರ ಕಲ್ಪನೆ: ಕೆಲ ಸಂದಿಗ್ಧಗಳು

-ಡಾ. ಬಂಜಗೆರೆ ಜಯಪ್ರಕಾಶ್



ನಮ್ಮ ಸಂವಿಧಾನವನ್ನು ಒಕ್ಕೂಟ ತತ್ವ ಮತ್ತು ಏಕೀಕೃತ ರಾಷ್ಟ್ರ ತತ್ವದ ಒಂದು ಸಮತೋಲನ ಸಾಧಿಸಿ ರಚಿಸಲಾಗಿದೆ ಎಂದು ಹೇಳಲಾಗುತ್ತಿದ್ದರೂ, ಅದರ ಈವರೆಗಿನ ಕಾರ್ಯಶೀಲತೆ ಅದು ಏಕೀಕೃತ ರಾಷ್ಟ್ರ ತತ್ವಕ್ಕೇ ಒತ್ತುಕೊಟ್ಟಿರುವ ಮತ್ತು ಅದನ್ನು ಬಲಗೊಳಿಸುವಂತಹ ಅವಕಾಶಗಳನ್ನು ನಿರ್ಮಿಸಿರುವುದು ಇಂದು ರಾಷ್ಟ್ರೀಯತೆಯ ಹೆಸರಿನಲ್ಲಿ ನಮ್ಮ ಪಾರಂಪರಿಕ ಪ್ರಾದೇಶಿಕ ಭಾಷೆ, ಸಂಸ್ಕೃತಿ ಮತ್ತು ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ಆದ್ಯತೆಗಳ ಸ್ವಾತಂತ್ರ್ಯವನ್ನೂ ಕುಗ್ಗಿಸುವ ಪ್ರಯತ್ನಗಳಿಗೆ ಪೂರಕವಾಗಿ ಪರಿಣಮಿಸಿದೆ. ಈ ಲೇಖನ ಇಂತಹ ಸಂದಿಗ್ಧತೆ ಮತ್ತು ಅವುಗಳ ಹಿನ್ನೆಲೆಯನ್ನು ಚರ್ಚಿಸುವ ಪ್ರಯತ್ನ ಮಾಡುತ್ತದೆ-ಸಂ.

• ನವಭಾರತ'ಕ್ಕಾಗಿ ನೀತಿ ಆಯೋಗವು ರೂಪಿಸಿರುವ ಕಾರ್ಯತಂತ್ರದ ವರದಿಯಲ್ಲಿ ಕೆಳಹಂತದ ನ್ಯಾಯಾಧೀಶರನ್ನು ನೇಮಕ ಮಾಡಲು ಅಖಿಲಭಾರತ ನ್ಯಾಯಾಂಗ ಸೇವೆಗಳ ಪರೀಕ್ಷೆ ನಡೆಸಬೇಕು ಹಾಗೂ ನೇಮಕಾತಿ ಪ್ರಕ್ರಿಯೆಯನ್ನು ಕೇಂದ್ರೀಯ ಲೋಕಸೇವಾ ಆಯೋಗಕ್ಕೆ ವಹಿಸಬೇಕು ಎಂದು ಅದು ತಿಳಿಸಿದೆ. ಈ ಪ್ರಸ್ತಾವನೆಗೆ ಒಂಬತ್ತು ಹೈಕೋರ್ಟ್‌ಗಳು ವಿರೋಧವನ್ನು ವ್ಯಕ್ತಪಡಿಸಿದ್ದವು.

• 'ಗ್ರಾಹಕರ ರಕ್ಷಣಾ ಮಸೂದೆ ೨೦೧೮'ಕ್ಕೆ ಲೋಕಸಭೆ ಒಪ್ಪಿಗೆ – ಈ ಮಸೂದೆಯ ಪ್ರಕಾರ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಗ್ರಾಹಕರ ವ್ಯಾಜ್ಯಗಳ ನೇಮಕಾತಿಗೆ ಕೇಂದ್ರ ಸರ್ಕಾರಕ್ಕೆ ಪರಮಾಧಿಕಾರ ಒದಗಲಿದೆ. ಈವರೆಗೆ ರಾಜ್ಯ ಮತ್ತು ಜಿಲ್ಲಾ ಗ್ರಾಹಕರ ಆಯೋಗಗಳ ನೇಮಕಾತಿ ಹೈಕೋರ್ಟ್ ನ್ಯಾಯಾಧೀಶರು ಮತ್ತು ರಾಜ್ಯ ಸರ್ಕಾರವು ನೇಮಿಸಿದ ಸಮಿತಿ ಸದಸ್ಯರಿಂದ ನಡೆಯುತ್ತಿತ್ತು.

-ಈ ಎರಡೂ ಸುದ್ದಿಗಳು ಡಿಸೆಂಬರ್ ೨೧ರ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿವೆ. ಭಾರತವನ್ನು ಸಂಪೂರ್ಣ ಏಕೀಕೃತ ಒಕ್ಕೂಟವನ್ನಾಗಿ ರೂಪಿಸಬೇಕೆನ್ನುವ ಗುಪ್ತ ಕಾರ್ಯತಂತ್ರದ ಮತ್ತೊಂದು ಮುನ್ನಡೆ ಇದಾಗಿದ್ದು, ಭಾರತೀಯ ಸಂವಿಧಾನದ 'ಒಕ್ಕೂಟ ಮತ್ತು ಏಕೀಕೃತ' ಎನ್ನುವ ಮಧ್ಯಮ ನೀತಿಯನ್ನು ತೀರಾ ದುರ್ಬಲಗೊಳಿಸಲಾಗುತ್ತಿರುವುದರ ಮತ್ತೊಂದುಸೂಚನ ಇದು.

ಭಾರತೀಯ ಸಂವಿಧಾನವನ್ನು ರೂಪುಗೊಳಿಸುವಾಗ ಎರಡು ಮುಖ್ಯ ಅಂಶಗಳನ್ನು ರಾಜಕೀಯವಾಗಿ ಮತ್ತು ಆಡಳಿತಾತ್ಮಕವಾಗಿ ಪರಿಗಣಿಸಲಾಗಿತ್ತು. ಬ್ರಿಟಿಷ್ ವಸಾಹತು ಆಳ್ವಿಕೆಯ ಎರಡು ಶತಮಾನಗಳ ಅವಧಿಯಲ್ಲಿ ಭಾರತದಲ್ಲಿ ನಿರ್ಮಾಣಗೊಂಡಿದ್ದ ಅಖಿಲಭಾರತ ವ್ಯಾಪ್ತಿಯ ಭೌತಿಕ ಸಂರಚನೆಗಳು- ಉದಾ: ಅಂಚೆ-ತಂತಿ, ರೈಲ್ವೆ ಮತ್ತು ವಾಯುಯಾನ, ಹೆದ್ದಾರಿಗಳು, ಬಂದರು ಮತ್ತು ನೌಕಾಯಾನ, ಭಾರತೀಯ ಆಡಳಿತಾತ್ಮಕ ಹಾಗೂ ಪೊಲೀಸ್ ಸೇವೆ, ಸೇನಾ ವ್ಯವಸ್ಥೆ, ಹಣಕಾಸು ನಿರ್ವಹಣೆ ಮುಂತಾದವುಗಳು ಹಾಗೂ ವಸಾಹತುಶಾಹಿ ಆಡಳಿತವನ್ನು ವಿರೋಧಿಸುತ್ತಾ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ವಿಭಿನ್ನ ಭಾರತೀಯ ರಾಜ್ಯಗಳ ಜನತೆ ಮತ್ತು ಅವರ ನಾಯಕರ ನಡುವೆ ಏರ್ಪಟ್ಟ ಅಖಿಲ ಭಾರತ ಸಂಘಟನಾತ್ಮಕ ವ್ಯವಸ್ಥೆ; ಜೊತೆಗೆ, ಭಾರತ ಸ್ವಾತಂತ್ರ್ಯ ಎನ್ನುವ ಅಖಂಡ ಕಲ್ಪನೆಯ ರಾಜಕೀಯ ಮನಃಸ್ಥಿತಿ – ಇವುಗಳನ್ನ ಪರಿಗಣಿಸಿ ಭಾರತವನ್ನು ಉಪಯುಕ್ತಕರವಾಗಿ ಜನತೆಯ ಸಂಕ್ಷೇಮ ಸಾಧಿಸಲು ಏಕೀಕೃತ ಅಂಶಗಳನ್ನು ಅಳವಡಿಸಿಕೊಳ್ಳಲಾಯಿತು.

ಅದೇ ಸಮಯದಲ್ಲಿ ಬ್ರಿಟಿಷ್ ಅಳ್ವಿಕೆಯ ಕಾಲದಲ್ಲಿ ದೊರೆತ ಇಂಗ್ಲಿಷ್ ಶಿಕ್ಷಣದಿಂದ ಜಾಗೃತಗೊಂಡ ದೇಶಭಾಷೆಗಳ ರಕ್ಷಣೆ ಹಾಗೂ ಪ್ರಾದೇಶಿಕ ಹಿತಾಸಕ್ತಿಗಳ ಸಂಪೋಷಣೆ ಎಂಬ ಭಾವನೆಯಡಿಯಲ್ಲಿ ಉಧೃತವಾಗಿ ಬೆಳೆದ ಭಾಷಾವಾರು ರಾಜ್ಯಗಳ ರಾಷ್ಟ್ರೀಯತಾ ಆಶೋತ್ತರಗಳನ್ನು ಪರಿಗಣನೆಯಲ್ಲಿಟ್ಟುಕೊಂಡು ಪ್ರಾದೇಶಿಕ ಆಡಳಿತ ಘಟಕಗಳ, ಸರ್ಕಾರಗಳ ಸ್ಥಾಪನೆ ಮತ್ತು ಸೇವಾ ವ್ಯವಸ್ಥೆಯ ನಿರ್ವಹಣೆಗಾಗಿ ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಸಂಯುಕ್ತ (ಒಕ್ಕೂಟ) ಗಣರಾಜ್ಯ ಮಾದರಿಯ ಅಂಶಗಳನ್ನು ಸೇರಿಸಲಾಯಿತು. ಅದರ ಜೊತೆಗೇ ಕೇಂದ್ರ ಮತ್ತು ರಾಜ್ಯಗಳೆರಡರ ಸಹಭಾಗಿತ್ವದಲ್ಲಿ ನಿರ್ವಹಿಸಬಹುದಾದ ಕೆಲವು ಕ್ಷೇತ್ರಗಳನ್ನು ನಿರ್ಧರಿಸಿ ಒಂದು ಸಂಯುಕ್ತ ಪಟ್ಟಿಯನ್ನು ಸಂವಿಧಾನದಲ್ಲಿ ಅಳವಡಿಸಲಾಯಿತು. ಅದರಿಂದ ಭಾರತೀಯ ಭೂಖಂಡದ ಸಂಕ್ಷೇಮವನ್ನು ನಿರ್ವಹಿಸುವುದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರ ಜಂಟಿ ಜವಾಬ್ದಾರಿಯನ್ನಾಗಿ ಅಂಗೀಕರಿಸಲಾಯಿತು.

ಈ ನಡುವೆ ಸ್ವಾತಂತ್ರ್ಯಾನಂತರದಲ್ಲಿ ಸಂಯುಕ್ತ ಗಣರಾಜ್ಯ ವ್ಯವಸ್ಥೆಯ ಬಲಪಡಿಸುವಿಕೆಗಾಗಿ ದೇಶೀಭಾಷಾ ರಾಜ್ಯಗಳು, ಅವುಗಳಲ್ಲಿ ಮುಂಚೂಣಿಗೆ ಬಂದ ಪ್ರಾದೇಶಿಕ ಪಕ್ಷಗಳು ಕೂಗು ಹಾಕುತ್ತಾ ಬಂದವು. ೮೦ರ ದಶಕದಿಂದೀಚೆಗೆ ಕೆಲವು ರಾಜ್ಯಗಳು ಭಾರತದ ಒಕ್ಕೂಟದಿಂದ ಹೊರನಡೆದು ಸ್ವತಂತ್ರ ದೇಶ ರಚಿಸಿಕೊಳ್ಳುವ ಹೋರಾಟಗಳನ್ನೂ ನಡೆಸಿದವು. ಇವುಗಳ ಹಿನ್ನೆಲೆಯಲ್ಲಿ ಬಲಿಷ್ಠ ಭಾರತ ನಿರ್ಮಾಣ ಎಂದರೆ ಮತ್ತಷ್ಟು ಏಕೀಕೃತವಾದ ರಾಜಕೀಯ ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು ಎನ್ನುವ ಮನಃಸ್ಥಿತಿಗೆ ಅಖಿಲಭಾರತ ವ್ಯಾಪ್ತಿಯ ರಾಜಕೀಯ ಪಕ್ಷಗಳು ಬಂದು ತಲುಪಿದವು.

ಪ್ರತ್ಯೇಕತಾವಾದಿ ಹೋರಾಟಗಳು ಬೆಳೆದದ್ದೇ ಈಗಾಗಲೇ ಸಂವಿಧಾನದಲ್ಲಿದ್ದ ಏಕೀಕೃತ ವ್ಯವಸ್ಥೆಯ ಅಂಶಗಳನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ದುರುಪಯೋಗಪಡಿಸಿಕೊಂಡಿದ್ದರಿಂದ ಹಾಗೂ ಭಾಷೆ, ಸಂಸ್ಕೃತಿ ಮತ್ತು ಇತಿಹಾಸಗಳಿಗೆ ಸಂಬಂಧಪಟ್ಟ ಪ್ರಾದೇಶಿಕ ಆಶೋತ್ತರಗಳನ್ನು ಪರಿಗಣಿಸದೆ ಅಖಿಲ ಭಾರತ ಬಂಡವಾಳಿಗರ ಹಿತಾಸಕ್ತಿಯನ್ನೂ, ಅವರ ಔದ್ಯಮಿಕ ಲಾಭದ ಹಿತಾಸಕ್ತಿಯನ್ನೂ ಈಡೇರಿಸಲು ಪ್ರಯತ್ನಿಸಿದ್ದರಿಂದ ಎಂಬ ಅಂಶವನ್ನು ಮರೆಯಲ್ಲಿಡಲಾಯಿತು. ಏಕೀಕೃತ ಅಂಶಗಳ ದುರ್ಬಳಕೆಯಿಂದ ರಾಜ್ಯ ರಾಜ್ಯಗಳ ನಡುವಿನ ಅಭಿವೃದ್ಧಿಯಲ್ಲಿ ತೀವ್ರವಾದ ಅಸಮತೋಲನ ಏರ್ಪಟ್ಟಿತ್ತು.

ಈಗ ಪ್ರತ್ಯೇಕತಾವಾದಿ ಹೋರಾಟಗಳು ಕಾಶ್ಮೀರ ಹೊರತುಪಡಿಸಿ ಇತರೆಡೆಗಳಲ್ಲಿ ತಣ್ಣಗಾಗಿವೆ. ಇದಕ್ಕೆ ಕಾರಣ ಅವುಗಳ ಸ್ವಾಯತ್ತತೆಯ ಅಶಯಗಳು ಈಡೇರಿದವು ಎಂದಲ್ಲ. ಬದಲಾಗಿ, ಬದಲಾದ ಆರ್ಥಿಕ ಮತ್ತು ವಾಣಿಜ್ಯಗಳ ವ್ಯವಸ್ಥೆಯಲ್ಲಿ, ಜಾಗತೀಕರಣದ ಚೌಕಟ್ಟಿಗೆ ಭಾರತ ಸೇರಿಕೊಂಡ ನಂತರ ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ, ತಂತ್ರಜ್ಞಾನ ಮತ್ತು ಬಂಡವಾಳ ಹೂಡಿಕೆಯ ವಿಷಯಗಳಲ್ಲಿ ಒಂದೇ ಸಮನೆ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಯೂರೋಪ್, ಅಮೆರಿಕಾ ದೇಶಗಳ ಹಿಡಿತ ಹೆಚ್ಚುತ್ತಲೇ ಹೋಗಿ ಅವುಗಳ ಅವಲಂಬನೆ ರಾಜ್ಯವ್ಯಾಪ್ತಿಯನ್ನು ಮೀರಿ ಜಾಗತಿಕ ವ್ಯಾಪ್ತಿಯನ್ನು ಪಡೆದುಕೊಂಡಿದ್ದರಿಂದ ರಾಜ್ಯ ಸರ್ಕಾರಗಳು ಹೆಚ್ಚಿನ ಪಾತ್ರವಿಲ್ಲದೆ ತಣ್ಣಗಿರುವುದನ್ನು ಅನಿವಾರ್ಯವಾಗಿಸಿತು. ಬಹುಪಾಲು ಎಡಪಂಥೀಯ ಮತ್ತು ಪ್ರಜಾಪ್ರಭುತ್ವವಾದಿ ಚಿಂತಕರು, ಲೇಖಕರು ಈ ಮೊದಲಿನಿಂದ ಒಂದು ವಿಶ್ಲೇಷಣೆಯಾಗಿ ಹೇಳುತ್ತಲೇ ಬಂದಿದ್ದ 'ರಾಜ್ಯ ಸರ್ಕಾರಗಳನ್ನು ಮುನಿಸಿಪಾಲಿಟಿಗಳ ಮಟ್ಟಕ್ಕೆ ಇಳಿಸಲಾಗುತ್ತಿದೆ' ಎಂಬ ಮಾತು ಇವತ್ತು ಕೇವಲ ವಿಶ್ಲೇಷಣೆಯ ಮಾತಾಗಿ ಉಳಿಯದೆ ವಾಸ್ತವಿಕವೆನ್ನುವ ಸತ್ಯವನ್ನು ನಾವು ಒಪ್ಪಿಕೊಳ್ಳುವಂತೆ ಮಾಡಿದೆ.

ಅಖಿಲಭಾರತ ಬಂಡವಾಳಿಗರ ರಾಜಕಾರಣ

ಸಂಯುಕ್ತ ವ್ಯವಸ್ಥೆ ಮತ್ತು ಏಕೀಕೃತ ವ್ಯವಸ್ಥೆಯ ನಡುವಿನ ಹಗ್ಗಜಗ್ಗಾಟ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ನಡೆಯುತ್ತಲೇ ಬಂದಿದ್ದು, ಸಂವಿಧಾನ ರಚನೆಯ ಕಾಲದಲ್ಲಿ ತೀವ್ರ ಚರ್ಚೆಗೆ ಮತ್ತು ಪರಾಮರ್ಶೆಗೆ ಗುರಿಯಾಗಿತ್ತು. ಅದರ ಹಿನ್ನೋಟದ ಬಗ್ಗೆ ಪಾಲಿಟಿಕ್ಸ್ ಅಂಡ್ ಲಾಂಗ್ವೇಜ್ ಕೃತಿಯಲ್ಲಿ ವೈ ಡಿ ಫಡ್ಕೆ ಈ ಅಂಶವನ್ನು ಉಲ್ಲೇಖಿಸಿದ್ದಾರೆ. ಆ ಕೃತಿ ಹೇಳುವ ಪ್ರಕಾರ ಕಾಂಗ್ರೆಸ್‌ನ ಬಹುಪಾಲು ಮುಂಚೂಣಿ ನಾಯಕರು ಭಾಷಾವಾರು ಪ್ರಾಂತ್ಯಗಳ ರಚನೆಯ ಪರವಾಗಿ ಮನಸ್ಸುಳ್ಳವರಾಗಿರಲಿಲ್ಲ.'ಕಾಂಗ್ರೆಸ್‌ನ ಬಹಳ ದೊಡ್ಡ ನಾಯಕರಾಗಿದ್ದ ಗಾಂಧೀಜಿಯವರು ಈ ವಿಷಯದಲ್ಲಿ ತಮ್ಮ ನಿಲುವನ್ನು ಆಗಾಗ ಬದಲಿಸುತ್ತಲೇ ಬಂದರು. ೧೯೨೦ರಲ್ಲಿ ನಾಗಪುರ ಅಧಿವೇಶನದ ಕಾಂಗ್ರೆಸ್ ನಿರ್ಣಯ ಜಾರಿಗೊಳ್ಳುವಾಗ ಗಾಂಧೀಜಿಯವರು ಬಹಳ ಮುಖ್ಯ ಪಾತ್ರ ವಹಿಸಿ ಭಾಷಾವಾರು ಪ್ರಾಂತ್ಯಗಳ ಅನುಸಾರ ಕಾಂಗ್ರೆಸ್‌ನ ಅಂಗರಚನೆಯನ್ನು ಬದಲಿಸಲು ಒತ್ತಾಸೆ ನೀಡಿದ್ದರು. ಆದರೆ ೧೯೪೦ರ ಹೊತ್ತಿಗೆ ಅವರ ಈ ನಿಲುವಿನಲ್ಲಿ ಬದಲಾವಣೆಗಳು ಕಂಡುಬಂದವು.

ಭಾರತದಲ್ಲಿ ಇಂದಿಗೂ ಆರ್ಥಿಕತೆಯನ್ನು, ಹಣಕಾಸು ನೀತಿಗಳನ್ನು ೭೫ ಅತಿದೊಡ್ಡ ಕೈಗಾರಿಕೆ ಮತ್ತು ವಾಣಿಜ್ಯ ಕುಟುಂಬಗಳು ತೀರ್ಮಾನಿಸುತ್ತಿವೆ. ಈ ಬಂಡವಾಳ ಕೇಂದ್ರೀಕರಣವು ಅಖಿಲ ಭಾರತ ಮಾರುಕಟ್ಟೆಯನ್ನು ತನ್ನ ಕಾರ್ಯಾಚರಣೆಯ ರಂಗವನ್ನಾಗಿ ಮಾಡಿಕೊಂಡು ದೇಶದ ವಿವಿಧ ಮುಖ್ಯ ನಗರಗಳಲ್ಲಿ ತನ್ನ ಉದ್ದಿಮೆಗಳನ್ನು ಹರಡಿಕೊಂಡಿದೆ. ಇಂತಹ ದಲ್ಲಾಳಿ ಬಂಡವಾಳಿಗರಿಗೆ ಪ್ರಾದೇಶಿಕ ಸ್ವಾಯತ್ತತೆ ಅಥವಾ ಭಾಷಾ ರಾಷ್ಟ್ರೀಯತೆಯ ಸಮುದಾಯಕ್ಕೆ ಸಾರ್ವಭೌಮತ್ವ ಎನ್ನುವ ವಿಷಯಗಳು ಮಾರಕವಾಗಿ ಕಾಣುತ್ತವೆ. ಅವರಿಗೆ ಏಕೀಕೃತ ಭಾರತವೆಂದರೆ ಏಕೀಕೃತ ಮಾರುಕಟ್ಟೆ, ಏಕೀಕೃತ ವಾಣಿಜ್ಯ ಜಾಲ, ಏಕೀಕೃತ ಸಂಪನ್ಮೂಲ ಹಾಗೂ ಭೌತಿಕ ಸಂರಚನೆ ಪೂರೈಕೆಯ ವ್ಯವಸ್ಥೆ ಹಾಗೂ ಏಕೀಕೃತ ಆಡಳಿತಾತ್ಮಕ ಪರವಾನಗಿಯ ಅನುಕೂಲವಾಗಿ ಕಾಣುತ್ತದೆ ಹಾಗೂ ಅದೇ ಅವರ ಅಸ್ತಿತ್ವದ ಮುಖ್ಯ ತಳಹದಿಯಾಗಿದೆ.

ಈ ದಲ್ಲಾಳಿ ಬಂಡವಾಳಿಗರು ವಸಾಹತು ಆಡಳಿತದ ಕಾಲದಲ್ಲೂ ವಿದೇಶೀ ಸರಕುಗಳ ಸ್ಥಳೀಯ ಮಾರಾಟಗಾರ ಏಜೆಂಟರಾಗಿ, ವಿದೇಶೀ ಬಂಡವಾಳದ ಸ್ಥಳೀಯ ನಿರ್ವಹಣಾ ಪಾಲುದಾರರಾಗಿ ಲಾಭ ಗಳಿಸಿದವರಾಗಿದ್ದಾರೆ. ಆ ಮುಖಾಂತರವೇ ಅಖಿಲ ಭಾರತ ವ್ಯಾಪ್ತಿಯ ಕಾರ್ಯಾಚರಣೆಯನ್ನು ವಸಾಹತುಶಾಹಿ ಆಡಳಿತದ ಕೃಪಾಶ್ರಯದಲ್ಲಿ ಪಡೆದುಕೊಂಡವರೂ ಆಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟ ವಿಸ್ತೃತವಾಗಿ ಬೆಳೆದಾಗ, ಅದು ರಾಷ್ಟ್ರೀಯ ಹಿತಾಸಕ್ತಿಗಳ ತೀವ್ರಗಾಮಿ ಪ್ರತಿಪಾದಕರ ಕೈಗೆ ಹೋಗಿ ವಸಾಹತುಶಾಹಿ ಬಂಡವಾಳ ಮತ್ತು ಉದ್ದಿಮೆಗಳ ರಾಷ್ಟ್ರೀಕರಣಗೊಳ್ಳುವ ಅಪಾಯವನ್ನು ತಪ್ಪಿಸುವುದಕ್ಕಾಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ, ಇವರ ಹಿತಾಸಕ್ತಿಗಳ ಜೊತೆಗೆ ಸಮೀಕರಣ ಹೊಂದಿದ್ದ ವಲಯವೊಂದಕ್ಕೆ ಸಕ್ರಿಯ ಬೆಂಬಲ ನೀಡಿ, ರಾಜಕೀಯ ಸ್ವಾತಂತ್ರ್ಯವೆನ್ನುವ; ಆದರೆ ಆರ್ಥಿಕ ಪರಿಸ್ಥಿತಿಯ ಯಥಾಸ್ಥಿತಿ ಮುಂದುವರಿಕೆ ಎನ್ನುವ ಸೂತ್ರದಡಿಯಲ್ಲಿ ಭಾರತದ ಸ್ವತಂತ್ರಾನಂತರದ ವ್ಯವಸ್ಥೆ ರೂಪುಗೊಳ್ಳುವುದಕ್ಕೆ ನೆರವಾದರು.

ಇವರೆಲ್ಲರ ಸಮ್ಮತಿಯ ಮೇರೆಗೆ ಈವರೆಗೆ ರಾಜ್ಯಭಾರ ಮಾಡಿದ ವಿವಿಧ ರಾಜಕೀಯ ಪಕ್ಷಗಳ ಸರ್ಕಾರಗಳು ಕೇಂದ್ರದಲ್ಲಿದ್ದಾಗ ದೊಡ್ಡ ವಾಣಿಜ್ಯ ಕುಟುಂಬಗಳ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಬೆಳವಣಿಗೆಗೆ, ಆರ್ಥಿಕ ಲಾಭಕ್ಕೆ ಅಡೆತಡೆಯಾಗದ ಹಾಗೆ, ಅವರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿಯೇ ಭಾರತೀಯ ಸಂವಿಧಾನದ ಸಂಯುಕ್ತ ಗಣರಾಜ್ಯ ಚಹರೆಗಳನ್ನು ದುರ್ಬಲಗೊಳಿಸುತ್ತಾ ಈಗ ಅಂತಿಮವಾಗಿ ಏಕೀಕೃತ ವ್ಯವಸ್ಥೆಯ ಪರಾಕಾಷ್ಠೆಗೆ ತಂದು ಮುಟ್ಟಿಸಿದ್ದಾರೆ.

ಸಂವಿಧಾನದಲ್ಲೇ ಇದೆ ಅಸ್ಪಷ್ಟತೆಗಳ–ಕಾರಣಗಳು

ಭಾರತೀಯ ಒಕ್ಕೂಟ ವ್ಯವಸ್ಥೆಯೆಂಬುದು ನಿಜವಾದ ಅರ್ಥದಲ್ಲಿ ಜಾರಿಗೊಳ್ಳದೆ, ಬಲಗೊಳ್ಳದೆ ಹೋದುದಕ್ಕೆ ಕಾರಣ ಸಂವಿಧಾನದ ಹಲವು ಕಲಮುಗಳಲ್ಲೇ ಇದೆ. ಭಾಷಾವಾರು ರಾಜ್ಯಗಳ ಸ್ವಾಯತ್ತತೆಯ ವಿಷಯವನ್ನು ನಿಸ್ಸಂದಿಗ್ಧವಾಗಿ ಸಂವಿಧಾನ ಅಂಗೀಕರಿಸಲಿಲ್ಲ. ಭಾಷಾವಾರು ರಾಜ್ಯಗಳ ರಚನೆಗೆ ಹಾಗೂ ರಾಜ್ಯ ಸರ್ಕಾರಗಳ ವಿವೇಚನೆಯಡಿಯಲ್ಲಿ ಹಲವು ಕ್ಷೇತ್ರಗಳ ನಿರ್ವಹಣೆಗೆ ಸಂವಿಧಾನ ಅವಕಾಶ ಕಲ್ಪಿಸಿತಾದರೂ ಬೇರೆ ಕೆಲವು ದೇಶಗಳಲ್ಲಿ ಇರುವಂತೆ ಏಕಕಾಲದಲ್ಲಿ ಆಯಾ ರಾಜ್ಯದ ಪೌರತ್ವ; ಅದರ ಜೊತೆಗೆ ಇಡೀ ರಾಷ್ಟ್ರದ ಪೌರತ್ವ ಎನ್ನುವ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಲಿಲ್ಲ. ಹೀಗಾಗಿಯೆ ಕರ್ನಾಟಕವು ತನಗೊಂದು ರಾಜ್ಯ ಬಾವುಟ ಬೇಕೆಂದು ನಿರ್ಣಯಿಸಿದರೂ ಅದನ್ನು ಮಾನ್ಯಗೊಳಿಸುವ ಅಧಿಕಾರ ಕೇಂದ್ರ ಸರ್ಕಾರದ ಕೈಯಲ್ಲಿದೆ. ಭಾಷಾವಾರು ರಾಜ್ಯಗಳ ರಚನೆಯೆಂಬುದು ಪ್ರಧಾನ ಮತ್ತು ಅಧೀನ ಅಸ್ತಿತ್ವಗಳ ಆಡಳಿತಾತ್ಮಕ ಸಂರಚನೆ ಮಾತ್ರವಾಗಿದ್ದು, ಅದರ ನಿಜಾರ್ಥದಲ್ಲಿ ಒಕ್ಕೂಟ ವ್ಯವಸ್ಥೆಯ ಅಂತಃಸತ್ವವನ್ನು ಅಳವಡಿಸಿರಲಿಲ್ಲ ಎನ್ನುವುದು ಇದರಿಂದ ವಿದಿತವಾಗುತ್ತದೆ.

ಈ ಬಗೆಯ ಕೆಲವು ಅಂಶಗಳು ಸ್ಪಷ್ಟವಾಗಿದ್ದರೆ ಆಡಳಿತ, ಶಿಕ್ಷಣ, ಸಾರ್ವಜನಿಕ ರಂಗದ ಉದ್ಯಮ ಮುಂತಾದ ಕ್ಷೇತ್ರಗಳಲ್ಲಿ ರಾಜ್ಯಭಾಷೆಯ ಸ್ಥಾನಮಾನವೇನು ಎಂಬ ಬಗ್ಗೆ ಸಂವಿಧಾನವು ಅಸ್ಪಷ್ಟವಾಗಿದೆ. ಯಾವುದೇ ರಾಜ್ಯದಲ್ಲಿ ನೌಕರಿ ಮಾಡುವ ಕೇಂದ್ರ ಸರ್ಕಾರದ ಉದ್ಯೋಗಿಗೆ ಅಲ್ಲಿನ ಪ್ರಾದೇಶಿಕ ಭಾಷೆಯ ಜ್ಞಾನವಿರಬೇಕು ಎನ್ನುವ ಮಟ್ಟಿಗಿನ ಔಪಚಾರಿಕ ನಿಬಂಧನೆಯನ್ನು ಕಾಲಾನುಸಾರ ಅನುಮತಿಸಲಾಯಿತೇ ಹೊರತು (ಅದೂ ರಾಜ್ಯ ಸರ್ಕಾರಗಳ ಪುನರಾವರ್ತಿತ ಶಾಸನಗಳ ನಂತರ) ಆ ರಾಜ್ಯದ ಯಾವುದೇ ಉದ್ಯಮ ಆಡಳಿತವನ್ನು ಆಯಾ ರಾಜ್ಯ ಭಾಷೆಯಲ್ಲಿಯೇ ನಡೆಸಬೇಕು ಎಂಬ ನಿಯಮವನ್ನು ಇನ್ನೂ ಅಳವಡಿಸಲಾಗಿಲ್ಲ. ಶಿಕ್ಷಣ ರಂಗಕ್ಕೆ ಬಂದರೆ ಸಂವಿಧಾನವು ಭಾಷಾ ಬಳಕೆಯ ವಿಷಯವನ್ನು ಸ್ಪಷ್ಟಗೊಳಿಸಿಲ್ಲ. ಶಿಕ್ಷಣ ಯಾವ ಮಾಧ್ಯಮದಲ್ಲಿರಬೇಕು ಎನ್ನುವ ಅಂಶವನ್ನು ರಾಜ್ಯ ಸರ್ಕಾರವೊಂದೇ ಪೂರ್ಣವಾಗಿ ನಿರ್ಣಯಿಸಲು ಸಂವಿಧಾನದ ಕಲಮುಗಳು ಅವಕಾಶ ನೀಡಿಲ್ಲ. ಶಿಕ್ಷಣವೆನ್ನುವುದು ಸಂಯುಕ್ತ ಪಟ್ಟಿಯ ವಿಷಯವಾಗಿಯೇ ಪರಿಗಣಿತವಾಗಿರುವುದರಿಂದ ಮಗುವಿನ ಶಿಕ್ಷಣ ಯಾವ ಭಾಷೆಯಲ್ಲಿ ನಡೆಯಬೇಕು ಎಂಬ ಬಗ್ಗೆ ಅಂತಿಮ ತೀರ್ಮಾನ ಪೋಷಕರಿಗೆ ಸೇರಿದ್ದು ಎಂಬ ತೀರ್ಪನ್ನು ನೀಡಿದ ಸರ್ವೋಚ್ಚ ನ್ಯಾಯಾಲಯವು ಅಂತಿಮವಾಗಿ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ರಾಜ್ಯ ಸರ್ಕಾರದ ವ್ಯಾಪ್ತಿಯಿಂದ ತೆಗೆದು ಮೂಲಭೂತ ಹಕ್ಕುಗಳ ವ್ಯಾಪ್ತಿಗೆ ವರ್ಗಾಯಿಸಲು ನೆರವಾಗಿದೆ.

ಶಿಕ್ಷಣ ಮೂಲಭೂತ ಹಕ್ಕಾಗಿದ್ದಾಗಲೂ ಅದು ನಡೆಯಬೇಕಾಗಿರುವುದು ವ್ಯಕ್ತಿ ವಿಕಾಸಕ್ಕಾಗಿ ಮಾತ್ರವಲ್ಲದೆ ಅದನ್ನು ಒದಗಿಸುವ ರಾಜ್ಯ ಸರ್ಕಾರವು ತನ್ನ ಆಡಳಿತದಲ್ಲಿ ಪಾಲ್ಗೊಳ್ಳಲು ಹಾಗೂ ಔದ್ಯಮಿಕ ರಂಗದಲ್ಲಿ ಕೊಡುಗೆ ನೀಡಲು ಬೇಕಾದ ಮಾನವ ಸಂಪನ್ಮೂಲವನ್ನು ರೂಪುಗೊಳಿಸುವ ಉದ್ದೇಶಕ್ಕಾಗಿ ಕೂಡ ಅದು ನಡೆದಿರುತ್ತದೆ. ಆದ್ದರಿಂದ ನಾಡಿನ ಮುನ್ನಡೆಯ ಅಗತ್ಯವನ್ನು ಪೂರೈಸಿಕೊಳ್ಳಲು ರಾಜ್ಯ ಸರ್ಕಾರವೊಂದು ಶಿಕ್ಷಣ ತನ್ನ ರಾಜ್ಯಭಾಷೆಯಲ್ಲಿ ಇರಬೇಕೆಂದು ಅಪೇಕ್ಷಿಸುವುದು ಹಾಗೂ ಆದೇಶಿಸುವುದು ಸಂವಿಧಾನದ ಕಲಮುಗಳೊಳಕ್ಕೆ ಸೇರಬೇಕಿತ್ತು. ಮಾತೃಭಾಷಾ ಶಿಕ್ಷಣಕ್ಕೆ ಬೆಂಬಲ ಸೂಚಿಸಿದ ಸಂವಿಧಾನ ಅದನ್ನು ಅದರ ಪ್ರಾಯೋಗಿಕ ಅಳವಡಿಕೆಯಲ್ಲಿ ಆಯಾ ರಾಜ್ಯಭಾಷೆಯನ್ನಾಗಿ ಪರಿಗಣಿಸದಿರುವುದು ಪ್ರಾದೇಶಿಕ ಭಾಷೆಗಳ ಅಸ್ತಿತ್ವಕ್ಕೆ ಗಂಡಾಂತರ ತಂದಿಟ್ಟಿದೆ.

ಒಂದು ರಾಜ್ಯದಲ್ಲಿ ನೆಲೆಸುವ, ಆಸ್ತಿ ಗಳಿಸುವ, ಉದ್ಯಮ ವಹಿವಾಟು ನಡೆಸುವ ವಿಷಯದಲ್ಲಿ, ಉದ್ಯೋಗಾವಕಾಶಗಳ ಪ್ರಶ್ನೆಯಲ್ಲಿ ರಾಜ್ಯದ ಸ್ಥಳೀಯ ನೆಲೆಸಿಗರಿಗೆ ಸಿಗಬೇಕಾದ ಮಾನ್ಯತೆಗಿಂತಲೂ ಅಖಿಲ ಭಾರತ ಪೌರತ್ವದ ಪ್ರಶ್ನೆ, ಭಾರತದ ಅಖಂಡತ್ವದ ಪ್ರಶ್ನೆಯೇ ಪ್ರಧಾನ ಪರಿಗಣನೆಯನ್ನಾಗಿ ಸಂವಿಧಾನವು ಮಾಡಿರುವುದರಿಂದ 'ಮಣ್ಣಿನ ಮಕ್ಕಳ' ಪ್ರಶ್ನೆ ಇಂದಿಗೂ ಬಹುಪಾಲು ರಾಜ್ಯಗಳಲ್ಲಿ ಹೆಡೆಯಾಡುತ್ತಲೇ ಇದೆ.


ಅಂಬೇಡ್ಕರ್ ಅವರನ್ನು ಕಾಡಿದ ಸಂದಿಗ್ಧಗಳು...

ಇಲ್ಲಿ ನಾವು ವಿಶೇಷವಾಗಿ ಗಮನಿಸಬೇಕಾದ ಅಂಶವೊಂದಿದೆ. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಿ ಆರ್ ಅಂಬೇಡ್ಕರ್ ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ಅಪಾರ ನಂಬಿಕೆ ಇತ್ತಾದರೂ ಅದನ್ನು ಒಂದು ಸಂಯುಕ್ತ ವ್ಯವಸ್ಥೆಯನ್ನಾಗಿ ಏರ್ಪಡಿಸುವ ಬಗ್ಗೆ ಅಂತಹ ಒಲವುಳ್ಳವರಾಗಿರಲಿಲ್ಲ ಎನ್ನುವುದನ್ನು ಅವರ ಬರವಣಿಗೆಗಳಿಂದ ಗ್ರಹಿಸಬಹುದು. ಭಾಷಾವಾರು ರಾಜ್ಯಗಳ ಸ್ವಾಯತ್ತತೆ ಹಾಗೂ ಪ್ರಬಲ ಸಂಯುಕ್ತ ರಾಜ್ಯ ವ್ಯವಸ್ಥೆಯ ನಿರ್ಮಾಣ ಎಂದರೆ ಆಯಾ ರಾಜ್ಯಗಳಲ್ಲಿ ಬಹುಸಂಖ್ಯಾತವೂ, ಬಲಾಢ್ಯವೂ ಆಗಿರುವ ಊಳಿಗಮಾನ್ಯ ಮಧ್ಯಮ ಜಾತಿಗಳ ಕೈಗೆ ಆಡಳಿತವನ್ನು ಒಪ್ಪಿಸುವುದೆಂದೇ ಅರ್ಥ ಎಂದು ಅವರು ಭಾವಿಸಿರಲು ಕಾರಣಗಳಿವೆ. ಆದ್ದರಿಂದಲೇ ಅಖಿಲಭಾರತ ವ್ಯಾಪ್ತಿಯ ಆಡಳಿತ ವ್ಯವಸ್ಥೆ ಭಾರತೀಯ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಇದ್ದು, ಈ ಉನ್ನತ ಹಂತದ ಸಂರಚನೆಗೆ ಅಧೀನವಾಗಿ ಅಥವಾ ಪೂರಕವಾಗಿ ಮಾತ್ರ ರಾಜ್ಯಗಳ ರಾಜಕೀಯಾಡಳಿತ ಇರುವುದು ಕ್ಷೇಮಕರ ಎನ್ನುವುದು ಬಹುಶಃ ಅವರ ನಿಲುವಾಗಿತ್ತು. ಅಖಿಲಭಾರತ ವ್ಯಾಪ್ತಿಯ ರಾಜಕಾರಣ ಅಂತಿಮವಾಗಿ ಆಯಾ ರಾಜ್ಯಗಳ ಬಲಾಢ್ಯ ಭೂಮಾಲೀಕ ಜಾತಿಗಳ ಅಪೇಕ್ಷೆಗನುಗುಣವಾಗಿಯೇ ಏಕೀಕೃತ ವ್ಯವಸ್ಥೆಯಲ್ಲಿಯೂ ನಡೆಯಬಹುದಾಗಿರುವ ಸಂಭಾವ್ಯತೆಯನ್ನು ಅವರು ಊಹಿಸಿರಲಿಲ್ಲವೇನೋ.

ಇದನ್ನು ಅಂಬೇಡ್ಕರ್ ಅವರೊಬ್ಬರೇ ನಿರ್ಣಯಿಸಲು ಸಾಧ್ಯವಿತ್ತು ಎಂದಲ್ಲ. ಆದರೆ ಅಂತಹದೊಂದು ಸಾಧ್ಯತೆ ಭಾಷಾರಾಷ್ಟ್ರೀಯತೆಗಳಿಗೆ ತಪ್ಪಿಹೋಗಿದ್ದಂತೂ ನಿಜ. ಕಡೆಯ ಪಕ್ಷ ಮೂಲಸಂವಿಧಾನದಲ್ಲಿ ಆಯಾ ರಾಜ್ಯದಿಂದ ರಾಜ್ಯಸಭಾ ಸದಸ್ಯರಾಗುವವರು ಆಯಾ ರಾಜ್ಯದ ನಿವಾಸಿಗಳೇ ಆಗಿರಬೇಕೆಂಬ ನಿಯಮವಾದರೂ ಇತ್ತು. ಅದು ವಾಜಪೇಯಿಯವರ ಆಡಳಿತ ಕಾಲದಲ್ಲಿ ಆ ನಿಯಮವೂ ತಿದ್ದುಪಡಿಗೊಳಗಾಗಿ, ಆ ನಿಯಮ ರದ್ದಾಯಿತು. ರಾಜ್ಯಗಳ ಹಿತಾಸಕ್ತಿಗಳನ್ನು ಕಾಪಾಡುವ ಆಯಾ ರಾಜ್ಯಗಳ ಪ್ರತಿನಿಧಿಗಳ ಸಭೆಯಾಗಿ ಸಂವಿಧಾನದಲ್ಲಿ ಅಳವಡಿಕೆಯಾಗಿದ್ದ 'ರಾಜ್ಯಸಭೆ' ರಾಜ್ಯಗಳ ನಿಯಂತ್ರಣದಿಂದ ಕೈ ತಪ್ಪಿ ಹೋಯಿತು.ಭಾರತೀಯ ಸಂಯುಕ್ತ ವ್ಯವಸ್ಥೆಯ ಸತ್ವ ಹೀಗೆ ನಿಸ್ಸಾರಗೊಳ್ಳುತ್ತಾ ಹೋಯಿತು.

ಸಂವಿಧಾನದಲ್ಲಿ ಹೇಳಿರುವ ರಾಜ್ಯಪಟ್ಟಿಯ ಹಲವು ಅಂಶಗಳು ಹಾಗೆಯೇ ಇವೆ. ಚುನಾವಣೆ ನಡೆದು ರಾಜ್ಯ ಸರ್ಕಾರಗಳ ರಚನೆಯೂ ಆಗುತ್ತಿದೆ. ಪ್ರಾದೇಶಿಕ ಹಿತಾಸಕ್ತಿಗಳ ಪ್ರಶ್ನೆಯನ್ನು ಪ್ರತ್ಯಕ್ಷವಾಗಿ ಪ್ರತಿಪಾದಿಸುತ್ತಲೇ ಪಕ್ಷಗಳು ಹಲವು ರಾಜ್ಯಗಳಲ್ಲಿ ಇವು ಅಧಿಕಾರಕ್ಕೆ ಬರುತ್ತಲೂ ಇವೆ. ಆದರೆ ಜಾಗತೀಕರಣ ವ್ಯವಸ್ಥೆಯಲ್ಲಿ ಅವಿಭಕ್ತವಾಗಿ

(೧೨ನೇ ಪುಟಕ್ಕೆ



ಇತಿಹಾಸದ ಕೋಮುವಾದೀಕರಣ; ಸತ್ಯ ಮತ್ತು ಮಿಥ್ಯಗಳು

–ಮನು ಎಸ್. ಪಿಳ್ಳೈ

ಯುವ ಇತಿಹಾಸಕಾರ ಮನು ಈ ತಮ್ಮ ಸಂದರ್ಶನವೊಂದರ ಈ ಪುಟ್ಟ ತುಣುಕಿನಲ್ಲಿ ಮತದ ಗೋಜಿಲ್ಲದೆ ನಡೆದ ನಮ್ಮ ರಾಜಕೀಯ ಇತಿಹಾಸವನ್ನು ಇಂದು ವರ್ತಮಾನದ ರಾಜಕೀಯ ಉದ್ದೇಶಗಳಿಗಾಗಿ ಹೇಗೆ ಮತೀಯಗೊಳಿಸಿ ವಿಕೃತಗೊಳಿಸಲಾಗಿದೆ ಎಂಬುದನ್ನು ಕೆಲ ಸ್ಫೋಟಕ ಮಾಹಿತಿಯ ಮೂಲಕ ನಮ್ಮ ಕಣ್ಣು ತೆರೆಸುವ ಪ್ರಯತ್ನ ಮಾಡಿದ್ದಾರೆ. ನಮ್ಮ ಓದುಗರಿಗಿದು ಕಡ್ಡಾಯ ಓದು–ಸಂ.

ಸುವರ್ಣಯುಗ, ಸುವರ್ಣಯುಗ ಎಂದು ಕನವರಿಸುತ್ತಿದ್ದೇವೆಲ್ಲ. ಅದಿರುವುದು ನಮ್ಮ ತಲೆಗಳಲ್ಲಿ, ನಮ್ಮ ಭ್ರಮೆಗಳಲ್ಲಿ ಮಾತ್ರ. ನಮಗೆಲ್ಲರಿಗೂ ಚರಿತ್ರೆಯನ್ನು ಅತಿ ರಮ್ಯಗೊಳಿಸುವುದು, ರೋಚಕಗೊಳಿಸುವುದು, ಧೀರೋದತ್ತ ನಾಯಕರನ್ನು ಸೃಷ್ಟಿಸುವುದು, ಗತವೈಭವದಿಂದ ಸ್ಫೂರ್ತಿ ಪಡೆಯುವುದು ಬಹಳ ಇಷ್ಟವಾದ ವಿಷಯ, ಪ್ರಿಯ ವಿಷಯ.

ಆದರೆ ಹಿಂದೆ ಬದುಕಿದ್ದವರಾರೂ ನಾವು ಸುವರ್ಣಯುಗದಲ್ಲಿದ್ದೇವೆ ಎಂದು ಭಾವಿಸಿರಲಿಲ್ಲ, ಹಾಗೆ ಜೀವಿಸಲು ಸಾಧ್ಯವೂ ಇರಲಿಲ್ಲ. ಅವರಿಗೆ ಅವರದ್ದೇ ಆದ ಸಮಸ್ಯೆ, ಸವಾಲುಗಳು ಇದ್ದವು. ಆದರೆ ಇತಿಹಾಸ ನಮಗೇಕೆ ಎಂಬ ವಿಶಾಲಾರ್ಥದ ಪ್ರಶ್ನೆಯನ್ನು ಕುರಿತು ಹೇಳುವುದಾದರೆ, ನಮ್ಮ ಸಮಕಾಲೀನ ಜಗತ್ತಿನ ಸ್ಥಿತಿಗತಿ, ನಾವೀಗ ಬದುಕುತ್ತಿರುವ ಸಮಾಜ ಎಲ್ಲವೂ ಗತಕಾಲದಿಂದ ರೂಪಗೊಂಡಿದ್ದು, ನಮಗಿಂತ ಮುಂಚೆ ಆಗಿ ಹೋದ, ವ್ಯಕ್ತಿ, ಸಮುದಾಯಗಳು ಸೃಷ್ಟಿಸಿದ್ದು ಎಂಬ ಸರಳ ಕಾರಣಕ್ಕೆ. ಆ ಕಾಲಘಟ್ಟದ ನೆಲೆಗಟ್ಟುಗಳ ಸ್ವರೂಪ ಎಂಥದ್ದು? ಅದು ಯಾವಾಗ ಶಿಥಿಲಗೊಂಡು ಕುಸಿಯಬಹುದು? ಅದರ ಪ್ರಸಕ್ತ ಸ್ಥಿತಿ ಏನು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಲು ಇತಿಹಾಸ ಮುಖ್ಯವಾಗುತ್ತದೆ. ವಿವಿಧ ಇತಿಹಾಸಕಾರರಿಗೆ ಅವರದ್ದೇ ಆದ ರಾಜಕೀಯ ಒಲವುಗಳಿರುವುದು ಸಹಜ. ವಿಜಯನಗರದ ಸಾಮ್ರಾಜ್ಯ ಪತನದ ಬಗೆಗಿನ ನನ್ನ ಎರಡನೆಯ ಪುಸ್ತಕದಲ್ಲಿ ವಿವರಿಸಿದಂತೆ ೧೫೬೫ರ ತಾಳಿಕೋಟೆ ಯುದ್ಧದಲ್ಲಿ ದಖನ್‌ನ ಮಹಮದೀಯ ಸುಲ್ತಾನರು ಒಟ್ಟಾಗಿ ವಿಜಯನಗರದ ಸರ್ವನಾಶಕ್ಕೆ ಕಾರಣರಾದರು ಎಂಬುದು ಬಹಳ ಹಿಂದಿನಿಂದ ಪ್ರಚಲಿತವಾಗಿದೆ. ಈಗಂತೂ ಧರ್ಮ ರಾಜಕೀಯಕ್ಕೆ ಬಹುಮುಖ್ಯವಾದದ್ದು. ಅಂತೆಯೇ ಚರಿತ್ರೆ ಕೂಡ ರಾಜಕೀಯ ವಸ್ತುವೇ ಆಗಿರುವುದರಿಂದ, ಇದನ್ನು ಯಾವಾಗಲೂ ಹಿಂದು ಮುಸ್ಲಿಂ ಹಣಾಹಣಿ ಎಂದೇ ಪ್ರತಿಬಿಂಬಿಸಲಾಗುತ್ತಿದೆ.

ಮುಸ್ಲಿಮ್ ಸುಲ್ತಾನರೆಲ್ಲರೂ ಒಗ್ಗೂಡುತ್ತಿದ್ದರು. ಹಿಂದೂ ಸಾಮ್ರಾಜ್ಯಗಳ ಮೇಲೆ ಆಕ್ರಮಣ ಮಾಡಿ, ನಾಶಗೊಳಿಸುತ್ತಿದ್ದರು ಎಂಬ ಅತಿ ಸರಳೀಕೃತ ವಾದವನ್ನು ಯಾವ ಇತಿಹಾಸಕಾರರೂ ಒಪ್ಪಲಾಗದ ಮಾತು. ಅದು ಸತ್ಯವೂ ಅಲ್ಲ. ಯಾಕೆಂದರೆ, ತಾಳೀಕೋಟೆ ಯುದ್ಧದಲ್ಲಿ ಮುಂಚೂಣಿಯಲ್ಲಿದ್ದ ವಿಜಯನಗರ ಸಾಮ್ರಾಟ ತನ್ನ ವೃತ್ತಿ ಜೀವನ ಆರಂಭಿಸಿದ್ದು, ಗೋಲ್ಕೊಂಡಾದ ಮುಸ್ಲಿಂ ದೊರೆ ಕುತುಬ್ ಷಾ ಆಸ್ಥಾನದಲ್ಲಿ. ಅಂತೆಯೇ ಅದೇ ಕದನದ ಶತ್ರು ಪಡೆ ಮುನ್ನಡೆಸುತ್ತಿದ್ದ ಕುತುಬ್ ಷಾ, ತನ್ನ ಹದಿಹರೆಯದ ಏಳು ವರ್ಷಗಳನ್ನು ವಿಜಯನಗರದಲ್ಲಿ ಕಳೆದಿದ್ದ. ಅಲ್ಲಿ ತೆಲುಗು, ಸಂಸ್ಕೃತಗಳನ್ನು ಕಲಿಯುತ್ತಾ, ಬೆಳೆದು, ಸ್ಥಳೀಯ ಯುವತಿಯನ್ನು ವರಿಸಿ, ನಂತರ ಗೋಲ್ಕೊಂಡಾಕ್ಕೆ ಮರಳಿ, ತನ್ನ ರಾಜಾಶ್ರಯದಲ್ಲಿ ಮಹಾಭಾರತ ಕುರಿತ ಕಾವ್ಯಗಳ ಪೋಷಕನಾಗಿದ್ದ. ಕ್ಷೇತ್ರಯ್ಯ ಎಂಬ ಕವಿ ಮದುರೈ, ತಂಜಾವೂರುಗಳಿಗೆ ಎಷ್ಟು ಸಾರಿ ಹೋಗಿ ಬರುತ್ತಿದ್ದನೊ, ಹಾಗೆಯೇ ಗೋಲ್ಕೊಂಡಾಕ್ಕೂ ತೆರಳಿ, ಕುತುಬ್ ಷಾನಿಗಾಗಿ ಒಂದು ಲಕ್ಷದ ಐದು ಸಾವಿರ ಪದಂಗಳನ್ನು ರಚಿಸಬಲ್ಲವನಾಗಿದ್ದ.

ತಾಳಿಕೋಟೆ ಯುದ್ಧದಲ್ಲಿ ಆರು ಸಾವಿರ ಮರಾಠಾ ಸೈನಿಕರಿದ್ದು, ಅವರೆಲ್ಲರೂ ಸುಲ್ತಾನಿಗಾಗಿ ಕಾದಾಡುತ್ತಿದ್ದರು. ಇತ್ತ ವಿಜಯನಗರ ಸೇನೆಯ ದಂಡನಾಯಕನಾಗಿದ್ದವನು, ಐನ್ ಉಲ್ ಮುಲ್ಕ್ ಗಿಲಾನಿ ಎಂಬ ಮುಸ್ಲಿಂ. ಹಾಗಾಗಿ ಹಿಂದು–ಮುಸ್ಲಿಂ ಎಂದು ಜನ ವಿಭಜಿಸುವುದು ತೀರಾ ಬಾಲಿಶವಾದುದು. ಇತಿಹಾಸಕಾರರಿಗೆ ಅವರದ್ದೇ ಆದ ಮೂಲಸಾಮಗ್ರಿಗಳಿವೆ ನಿಜ. ಆದರೆ ಗತಕಾಲದ ವ್ಯಕ್ತಿಗಳನ್ನು, ಘಟನೆಗಳನ್ನು ಈ ರೀತಿ ನಿರ್ದಿಷ್ಟ ಚೌಕಟ್ಟಿನಲ್ಲಿ ತುರುಕಬಾರದು ಎಂಬ ಅರಿವು ನಮಗಿದ್ದರೂ, ಇತಿಹಾಸಕಾರರಿಗೆ ಅವರದ್ದೇ ಆದ ರಾಜಕೀಯ ಉದ್ದೇಶಗಳಿಂದ ಈ ರೀತಿ ದಾಖಲಾಯಿತು. ಆದರೆ ವಾಸ್ತವ ಅದಾಗಿರಲಿಲ್ಲ. ಹಾಗಾಗಿ ನಾವು ಚರಿತ್ರೆಯನ್ನು ವಿಚಾರಣೆಗೊಳಪಡಿಸಿ, ವಿಶ್ಲೇಷಿಸಿ, ನಮ್ಮ ಸಮಕಾಲೀನ ಸಂದಿಗ್ಧಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕಿದೆ. ಆದರೆ ಈಗೇನಾಗಿದೆ ಎಂದರೆ, ಬಹಳ ಜನ, ಅದರಲ್ಲೂ ವಿಶೇಷವಾಗಿ ರಾಜಕಾರಣಿಗಳು, ಪಕ್ಷ–ಪ್ರದೇಶಗಳ ಬೇಧವಿಲ್ಲದೆ, ಅವರು ತೀವ್ರ ಎಡ ಪಂಥೀಯರಾಗಿರಲಿ, ಬಲಪಂಥೀಯರಾಗಿರಲಿ, ಯಾರೇ ಆಗಿರಲಿ, ತಮ್ಮನ್ನು, ತಮ್ಮ ನಡೆಗಳನ್ನು, ದುರ್ವರ್ತನೆಗಳನ್ನು, ಹುನ್ನಾರಗಳನ್ನು, ವಿಚಾರಧಾರೆಗಳನ್ನು ನ್ಯಾಯಸಮ್ಮತಗೊಳಿಸಲು ಇತಿಹಾಸವನ್ನು ರಾಜಕೀಯ ದಾಳವನ್ನಾಗಿ ಮಾಡಿಕೊಂಡುಬಿಟ್ಟಿದ್ದಾರೆ. ಆದರೆ ಇತಿಹಾಸವಿರುವುದು ಅದಕ್ಕಲ್ಲವಲ್ಲ. ಇತಿಹಾಸಕ್ಕೆ ತನ್ನದೇ ಆದ ನೆಲೆಗಳಿವೆ, ರೀತಿ ರಿವಾಜುಗಳಿವೆ. ಅದರಿಂದ ನಾವು ಸ್ಫೂರ್ತಿ, ಪ್ರೇರಣೆ ಪಡೆಯಬಹುದೇ ವಿನಃ, ನಮ್ಮ ಆತಂಕಗಳನ್ನು ಚರಿತ್ರೆಯ ಮೇಲೆ ಹೊರಿಸುವುದಾಗಲಿ, ನಮ್ಮ ದೌರ್ಬಲ್ಯ, ಸಮಸ್ಯೆ, ಅಭದ್ರತೆಗಳಿಗೆ ಸಮರ್ಥನೆ ಪಡೆಯಲಾಗಲಿ, ಇಲ್ಲಸಲ್ಲದ ಸಂಗತಿಗಳನ್ನು ಹುಟ್ಟುಹಾಕುವುದಾಗಲಿ ಮಾಡಬಾರದು. ಚರಿತ್ರೆ ಎಂಬುದು ಅದೆಷ್ಟು ಸಂಕೀರ್ಣವೊ, ಅಷ್ಟೇ ಮನಮೋಹಕವೂ ಕೂಡ.

ನನ್ನ 'ರೆಬೆಲ್ ಸುಲ್ತಾನ್' ಪುಸ್ತಕದಲ್ಲಿ ಪ್ರಸ್ತಾಪಿಸಿರುವ ಎರಡನೆಯ ಇಬ್ರಾಹಿಂ ಆದಿಲ್ ಶಾಹಿಯ ವ್ಯಕ್ತಿತ್ವ ಗಮನಾರ್ಹವಾದುದು. ಬಹುತೇಕ ಚರಿತ್ರಕಾರರ ದೃಷ್ಟಿಯಲ್ಲಿ ಈತನೊಬ್ಬ ಸುನ್ನಿ ಮುಸ್ಲಿಮ್ ಸುಲ್ತಾನ. ಆದರೆ ಆತ ರುದ್ರಾಕ್ಷಿ ಮಾಲೆ ಧರಿಸುತ್ತಿದ್ದ, ತನ್ನನ್ನು ಗುರು ಗಣಪತಿ ಮತ್ತು ಸರಸ್ವತಿ ಪುತ್ರ ಎಂದು ಕರೆದುಕೊಳ್ಳುತ್ತಿದ್ದ. ಬಹಳಷ್ಟು ಸಂಖ್ಯೆಯ ಮಹಾರಾಷ್ಟ್ರ ಕವಿಗಳನ್ನು ಪ್ರೋತ್ಸಾಹಿಸಿದ ಅವನ ಆಸ್ಥಾನದಲ್ಲಿ ಬ್ರಾಹ್ಮಣರು, ಮರಾಠರೇ ತುಂಬಿ ಹೋಗಿದ್ದರು. ಆತನ ನೆಚ್ಚಿನ ಮಡದಿ ಮಹಾರಾಷ್ಟ್ರದವಳಾಗಿದ್ದಳು. ಈ ಪುಸ್ತಕದ ಮುಖಪುಟದಲ್ಲಿ ಕಪ್ಪು ವರ್ಣದ ಧೀರನೊಬ್ಬ ಆನೆ ಸವಾರಿ ಮಾಡುವ ಚಿತ್ರವಿದೆ. ನಾನು ಬೆಳೆದಿದ್ದು ಮಹಾರಾಷ್ಟ್ರದಲ್ಲಿ. ಆದರೆ ಭಾರತದ ಈ ಭಾಗದಲ್ಲಿ ಸಾವಿರಾರು ಆಫ್ರಿಕನ್ನರು ವಾಸಿಸುತ್ತಿದ್ದರು ಎಂಬುದು ಬಹುತೇಕ ಮಂದಿಗೆ ಗೊತ್ತೇ ಇಲ್ಲ. ಶಿವಾಜಿಗಿಂತ ಮುಂಚೆ ಇಪ್ಪತ್ತೇಳು ವರ್ಷಗಳ ಕಾಲ ಮೊಘಲರು ದಖನವನ್ನು ಪ್ರವೇಶಿಸದಂತೆ ಪ್ರತಿರೋಧ ಒಡ್ಡಿದ್ದು, ಮಲ್ಲಿಕ್ ಅಂಬರ್ ಎಂಬ ಆಫ್ರಿಕಾ ಮೂಲದವನು. ಈತ ಇಥಿಯೋಪಿಯಾದಲ್ಲಿ ಹುಟ್ಟಿ, ಗುಲಾಮನಾಗಿ ಸೆರೆಯಾಗಿ, ಬಾಗ್ದಾದಿಗೆ ಎಳೆತರಲ್ಪಟ್ಟು, ನಂತರ ಅಲ್ಲಿಂದ ದಖನವನ್ನು ತಲುಪಿ ತನ್ನಿಚ್ಛೆಗೆ ತಕ್ಕಂತೆ ರಾಜರನ್ನು ಪ್ರತಿಷ್ಠಾಪಿಸುವ ಪ್ರಭಾವಶಾಲಿಯಾಗಿ, ತನ್ನಷ್ಟೇ ಕರಿಯಳಾದ ಮಗಳನ್ನು ರಾಜನಿಗೆ ಕೊಟ್ಟು ಮದುವೆ ಮಾಡಿ ಮಹಾರಾಣಿಯನ್ನಾಗಿಸಿದ. ಮಧ್ಯಯುಗದ ಅಹ್ಮದ್ ನಗರದಲ್ಲಿ ಆಫ್ರಿಕಾ ಮೂಲದ ಕರಿಯ ರಾಣಿಯನ್ನು ನೋಡುವಂತಾಯಿತು. ಇಂತಹವನೊಬ್ಬ ಸರಿಸುಮಾರು ಎರಡೂವರೆ ದಶಕಗಳ ಕಾಲ ಮೊಘಲರನ್ನು ಎಷ್ಟರ ಮಟ್ಟಿಗೆ ನಿಯಂತ್ರಿಸಿದ್ದನೆಂದರೆ, ಇವನನ್ನು ಸೋಲಿಸಲಾಗದೇ, ಸಾಮ್ರಾಟ್ ಜಹಾಂಗೀರ್ ರೋಸಿ ಹೋಗಿ, ತಾನು ಬಾಣ ಹೂಡಿ ಮಲ್ಲಿಕ್ ಅಂಬರ್ ಶಿರಚ್ಛೇದ ಮಾಡುವ ಚಿತ್ರಪಟ ರಚಿಸಲು ಆದೇಶಿಸಿದ! ನಿಜ ಜೀವನದಲ್ಲಿ ಮಾತ್ರ ಇದು ಅವನಿಗೆ ಸಾಧ್ಯವಾಗಲೇ ಇಲ್ಲ!!

ವ್ಯಂಗ್ಯವೆಂದರೆ ಶಿವಾಜಿಯ ಅಜ್ಜ, ಮಾಲೋಜಿ, ಮಲ್ಲಿಕ್ ಅಂಬರ್‌ನ ಬಲಗೈ ಬಂಟರಲ್ಲಿ ಒಬ್ಬನಾಗಿದ್ದ. ಎಲ್ಲೋರ ಗುಹೆಗಳ ಬಳಿ ಮಾಲೋಜಿ ಮತ್ತು ಅವನ ಸಹೋದರನ ಸಮಾಧಿಗಳಿವೆ. ನೀವತ್ತ ದೃಷ್ಟಿ ಹರಿಸಿದರೆ, ಮುಸ್ಲಿಂ ಸ್ಮಾರಕಗಳಂತೆ, ಪ್ರಾರ್ಥನಾ ಸ್ಥಳಗಳಂತೆ ಕಾಣುತ್ತವೆ. ಇಸ್ಲಾಮಿಕ್ ಶೈಲಿ ಮಿನಾರ್‌ಗಳು, ಗುಮ್ಮಟಗಳನ್ನು ಹೊಂದಿವೆ. ಆದರೆ ಅದು ಯಾರ ಮೊಮ್ಮಗ ಶಿವಾಜಿಯಾಗಿದ್ದನೊ, ಆ ಇಬ್ಬರೂ ನಿಷ್ಠಾವಂತ ಹಿಂದು ಸೇನಾನಿಗಳ ಸಮಾಧಿ. ಶಿವಾಜಿಯ ಜೀವನ ಚರಿತ್ರೆ ಓದಿದರೆ, ಆತನ ತಂದೆಯೂ ಮೊಘಲರಿಗೆ ಸೇವೆ ಸಲ್ಲಿಸಿದ್ದು ತಿಳಿಯುತ್ತದೆ.

ಅಫ಼ಝಲ್ ಖಾನ್ ಶಿವಾಜಿಯನ್ನು ಕೊಲ್ಲಲು ಬಂದಾಗ, ಶಿವಾಜಿಯ ಪರ ಸಿದ್ದಿ ಇಬ್ರಾಹಿಂ ಎಂಬ ಮುಸ್ಲಿಮ್ ಸೇನಾನಿ ಇದ್ದರೆ, ಅಫ಼ಝಲ್ ಖಾನ್ ಪಡೆಯಲ್ಲಿ ಘೋರ್ಪಡೆ ಮುಂತಾದ ಹಿಂದೂ–ಮರಾಠ ಹೆಸರುಗಳ ಪಟ್ಟಿಯೇ

(೧೨ನೇ ಪುಟಕ್ಕೆ

ಯುವ ಲಹರಿ

ಮಾಧ್ಯಮ ವ್ಯೂಹದ ಮಧ್ಯದಲ್ಲಿ...

–ರವಿಚಂದ್ರ ಚಿಕ್ಕೆಂಪಿಹುಂಡಿ



ಇದು ಕಲಿಗಾಲ ಸ್ವಾಮಿ ಕಲಿಗಾಲ... ಒಂದೊಂದು ಅಸಂಬದ್ಧವಾದ, ಅಸಹಜವಾದ ಘಟನೆ ಕಿವಿಗೆ ಬಿದ್ದಾಗೆಲ್ಲ ಒಂದು ಕಾಲದಲ್ಲಿ ಮಂಟೇಸ್ವಾಮಿ ಹೇಳಿದ್ದ ಕಲಿಗಾಲ ಎಂಬ ಮಾತನ್ನು ಈಗಿನ ನಮ್ಮ ಹಿರಿಯ ಅನುಭಾ(ಭ)ವಿಗಳು ಆಗಾಗ ಪುನರುಚ್ಚರಿಸುತ್ತಲೇ ಇರುತ್ತಾರೆ. ಹೌದು ಇದು ಕಲಿಗಾಲ. ಈಗ ಯದ್ವಾತದ್ವ ಸುದ್ದಿಯಲ್ಲಿರುವುದು ಸೋಷಿಯಲ್ ಮೀಡಿಯ ಎಂಬ ಸನ್ನಿ. ಇದರ ಅಬ್ಬರದ ನಡುವೆ ಸುದ್ದಿ ಮಾಧ್ಯಮದ ಸದ್ದು ಕೀರಲು ದನಿಯಂತೆ ಕೇಳಿಸುತ್ತದೆ. ಇನ್ನು ಮುದ್ರಣ ಮಾಧ್ಯಮ ಎಂದೋ ನಡೆದ ವಿಷಯನ್ನು ಅಚ್ಚೊತ್ತಿಸಿ ಹಂಚುತ್ತಿರುವಂತೆ ಮಾಡಿಕೊಳ್ಳುವಂತೆ ಕಾಣುತ್ತದೆ.

ಈ ಮೂರು ಮಾಧ್ಯಮಗಳು ಯಾವುದಾದರೂ ಒಂದು ವಿವಾದದಾಸ್ಪದ ವಿಷಯ ಸಿಕ್ಕರೆ ಹರಿದು ಹಂಚಿಕೊಳ್ಳುವ ಪಾಲುದಾರರು. ಸಿಕ್ಕ ಪಾಲಿನಲ್ಲಿ ಇಷ್ಟ ಬಂದ ಹಾಗೆ ಮನೆ ಕಟ್ಟುವ ಚಾಣಾಕ್ಷರು. ಹಾಗೊಂದು ವೇಳೆ ವಿವಾದಾಸ್ಪದ ಸಿಕ್ಕಿಲ್ಲವೆಂದರೆ ಲಭ್ಯ ಸುದ್ದಿಯನ್ನೇ ವಿವಾದಾಸ್ಪದಗೊಳಿಸಿ ಗುಡಿಸಲನ್ನಾದರೂ ಕಟ್ಟುವ ಬುದ್ಧಿವಂತರು. ಹೀಗೆ ಕಟ್ಟಿದ ಈ ಹುಸಿಮನೆಗೆ ಎಷ್ಟು ಲೈಕ್ ಬಂದವು ಆಗಾಗ್ಗೆ ಚೆಕ್ ಮಾಡುವ ಸೋಷಿಯಲ್ ಮೀಡಿಯಾ ಒಂದೆಡೆಯಾದರೆ, ಎಷ್ಟು ಟಿಆರ್‌ಪಿ ಬಂತು ಎಂದು ಪದೇಪದೇ ನೋಡಿಕೊಳ್ಳುವ ಸುದ್ದಿ ಮಾಧ್ಯಮ.

ಉದಾಹರಣೆಗೆ ಆ ದಿನದ ಪ್ರಮುಖವಾದ ಸುದ್ದಿ ಪಬ್ಲಿಕ್ ಟಿವಿ ಯಲ್ಲಿ ಪ್ರಸಾರವಾಗುತ್ತಿದೆ ಎಂದು ಇಟ್ಟುಕೊಳ್ಳಿ. ತೆರೆಯ ಮೇಲೆ ಈ ಸುದ್ದಿ ನಮ್ಮಲ್ಲೇ ಮೊದಲು ಎಂದು ಮೇಲಿಂದ ಮೇಲೆ ಠಸ್ಸೆ ಹೊಡೆಯಲಾಗುತ್ತದೆ. ನೀವು ಚಾನೆಲ್ ಬದಲಾಯಿಸಿ ಸುವರ್ಣನ್ಯೂಸ್ ಚಾನಲ್ ನೋಡಿದರೆ ಅದರಲ್ಲೂ ಇದೇ ಸುದ್ದಿ ಪ್ರಕಟವಾಗುತ್ತಿರುತ್ತದೆ. ಆ ತೆರೆಯ ಮೇಲೂ ಕೂಡ ಈ ಸುದ್ದಿ ನಮ್ಮಲ್ಲೇ ಮೊದಲು ಎಂಬ ಠಸ್ಸೆ ಹೊಡೆಯುತ್ತಲೇ ಇರುತ್ತದೆ.ಹೀಗೇ ಇನ್ನಷ್ಟು ತೆರೆಗಳಲ್ಲೂ! ಹಾಗಾದರೆ ಯಾರು ಮೊದಲು... ಈ ಗೊಂದಲ ವೀಕ್ಷಕರಲ್ಲಿ ಸದಾ ಇರುತ್ತದೆ.

ಅಸಲಿಗೆ ಟಿಆರ್‌ಪಿ ಎಂದರೇನು? ಇದರಿಂದ ಯಾರಿಗೆ ಲಾಭ? ಆ ಸುದ್ದಿಯನ್ನು ಬಿತ್ತರಿಸುವ ಚಾನೆಲ್‌ಗೋ? ಅದನ್ನು ವೀಕ್ಷಿಸುವ ಜನರಿಗೋ? ಅದನ್ನು ಸೃಷ್ಟಿಸಿರುವ ಸುದ್ದಿಗಾರನಿಗೋ? ಅಥವಾ ಕೋಟು ಧರಿಸಿ ವೀಕ್ಷಕರಿಗೆ ಪೋಜು ಕೊಡುತ್ತಾ ಗಂಟಲನ್ನು ಹರಿದುಕೊಳ್ಳುವಂತೆ ಆ ಸುದ್ದಿಯನ್ನು ಅರಚುವ ನಿರೂಪಕನಿಗೋ? ಈ ಯಕ್ಷ ಪ್ರಶ್ನೆ ನನ್ನನ್ನು ಒಳಗೊಂಡಂತೆ ಸಹಸ್ರ ವೀಕ್ಷಕರನ್ನು ಕಾಡುತ್ತಲೇ ಇರುತ್ತದೆ. ಅಸಲಿಗೆ ಟಿಆರ್‌ಪಿ ಎಂದರೆ ಟೆಲಿವಿಷನ್ ರೇಟಿಂಗ್ ಪಾಯಿಂಟ್. ಸುದ್ದಿವಾಹಿನಿಗಳ ನಿಯಂತ್ರಕರು ಸುದ್ದಿ ವೀಕ್ಷಣೆ ಮಾಪಕವನ್ನು ಸ್ಯಾಟಲೈಟ್ ಸಿಗ್ನಲ್‌ಗೆ ಒಳಪಡಿಸಿ ಆ ಸುದ್ದಿವಾಹಿನಿಯ ಮುಖ್ಯ ಕಚೇರಿಯಲ್ಲಿ ಇರಿಸಿರುತ್ತಾರೆ. ಒಬ್ಬ ವ್ಯಕ್ತಿ ತನ್ನ ಮನೆಯಲ್ಲಿ ಟಿವಿ ಆನ್ ಮಾಡಿ ಸುದ್ದಿವಾಹಿನಿಯು ಪ್ರಸಾರ ಮಾಡುತ್ತಿರುವ ಸುದ್ದಿಯೊಂದನ್ನು ವೀಕ್ಷಿಸಿದರೆ ಆ ಟಿವಿ ಚಾನೆಲ್‌ಗೆ ಒಂದು ಪಾಯಿಂಟ್ ಸಿಕ್ಕಿತು ಎಂದರ್ಥ. ಈ ಲಕ್ಷಾಂತರ ಮಂದಿ ಆ ಚಾನೆಲ್ ಬಿತ್ತರವಾಗುವ ಸುದ್ದಿಯನ್ನು ವೀಕ್ಷಿಸಿದರೆ ಇಂತಿಷ್ಟು ಪಾಯಿಂಟ್ ಆ ಚಾನೆಲ್‌ನ ಗಳಿಕೆ. ಈ ಟಿಆರ್‌ಪಿ ಆ ಸುದ್ದಿವಾಹಿನಿಯ ಆದಾಯದ ಮೂಲ.


ಮೊದಲನೆಯದಾಗಿ ಕಂಪನಿಯೊಂದರ ಜಾಹೀರಾತುದಾರನು ಆ ಸುದ್ದಿವಾಹಿಯನ್ನು ಎಷ್ಟು ಜನರು ವೀಕ್ಷಿಸುತ್ತಾರೆ ಎಂಬುದರ ಮೇಲೆ ತನ್ನ ಕಂಪನಿಯ ಪ್ರಾಡಕ್ಟ್ ಅನ್ನು ಮಾರಲು ಆಯ್ಕೆ ಮಾಡಿಕೊಳ್ಳುತ್ತಾನೆ. ಕಂಪನಿಯ ಪ್ರಾಡಕ್ಟ್‌ಗೆ ಸಾಧ್ಯವಾದಷ್ಟು ವೀಕ್ಷಕರನ್ನು ಮಾರಿ ಸಾಕ್ಷಿಗೆ ಟಿಆರ್‌ಪಿ ತೋರಿಸಿ ಆ ಕಂಪನಿಯ ಮಾಲೀಕನ ಖಜಾನೆ ತುಂಬಿಸಲು ರಹದಾರಿ ನಿರ್ಮಿಸಿ, ಅವನು ಎಸೆಯುವ ಕಾಸಿಗೆ ಸಲಾಮ್ ಹೊಡೆಯುತ್ತಾರೆ. ಇಲ್ಲಿ ಕಂಪನಿಯ ವಸ್ತು ಮಾರಾಟದ ವಸ್ತುವಾದರೆ ವೀಕ್ಷಕ ಸುದ್ದಿವಾಹಿನಿಯ ಪ್ರಾಡಕ್ಟ್ ಅಷ್ಟೇ. ಅದಕ್ಕೆ ಅವರು ಲೇಪಿಸುವ ಬಣ್ಣ ವೀಕ್ಷಕರೇ ನಿಮಗಾಗಿ ನಮ್ಮ ಸುದ್ದಿವಾಹಿನಿಯಿಂದ 'ಕ್ಷಣಕ್ಷಣದ ಮಾಹಿತಿ', 'ಈ ಸುದ್ದಿ ನಮ್ಮಲ್ಲೇ ಮೊದಲು', 'ರಾಸಲೀಲೆ ಪ್ರಸಂಗ', 'ಕ್ರೈಂ ಹಿಂದೆ ಅಡಗಿರುವ ಕಾಮ' ಇತ್ಯಾದಿ ಇತ್ಯಾದಿ... ಇಷ್ಟೆಲ್ಲಾ ಹೇಳುವ ಅವರಲ್ಲಿ ವೀಕ್ಷಕ ಮುಖ್ಯವಾಗಿ ಕಾಣಿಸುತ್ತಾನೆಯೇ?

ಹೀಗೆ ವೀಕ್ಷಕರಿಗೆ ಕ್ಷಣಕ್ಷಣದ ಮಾಹಿತಿ ಕೊಡಲು ತವಕಿಸುವ ಸುದ್ದಿ ವಾಹಿನಿಗಳಿಗೆ ಯಾವುದೇ ಅನಾಹುತ ಸಂಭವಿಸದ, ದುರ್ಘಟನೆ ಇಲ್ಲದ, ಕೊಲೆ–ಸುಲಿಗೆ, ಕೋಮು ಗಲಭೆ ನಡೆಯದ, ಕಾಮಪುರಾಣ, ರಾಸಲೀಲೆ ತಗಲಾಕಿಕೊಳ್ಳದ ದಿನ ಸುದ್ದಿವಾಹಿಗಳಿಗೆ 'ಬ್ಯಾಡ್ ಡೇ' ಮೇಲಿನಂತ ಯಾವ ಘಟನೆಗಳು ನಡೆಯದೇ ಜನ ನೆಮ್ಮದಿ, ಶಾಂತಿಯಿಂದ ಇರುವ ದಿನದಲ್ಲಿ ಸುದ್ದಿವಾಹಿನಿಗಳ, ಪತ್ರಿಕಾ ಮಾಧ್ಯಮದ ಮುಖ್ಯಸ್ಥರು ಪದೇಪದೇ ಉದ್ಘರಿಸುವ ಮಾತು 'ಬ್ಯಾಡ್ ಡೇ'

ಇವರ ಚಾನೆಲನ್ನು ಹೆಚ್ಚು ಜನರು ವೀಕ್ಷಿಸುವಂತೆ ಮಾಡಲು, ಪತ್ರಿಕೆಯ ಮುಖಪುಟವನ್ನು ರೋಚಕತೆಯಿಂದ ವರ್ಣಿಸಲು ಒಟ್ಟಿನಲ್ಲಿ ಈ ನೆಲದಲ್ಲಿ ಯಾವುದಾದರು ಒಂದು ದುರ್ಘಟನೆ ನಡೆಯಬೇಕು. ರಾಸಲೀಲೆ, ಕಾಮಪುರಾಣ ಬಹಿರಂಗವಾಗಬೇಕು. ಆ ದಿನ ಸುದ್ದಿ ಮಾಧ್ಯಮ, ಪತ್ರಿಕೆಯ ಮುಖ್ಯಸ್ಥರಿಗೆ 'ಗುಡ್ ಡೇ'. ಇಂತಹ ಸುದ್ದಿ ಸಿಕ್ಕಾಗ ಅದನ್ನು ರೋಚಕಗೊಳಿಸಲು ಇವರು ಪಡುವ ಪಾಡು ಅಷ್ಟಿಷ್ಟಲ್ಲ. ಉದಾಹರಣೆಗೆ ಇತ್ತೀಚಿಗೆ ಕೊಳ್ಳೇಗಾಲ ತಾಲ್ಲೂಕಿನ ಸುಳ್ವಾಡಿ ಮಾರಮ್ಮನ ವಿಷ ಪ್ರಸಾದದಿಂದ ಕುಟುಂಬದ ಯಜಮಾನ ಸಾವಿಗೀಡಾದಾಗ ಅವರ ಹೆಂಡತಿ ಮಕ್ಕಳ ಮುಂದೆ ಮೈಕ್ ಹಿಡಿದು 'ನಿಮ್ಮ ಮನೆಯ ಆಧಾರ ಸ್ತಂಭ ಇಲ್ಲವಾಗಿದೆ ನಿಮಗೆ ಹೇಗನ್ನಿಸುತ್ತದೆ'. ಅವರನ್ನು ಕೇಳಿ ಗೋಳಾಡಿಸಿ ಅದನ್ನು ಹತ್ತುಬಾರಿ ಜೂಮ್ ಮಾಡಿ ಟಿಆರ್‌ಪಿ ಹೆಚ್ಚಿಸುವಷ್ಟರ ಮಟ್ಟಿಗೆ ಇವರಿಗೆ ಮಾನವೀಯತೆ ಇದೆ!

ಇನ್ನು ಸಾವಾಜಿಕ ಜಾಲತಾಣವನ್ನು ನೆಚ್ಚಿಕೊಂಡಿರುವವರಿಗೆ ಸುದ್ದಿವಾಹಿನಿಗಳಂತೆ ನಾನಾ ಮುಖಗಳಿರುವುದಿಲ್ಲ. ಅವರೊಳಗಿರುವ ಮುಖವಾಡ ಸ್ಪಷ್ಟವಾಗಿರುತ್ತದೆ. ಒಬ್ಬ ಮೂಲತಃ ಹಿಂದುತ್ವವಾದಿಯೆಂದರೆ ಅವನು ಹಾಕುವ ಪೋಸ್ಟ್‌ಗಳಲ್ಲಿ ಅವನ ಮುಖವಾಡ ತಿಳಿದುಬಿಡುತ್ತದೆ. ಪ್ರಗತಿಪರನೆಂಬವ ಅವನಿಗೆ ಇಷ್ಟದ ಪೋಸ್ಟ್‌ಗಳನ್ನು ಹಾಕುತ್ತಾನೆ. ಆದರೆ ಸಾಮಾಜಿಕ ಮಾಧ್ಯಮದಲ್ಲಿ ಬರೆಯುವವರಿಗೆ, ಪೋಸ್ಟ್ ಹಾಕುವವರಿಗೆ, ವಾಟ್ಸ್‌ಆಪ್ ಮಾಡುವವರಿಗೆ, ಟ್ವೀಟ್ ಮಾಡುವವರಿಗೆ ಯಾರದೇ ಮುಖವಾಣಿಯಾಗುವ ಹಂಗಿರುವುದಿಲ್ಲ. ಅವರ ಅಭಿಪ್ರಾಯಗಳೆಲ್ಲವೂ ಆ ಕ್ಷಣದ ಪ್ರತಿಕ್ರಿಯೆಗಳಾಗಿರುತ್ತವೆ ಹಾಗೂ ಅವುಗಳ ಕ್ರಿಯೆ ಮೆದುಳಿನಿಂದ ಆಚೆಗೆ ವರ್ತಿಸುತ್ತಾ, ಹೃದಯಕ್ಕೆ ಹೊರತಾಗಿ ಸ್ಪಂದಿಸುತ್ತಿರುತ್ತವೆ. ಯಾವುದೇ ಘಟನೆ, ಚಳವಳಿ, ಚರ್ಚೆಗೆ ಇವರ ಸ್ಪಂದನೆ ಲೈಕ್ ಅಥವಾ ಒಂದೆರೆಡು ಶಬ್ದಗಳ 'ಕಮೆಂಟ್' ಮಾತ್ರ. ಅದೇ ವಿಷಯ ಮರುಕ್ಷಣವೇ ಇವರ ತಲೆಯಲ್ಲಿರುವುದಿಲ್ಲ. ಮತ್ತೊಂದು ಹೊಸ ವಿಷಯವನ್ನು ಕುರಿತು ಪೋಸ್ಟ್ ಮಾಡಿ ಅದಕ್ಕೆ ಎಷ್ಟು ಲೈಕ್, ಕಮೆಂಟ್ ಬರುತ್ತವೆ ಎಂದು ಕಾಯುವ, ಒಂದೊಂದು ಲೈಕ್ ಹೆಚ್ಚಾದರೂ ಪುಳಕಗೊಳ್ಳುವ, ಇನ್ನೊಂದು ಪೋಸ್ಟ್‌ಗೆ ತಯಾರಿ ನಡೆಸುವ ಉತ್ಸಾಹದಲ್ಲಿರುತ್ತಾರೆ.

ಹಾಗೆಯೇ ಯಾರೋ ಎಂದೋ ಇವರ ಇನ್‌ಬಾಕ್ಸ್‌ಗೆ ಸುರಿದಿದ್ದ ಕಸವನ್ನು ಮತ್ತೊಬ್ಬರ ಮನೆಗೆ ಸುರಿಯುತ್ತಾ (ಷೇರ್ ಮಾಡುತ್ತಾ) ಮತ್ತೊಂದು ಕಸ ತುಂಬಿಸಿಕೊಳ್ಳಲು ತಮ್ಮ ಇನ್‌ಬಾಕ್ಸ್ ಖಾಲಿಯಾಗಿದೆಯೇ ಎಂದು ಆಗಾಗ ಖಚಿತಪಡಿಸಿಕೊಳ್ಳುತ್ತಿರುತ್ತಾರೆ. ಯಾರೂ ಎಷ್ಟೇ ಬಡಿದುಕೊಂಡರೂ ಲೈಕ್, ಕಮೆಂಟ್, ಷೇರ್‌ಗೆ ಇವರ ಆಟ ಕೊನೆಗೊಳ್ಳುತ್ತದೆ. ಒಟ್ಟಾರೆ ಈ ಸುದ್ದಿ ಮಾಧ್ಯಮಗಳವರು ಸಂತೆಯಲ್ಲಿ ಸೆಂಕೆಡ್ ಸೇಲ್ಸ್ ಬಟ್ಟೆ ಗುಡ್ಡೆ ಹಾಕಿಕೊಂಡು ಮಾರುವವರಂತೆಯೂ, ಸೊಪ್ಪುಸೆದೆ ಮಾರುವರಂತೆಯೂ ಕಂಡರೆ, ಸಾಮಾಜಿಕ ಜಾಲತಾಣದಲ್ಲಿ ಬಿದ್ದು ಬರಿಯುವವರು ಪೌರಾಣಿಕ ನಾಟಕದ ಸ್ತ್ರೀ ಪಾತ್ರದಂತೆಯೂ, ಜಾತ್ರೆಗಳಲ್ಲಿ ಲಾಗಹೊಡೆಯುವ ದೊಂಬರಂತೆಯೂ ಕಾಣುತ್ತಾರೆ.



(ಮೂಲತಃ ಚಾಮರಾಜನಗರ ಸೀಮೆಗೆ ಸೇರಿದವರಾದ ರವಿಚಂದ್ರ ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾದ ಯುವ ಕಥೆಗಾರರಾಗಿದ್ದು ಸದ್ಯ ಮೈಸೂರಿನ 'ಆಂದೋಲನ' ಪತ್ರಿಕೆಯ ಸಂಪಾದಕೀಯ ಬಳಗದಲ್ಲಿದ್ದಾರೆ)

ಒಂದೇ ಕಥನದ ಅಪಾಯ

–ಚಿಮಮಂಡಾ ನ್ಗೋಝಿ ಅಡಿಚಿ
ಕನ್ನಡಕ್ಕೆ: ಶಶಿಧರ ಡೋಂಗ್ರೆ

“ಯಾವುದಾದರೂ ಒಂದು ಸ್ಥಳವನ್ನು ಅಥವಾ ವ್ಯಕ್ತಿಯನ್ನು ಸಂಪೂರ್ಣವಾಗಿ ಅರಿಯಬೇಕೆಂದರೆ, ಅವುಗಳ ಬಗ್ಗೆ ಇರುವ ಎಲ್ಲ ಕಥನಗಳನ್ನೂ ನಾವು ಕೇಳಬೇಕು; ಅವುಗಳೊಂದಿಗೆ ಅನುಸಂಧಾನ ಮಾಡಬೇಕು. ಒಂದೇ ಕಥನದ ಪರಿಣಾಮವೆಂದರೆ ಮನುಷ್ಯನ ಘನತೆಯನ್ನು ಕಳೆಯುವುದು. ನಾವೆಲ್ಲರೂ ಒಂದೇ ಎಂಬ ಭಾವವನ್ನು ಹೊಂದುವುದು ಒಂದೇ ಕಥನದಿಂದ ಅಸಾಧ್ಯವಾಗುತ್ತದೆ. ನಾವು ಒಂದೇ ಎನ್ನುವುದರ ಬದಲಾಗಿ ನಾವೆಷ್ಟು ಭಿನ್ನ ಎಂದು ತೋರುವುದರಲ್ಲಿ ‘ಒಂದೇ ಕಥನ’ ಆಸ್ಥೆ ವಹಿಸುತ್ತದೆ.”


ಚಿತ್ರ: ಪಿ.ಜಿ. ಗುಜ್ಜಾರಪ್ಪ

ನಾನು ಒಬ್ಬ ಕಥೆಗಾರ್ತಿ. 'ಒಂದೇ ಕಥನದ ಅಪಾಯ'ಗಳನ್ನು ಕುರಿತು ನಾನು ಮಾತನಾಡಬೇಕೆಂದಿದ್ದೇನೆ. ನಾನು ನನ್ನ ಬಾಲ್ಯವನ್ನು ಪೂರ್ವ ನೈಜೀರಿಯಾದ ವಿಶ್ವವಿದ್ಯಾನಿಲಯದಲ್ಲಿ ಕಳೆದೆ. ನನ್ನ ತಾಯಿಯ ಪ್ರಕಾರ ನಾನು ನನ್ನ ಎರಡನೇ ವಯಸ್ಸಿಗೇ ಓದಲು ಪ್ರಾರಂಭಿಸಿದ್ದೆ. ಬಹುಶಃ ಆಗ ನನಗೆ ನಾಲ್ಕಾದರೂ ಆಗಿದ್ದಿರಬೇಕು ಎಂದೆನಿಸುತ್ತದೆ. ಏನೇ ಇರಲಿ, ನಾನು ಬಹಳ ಬೇಗ ಓದಲು ಪ್ರಾರಂಭಿಸಿದ್ದೆ. ನಾನು ಬಹುತೇಕ ಇಂಗ್ಲೆಂಡ್ ಮತ್ತು ಅಮೇರಿಕದಲ್ಲಿ ಪ್ರಕಟವಾದ ಮಕ್ಕಳ ಪುಸ್ತಕಗಳನ್ನು ಓದುತ್ತಿದ್ದೆ.

ನಾನು ಎಳವೆಯಲ್ಲೇ ಬರೆಯುವುದನ್ನು ಪ್ರಾರಂಭಿಸಿದೆ. ನನ್ನ ಏಳನೇ ವರ್ಷದಲ್ಲಿ ಬರೆದ ಕಥೆಗಳಿಗೆ ಪೂರಕವಾಗಿ ಪೆನ್ಸಿಲ್ ಮತ್ತು ಕ್ರೇಯಾನ್ ಬಳಸಿ ಬರೆದ ಚಿತ್ರಗಳನ್ನು ಸೇರಿಸುತ್ತಿದ್ದೆ. ಪಾಪ, ನಿರ್ವಾಹವಿಲ್ಲದೇ ನನ್ನ ಅಮ್ಮ ಅವುಗಳನ್ನು ಓದಬೇಕಾಗಿತ್ತು. ನಾನು ಯಾವ ಪುಸ್ತಕಗಳನ್ನು ಓದುತ್ತಿದ್ದೆನೋ ಅದೇ ತರಹದ ಪಾತ್ರ ಮತ್ತು ಚಿತ್ರಣಗಳನ್ನು ನನ್ನ ಕಥೆಗಳಲ್ಲೂ ಕಾಣಬಹುದಿತ್ತು. ನನ್ನ ಎಲ್ಲ ಪಾತ್ರಗಳಿಗೂ ನೀಲಿ ಕಣ್ಣುಗಳಿದ್ದವು. ಅವರು ಮಂಜಿನಲ್ಲಿ ಆಟವಾಡುತ್ತಿದ್ದರು, ಸೇಬು ತಿನ್ನುತ್ತಿದ್ದರು ಮತ್ತು ಯಾವಾಗಲೂ ಹವಾಮಾನದ ಬಗ್ಗೆ ಮಾತನಾಡುತ್ತಿದ್ದರು. 'ಇವತ್ತು ಸೂರ್ಯ ಕಾಣಿಸಿಕೊಂಡ. ಇಂಥ ವಾತಾವರಣದಲ್ಲಿ ಹೊರಗೆ ಆಟವಾಡುವುದು ಎಷ್ಟು ಚೆಂದ ಅಲ್ವಾ?' ಹೀಗೇ. ನಾನು ನೈಜೀರಿಯಾದಲ್ಲಿದ್ದರೂ ನನ್ನ ಪಾತ್ರಗಳು ಹೀಗಿದ್ದವು. ನಮ್ಮ ದೇಶದಲ್ಲಿ ಮಂಜಿರಲಿಲ್ಲ, ನಾವು ಮಾವಿನ ಹಣ್ಣನ್ನು ತಿನ್ನುತ್ತಿದ್ದೆವು ಮತ್ತು ಹವಾಮಾನದ ಬಗ್ಗೆ ನಾವು ಯಾವತ್ತೂ ಚರ್ಚಿಸುತ್ತಿರಲಿಲ್ಲ.

ನನ್ನ ಕಥೆಗಳ ಪಾತ್ರಗಳು ಯಾವಾಗಲೂ ಜಿಂಜರ್ ಬೀರ್ ಕುಡಿಯುತ್ತಿದ್ದವು. ಏಕೆಂದರೆ, ನಾನು ಓದಿದ್ದ ಬ್ರಿಟಿಷ್ ಪುಸ್ತಕಗಳ ಪಾತ್ರಗಳು ಕುಡಿಯುತ್ತಿದ್ದುದು ಅದನ್ನೇ. ಜಿಂಜರ್ ಬೀರ್ ಎಂದರೆ ಏನು? ಅದು ಹೇಗಿರುತ್ತದೆ – ಎನ್ನುವುದೆಲ್ಲಾ ನನಗೆ ಅಮುಖ್ಯ ಆಗಿರುತ್ತಿತ್ತು. ಇಷ್ಟೆಲ್ಲಾ ಆದ ಮೇಲೆ ಜಿಂಜರ್ ಬೀರ್ ಕುಡಿಯಬೇಕು ಎನ್ನುವುದು ನನ್ನ ಆಸೆಯಾಗಿತ್ತು. ಇರಲಿ, ಅದು ಇನ್ನೊಂದು ಕಥೆ.

ಒಂದೇ ಮಾದರಿಯ ಕಥೆಗಳನ್ನು ಓದಿದಾಗ, ಅದರ ಪರಿಣಾಮಗಳು ಯಾವ ರೀತಿ ಆಗಬಹುದು ಎಂಬುದನ್ನು ಈ ದೃಷ್ಟಾಂತ ಬಿಂಬಿಸುತ್ತದೆ ಎನ್ನುವುದು ನನ್ನ ನಂಬುಗೆ. ಅದರಲ್ಲೂ ಮಕ್ಕಳ ಮನಸ್ಸಿನ ಮೇಲೆ ಈ ತರಹದ ಪ್ರಭಾವ ತೀವ್ರತರದ್ದಾಗಿರುತ್ತದೆ. ನಾನು ಓದುತ್ತಿದ್ದ ಪುಸ್ತಕಗಳೆಲ್ಲವೂ ವಿದೇಶೀ ಆಗಿದ್ದುದರಿಂದ, 'ಎಲ್ಲ ಪುಸ್ತಕಗಳಲ್ಲೂ ವಿದೇಶೀಯರು ಮಾತ್ರ ಇರುತ್ತಾರೆ ಮತ್ತು ನನ್ನ ಸುತ್ತ ಇರುವ ಸಮಾಜವನ್ನು ಪುಸ್ತಕಗಳಲ್ಲಿ ಕಾಣಲಾಗುವುದಿಲ್ಲ' ಎನ್ನುವ ಸರಳ ಭಾವನೆ ನನ್ನ ಮನಸ್ಸಿನಲ್ಲಿ ಮೂಡಿತ್ತು. ನಾನು ಆಫ್ರಿಕನ್ ಪುಸ್ತಕಗಳನ್ನು ಓದಲು ಪ್ರಾರಂಭಿಸಿದ ಮೇಲೆ ಈ ಭಾವನೆಗಳು ಬದಲಾವಣೆ ಹೊಂದಿದವು. ಆಗಿನ ಸಂದರ್ಭದಲ್ಲಿ ನಮಗೆ ಹೆಚ್ಚು ಆಫ್ರಿಕನ್ ಪುಸ್ತಕಗಳು ಸಿಗುತ್ತಿರಲಿಲ್ಲ ಮತ್ತು ಅವುಗಳನ್ನು ಪಡೆಯುವುದೂ ಸುಲಭವಾಗಿರಲಿಲ್ಲ.

ಆದರೆ ಚಿನುವಾ ಅಚಿಬೆ ಮತ್ತು ಕಮರಾ ಲಾಯೆಯವರಂಥ ಲೇಖಕರ ಕೃತಿಗಳನ್ನು ಓದಲು ಪ್ರಾರಂಭಿಸಿದ ಮೇಲೆ ಸಾಹಿತ್ಯವೆಂದರೆ ಹೇಗಿರುತ್ತದೆ ಎನ್ನುವುದರ ಬಗ್ಗೆ ನನ್ನ ಅರಿವು ಬದಲಾಗತೊಡಗಿತು. ಕಪ್ಪು ಚರ್ಮದ, ದಟ್ಟ ಗುಂಗುರು ಕೂದಲಿರುವ ಹುಡುಗಿಯರೂ ಕಥೆಗಳಲ್ಲಿ ಪಾತ್ರಗಳಾಗಿ ಬರಬಹುದು ಎಂದು ಎನಿಸತೊಡಗಿತು. ನಾನೂ ಇಂಥ ಪಾತ್ರಗಳನ್ನೊಳಗೊಂಡ ಕಥೆಗಳನ್ನು ಬರೆಯತೊಡಗಿದೆ.

ಇಲ್ಲಿ ಯಾರೂ ತಪ್ಪು ತಿಳಿಯಬಾರದು. ಆ ಬ್ರಿಟಿಷ್ ಮತ್ತು ಅಮೇರಿಕನ್ ಪುಸ್ತಕಗಳನ್ನು ನಾನು ಮನಸಾರೆ ಪ್ರೀತಿಸುತ್ತಿದ್ದೆ. ಅವು ನಾನು ಕಲ್ಪನಾಲೋಕದಲ್ಲಿ ವಿಹರಿಸುವಂತೆ ಮಾಡಿದವು. ಹೊಸ ಪ್ರಪಂಚವನ್ನು ಅವು ನನಗೆ ತೋರಿದವು. ಆದರೆ ಈ ಓದಿನ ಅನಪೇಕ್ಷಿತ ಪರಿಣಾಮವೆಂದರೆ, ನನ್ನ ತರಹ ಇರುವ ವ್ಯಕ್ತಿಗಳೂ ಸಾಹಿತ್ಯದಲ್ಲಿರಬಹುದು ಎಂದು ನನ್ನ ಮನಸ್ಸಿಗೆ ತೋರಲೇ ಇಲ್ಲ. ಆಫ್ರಿಕನ್ ಲೇಖಕರು ನನ್ನ ಮೇಲೆ ಮಾಡಿದ ಅತಿ ದೊಡ್ಡ ಪ್ರಭಾವವೆಂದರೆ – 'ಪುಸ್ತಕವೆಂದರೆ ಹೀಗೇ ಇರಬೇಕು' ಎಂಬ ಒಂದೇ ಕಥನದಿಂದ ನನ್ನನ್ನು ಪಾರು ಮಾಡಿದ್ದು.

ನಾನು ಹುಟ್ಟಿ ಬೆಳೆದದ್ದು ನೈಜೀರಿಯಾದ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ. ನನ್ನ ತಂದೆ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಆಗಿದ್ದರು ಮತ್ತು ಅಮ್ಮ ಕಛೇರಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಕೆಲಸಕ್ಕೆ ಹೋಗುತ್ತಿದ್ದರಿಂದ, ಆಗಿನ ಕಾಲದ ಪದ್ಧತಿಯಂತೆ ನಮ್ಮ ಮನೆಯಲ್ಲೂ ಕೆಲಸದವರಿದ್ದರು. ಬಹುತೇಕ ಅವರು ನಾವಿದ್ದ ಪಟ್ಟಣದ ಹತ್ತಿರದ ಹಳ್ಳಿಯಿಂದ ಬರುತ್ತಿದ್ದರು. ನನಗಾಗ ಎಂಟು ವರ್ಷ ಎನಿಸುತ್ತದೆ. ಆಗ ನಮ್ಮ ಮನೆಗೆ ಫಿಡೆ ಎಂಬ ಹೆಸರಿನ ಹೊಸ ಕೆಲಸದ ಹುಡುಗ ಬಂದ. ಅವನ ಬಗ್ಗೆ ನನ್ನ ಅಮ್ಮ ಹೇಳಿದ ಒಂದೇ ವಿಷಯವೆಂದರೆ, ಅವನ ಕುಟುಂಬದವರು ಬಡವರಾಗಿದ್ದರು ಎಂದು. ನನ್ನ ಅಮ್ಮ ಅವರ ಮನೆಗೆ ಆಗಾಗ ಅಕ್ಕಿ, ಯಾಮ್ ಮತ್ತು ನಮ್ಮ ಹಳೆಯ ಬಟ್ಟೆಗಳನ್ನು ಕಳಿಸುತ್ತಿದ್ದಳು. ಒಂದೊಂದು ದಿನ ನಾನು ತಟ್ಟೆಯಲ್ಲಿದ್ದ ಊಟವನ್ನು ಮುಗಿಸದೇ ಇದ್ದಾಗ, 'ತಟ್ಟೆಯಲ್ಲಿರುವುದನ್ನು ಮುಗಿಸು. ಗೊತ್ತಿಲ್ವಾ ನಿನಗೆ? ಫಿಡೆ ಮನೆಯಲ್ಲಿ ಊಟಕ್ಕೂ ಏನೂ ಇರೋದಿಲ್ಲ ಅಂತ?' ಎಂದು ಹೇಳುತ್ತಿದ್ದಳು. ಈ ಮಾತನ್ನು ಮತ್ತೆ ಮತ್ತೆ ಕೇಳಿ ಫಿಡೆಯ ಕುಟುಂಬದ ಬಗ್ಗೆ ನನ್ನಲ್ಲಿ ಅಪಾರ ಕರುಣೆ ಉಕ್ಕುತ್ತಿತ್ತು.

ಒಂದು ಶನಿವಾರ ನಾನು ಅವರಿದ್ದ ಹಳ್ಳಿಗೆ ಹೋಗುವ ಸಂದರ್ಭ ಬಂತು. ಆಗ ಫಿಡೆಯ ಅಮ್ಮ, ತಾಳೆಗರಿಗಳಿಂದ ಹೆಣೆದು ಆಕರ್ಷಕವಾಗಿ ಬಣ್ಣ ಹಾಕಿದ್ದ ಬುಟ್ಟಿಯೊಂದನ್ನು ನನಗೆ ತೋರಿಸಿದಳು. ಅದನ್ನು ಫಿಡೆಯ ಅಣ್ಣ ಮಾಡಿದ್ದಂತೆ. ನನಗೆ ಆಶ್ಚರ್ಯ! ಫಿಡೆಯ ಕುಟುಂಬದಲ್ಲಿ ಇಂಥ ಕಲೆಯನ್ನು ಕಾಣಬಹುದು ಎಂದು ನಾನು ಕನಸಿನಲ್ಲೂ ಎಣಿಸಿರಲಿಲ್ಲ. ನನಗೆ ಗೊತ್ತಿದ್ದದ್ದು ಒಂದೇ ಒಂದು ಕಥನ. 'ಅವರು ತುಂಬ ಬಡವರು'. ನನ್ನ ಮನಸ್ಸಿನಲ್ಲಿ ಅವರ ಬಡತನವೊಂದನ್ನು ಬಿಟ್ಟು ಯಾವ ವಿಷಯವನ್ನೂ ನಾನು ಅವರ ಕುಟುಂಬದೊಂದಿಗೆ ಕಲ್ಪಿಸಿಕೊಳ್ಳುವುದಕ್ಕೆ ಅಸಮರ್ಥಳಾಗಿದ್ದೆ. ಅವರ ಬಡತನದ ಕಥನವೊಂದೇ ನನಗೆ ಗೊತ್ತಿದ್ದದ್ದು.

ಕೆಲವು ವರ್ಷಗಳ ನಂತರ ನಾನು ಅಮೇರಿಕೆಯ ವಿಶ್ವವಿದ್ಯಾನಿಲಯಕ್ಕೆ ಓದಲು ಹೋದಾಗ ಈ ಭಾವನೆಯ ಬಗ್ಗೆ ಮತ್ತೆ ಯೋಚಿಸುವಂತಾಯಿತು. ನನಗಾಗ ಹತ್ತೊಂಬತ್ತು ವರ್ಷ. ನಾನು ಇಂಗ್ಲಿಷನ್ನು ಸರಾಗವಾಗಿ ಮಾತನಾಡುತಿದ್ದುದನ್ನು ನೋಡಿ, ನನ್ನ ಜೊತೆಗಿದ್ದ ಅಮೇರಿಕನ್ ಹುಡುಗಿಗೆ ಬಹಳ ಆಶ್ಚರ್ಯವಾಯಿತು. ನೈಜೀರಿಯಾದಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯೆಂದು ನಾನು ಹೇಳಿದಾಗ ಅವಳಿಗೆ ಗೊಂದಲವಾಯಿತು. ನಾನು ಇಷ್ಟಪಡುವ ಸಂಗೀತವನ್ನು ತಾನೂ ಕೇಳಬೇಕೆಂದಾಗ ನನಗೆ ಮರಿಯಾ ಕೇರೀ ಇಷ್ಟವೆಂದು ಹೇಳಿದೆ. ಅವಳು ಗಾಬರಿಯಿಂದ 'ಹೌದಾ!' ಎಂದಳು. ನನಗೆ ವಿದ್ಯುತ್ ಒಲೆ ಉಪಯೋಗಿಸುವುದಕ್ಕೆ ಬರುವುದಿಲ್ಲವೆಂದು ಅವಳು ನಿರ್ಧರಿಸಿಯಾಗಿತ್ತು. ಇದನ್ನು ನೋಡಿ ನನಗೆ ಹೊಳೆದಿದ್ದು – ನನ್ನನ್ನು ನೋಡುವ ಮೊದಲೇ ಅವಳು ನನ್ನ ಬಗ್ಗೆ ಕರುಣೆ ತೋರಿಯಾಗಿತ್ತು. 'ನನ್ನ ರೂಮ್ ಮೇಟ್ ಆಫ್ರಿಕನ್; ಆದ್ದರಿಂದ ನಾನು ಅವಳಿಗೆ ತಿಳಿಹೇಳಬೇಕು ಮತ್ತು ಆಸರೆಯನ್ನೂ ನೀಡಬೇಕು' ಎಂಬ ಭಾವವೇ ಸಮರ್ಪಕ ಎಂದು ಅವಳು

ನಿರ್ಧರಿಸಿಯಾಗಿತ್ತು. ಅವಳಿಗೆ ಆಫ್ರಿಕಾದ ಬಗ್ಗೆ ಗೊತ್ತಿದ್ದದ್ದು 'ಆಫ್ರಿಕಾ ಎಂದರೆ ಕಷ್ಟ–ಕೋಟಲೆ; ಕತ್ತಲೆಯ ಖಂಡ' ಎಂಬ ಒಂದೇ ಕಥನ. ಈ ಕಥನದಲ್ಲಿ ಆಫ್ರಿಕಾದ ಹುಡುಗಿಯೊಬ್ಬಳು ತನ್ನಂತೆಯೇ ಇರಬಹುದು ಎಂಬ ಭಾವಕ್ಕೆ ಎಡೆಯಿರಲಿಲ್ಲ; ಕರುಣೆಗಿಂತ ಸಂಕೀರ್ಣವಾದ ಭಾವನೆಗಳಿಗೆ ಅಲ್ಲಿ ಆಸ್ಪದ ಇರಲಿಲ್ಲ. 'ನಾವಿಬ್ಬರೂ ಮನುಷ್ಯರು – ಆದ್ದರಿಂದ ಸಮಾನರು' ಎಂಬ ಸರಳ ಭಾವನೆಗೂ. ಈ ಎಲ್ಲ ಅನುಭವಗಳಿಂದಾಗಿ ಅಮೇರಿಕದಲ್ಲಿ ಕೆಲವು ವರ್ಷ ಕಳೆದ ಮೇಲೆ, ನನ್ನ ರೂಮಿನಲ್ಲಿದ್ದ ಸ್ನೇಹಿತೆಯ ಪ್ರತಿಕ್ರಿಯೆಯನ್ನು ಅರ್ಥೈಸುವುದಕ್ಕೆ ನನಗೆ ಸಾಧ್ಯವಾಗುತ್ತಿದೆ. ನಾನು ನೈಜೀರಿಯಾದಲ್ಲಿ ಹುಟ್ಟದೇ ಇದ್ದಿದ್ದರೆ, ಅಲ್ಲೇ ಬೆಳೆಯದೇ ಇದ್ದಿದ್ದರೆ, ಆಫ್ರಿಕದ ಬಗ್ಗೆ ಜನಪ್ರಿಯ ಚಿತ್ರಣಗಳನ್ನೇ ಓದಿದ್ದರೆ, ಬಹುಶಃ ನನ್ನ ಅನಿಸಿಕೆಗಳೂ ಇದೇ ರೀತಿ ಇರುತ್ತಿದ್ದವು. ಆಫ್ರಿಕಾ ಎಂದರೆ ದಟ್ಟ ಕಾಡುಗಳಿರುವ, ಸುಂದರ ಪ್ರಾಣಿಗಳು ಎಲ್ಲೆಲ್ಲೂ ಕಾಣಸಿಗುವ, ಅರ್ಥವಾಗದೇ ಇರುವ ಜನರಿರುವ, ಗುರಿಯಿರದೇ ಸುಮ್ಮನೆ ಯುದ್ಧ ಮಾಡುವ, ಏಡ್ಸ್ ಮತ್ತು ಬಡತನದಿಂದ ನೂರಾರು ಮಂದಿ ದಿನನಿತ್ಯವೂ ಸಾಯುವ ಮತ್ತು ಯಾರಾದರೊಬ್ಬ ಬಿಳಿಯ ತಮ್ಮ ಮೇಲೆ ಕರುಣೆ ತೋರಿ ನಮ್ಮನ್ನು ಕಾಪಾಡಲಿ ಎಂದು ಬೇಡುವ ಸ್ಥಳ ಎಂದು ನನಗೂ ಎನಿಸುತ್ತಿತ್ತೋ ಏನೋ. ನಾನು ನಮ್ಮ ಮನೆ ಆಳು ಫಿಡೆಯ ಕುಟುಂಬವನ್ನು ಒಂದೇ ಚೌಕಟ್ಟಿನೊಳಗೆ ನೋಡುತ್ತಿದ್ದೆನಲ್ಲ ಹಾಗೆ.

ಅಮೇರಿಕಕ್ಕೆ ಹೋಗುವ ಮೊದಲು ನಾನು ನನ್ನನ್ನು 'ಆಫ್ರಿಕನ್' ಎಂದೇನೂ ಗುರುತಿಸಿಕೊಂಡಿರಲಿಲ್ಲ. ಆದರೆ ಅಮೇರಿಕದಲ್ಲಿ ಆಫ್ರಿಕಾದ ಮಾತು ಬಂದಾಗಲೆಲ್ಲ ಎಲ್ಲರ ಕಣ್ಣುಗಳು ನನ್ನತ್ತ ತಿರುಗುತ್ತಿದ್ದವು. ಆಫ್ರಿಕಾದಲ್ಲಿದ್ದ ಬಹಳಷ್ಟು ಪ್ರದೇಶಗಳ ಬಗ್ಗೆ, ನಮೀಬಿಯಾವನ್ನೂ ಒಳಗೊಂಡಂತೆ, ನನಗೆ ಹೆಚ್ಚೇನೂ ಗೊತ್ತಿರಲಿಲ್ಲ. ಆದರೂ ಆ ಅಸ್ಮಿತೆಯನ್ನು ನಾನು ನನ್ನದಾಗಿಸಿಕೊಂಡೆ. ಈಗ ನನ್ನನ್ನೇ ನಾನು 'ಆಫ್ರಿಕನ್' ಎಂದು ಬಗೆಯುತ್ತೇನೆ. ಆದರೂ ಆಫ್ರಿಕಾ ಖಂಡವನ್ನು ದೇಶವೆಂದು ಕರೆದಾಗ ಕೆರಳುತ್ತೇನೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ, ಲಾಗೋಸ್ ನಿಂದ ಇಲ್ಲಿಗೆ ಬರುವಾಗ ವರ್ಜಿನ್ ಅಟ್ಲಾಂಟಿಕ್ ವಿಮಾನದಲ್ಲಿ ಕೇಳಿದ ಒಂದು ಪ್ರಕಟಣೆ: ಈ ವಿಮಾನ ಸಂಸ್ಥೆ ಇಂಡಿಯಾ, ಆಫ್ರಿಕಾ ಮುಂತಾದ ದೇಶಗಳಲ್ಲಿ 'ಧರ್ಮಾರ್ಥ'ಕೆಲಸಗಳನ್ನು ಮಾಡುತ್ತಿದೆಯಂತೆ! (ನಗು)


ಆಫ್ರಿಕದ ಬಗ್ಗೆ ಇರುವ ಈ 'ಒಂದು ಕಥನ' ಬಹುತೇಕ ಪಾಶ್ಚಿಮಾತ್ಯ ಸಾಹಿತ್ಯದಿಂದ ಪ್ರೇರಿತವಾದದ್ದು. ೧೫೬೧ರಲ್ಲಿ ಜಾನ್ ಲಾಕ್ ಎಂಬ ವ್ಯಾಪಾರಿ ಪಶ್ಚಿಮ ಆಫ್ರಿಕಾಕ್ಕೆ ಭೇಟಿ ನೀಡಿದ್ದ. ಆ ಪಯಾಣದ ಬಗ್ಗೆ ಬರೆದ ಬರಹದಲ್ಲಿ ಕೆಲವು ತುಣುಕುಗಳು ಕುತೂಹಲಕಾರಿಯಾಗಿವೆ. ಕಪ್ಪು ಆಫ್ರಿಕನ್ ರನ್ನು ಬಣ್ಣಿಸುತ್ತಾ ಮನೆಗಳೇ ಇಲ್ಲದ ರಾಕ್ಷಸರೆಂದೂ, ಬಾಯಿ ಮತ್ತು ಕಣ್ಣುಗಳನ್ನು ಎದೆಯಲ್ಲಿ ಹುದುಗಿಸಿಕೊಂಡು ತಲೆಯೇ ಇಲ್ಲದ ವಿಕೃತರೂಪೀ ಮನುಷ್ಯರೆಂದೂ ಹೇಳಿದ್ದಾನೆ. ಈ ಬರಹವನ್ನು ಓದಿ ನಾನು ಬಹಳಷ್ಟು ಸಲ ನಕ್ಕಿದ್ದೇನೆ. ಎಂತಹ ಸೃಜನಶೀಲ ಕಲ್ಪನಾ ಲೋಕವನ್ನು ಈತ ಸೃಷ್ಟಿಸಿದ್ದಾನೆ! ದುರಂತವೆಂದರೆ. ಇಂತಹ ಬರಹಗಳು ಆಫ್ರಿಕಾದ ಬಗ್ಗೆ ಏನು ಮತ್ತು ಹೇಗೆ ಹೇಳಬೇಕೆಂಬ ಒಂದು ಮಾದರಿಯನ್ನೇ ಸೃಷ್ಟಿಸಿದವು. ಆಫ್ರಿಕಾ ಎಂದರೆ ಬರೀ ನೇತ್ಯಾತ್ಮಕತೆಯ ಪ್ರತೀಕ ಅಥವಾ ಎಲ್ಲ ಭಯಾನಕ ಸ್ಥಳಗಳಿಗೂ ಉಪಯೋಗಿಸಬಹುದಾದ ಒಂದು ಪ್ರತಿಮೆ. ಕಪ್ಪು ಜನರಿರುವ ಕಗ್ಗತ್ತಲೆಯ ಖಂಡ. ರುಡ್‌ಯಾರ್ಡ್ ಕಿಪ್ಲಿಂಗ್‌ನಂಥ ಕವಿಯೂ ಇಲ್ಲಿನ ಜನರನ್ನು ಕುರಿತು, 'ಅರ್ಧ ಭೂತ, ಅರ್ಧ ಮಗು' ಎಂದು ಹೇಳಲಿಲ್ಲವೇ? ನನ್ನ ಅಮೇರಿಕನ್ ಸ್ನೇಹಿತೆಯೂ ಇಂಥದೇ ಕಥೆಗಳನ್ನು ಅಥವಾ ಇಂಥ ಒಂದೇ ಕಥೆಯ ಹಲವಾರು ಆವೃತ್ತಿಗಳನ್ನು ಕೇಳಿರಬೇಕು ಎಂದುಕೊಂಡೆ.

ನಾನು ಇದೆಲ್ಲವನ್ನೂ ಹೇಳುವ ಹೊತ್ತಿನಲ್ಲೇ, ನಾನೂ ಈ ಅಪರಾಧ ಮಾಡಿದ್ದ ಒಂದು ಪ್ರಸಂಗದ ಬಗ್ಗೆ ಇಲ್ಲಿ ಹೇಳಿಕೊಳ್ಳಬೇಕು. ಕೆಲವು ವರ್ಷಗಳ ಹಿಂದೆ ನಾನು ಮೆಕ್ಸಿಕೋ ದೇಶಕ್ಕೆ ಭೇಟಿ ನೀಡಿದ್ದೆ. ಮೆಕ್ಸಿಕೋ ಮತ್ತು ಅಮೇರಿಕಾ ಸಂಯುಕ್ತ ಸಂಸ್ಥಾನದ ನಡುವೆ ರಾಜಕೀಯ ವಾತಾವರಣ ಬಿಗಿಯಾಗಿದ್ದ ಕಾಲವದು. ಎಲ್ಲಿ ನೋಡಿದರೂ ವಲಸೆಯ ಬಗ್ಗೆ ಚರ್ಚೆ. ವಲಸೆ ಎಂದ ಮೇಲೆ ಅದರಲ್ಲಿ ಮೆಕ್ಸಿಕೋ ಇರಲೇ ಬೇಕಷ್ಟೆ? ಒಂದು ರೀತಿಯಲ್ಲಿ ಮೆಕ್ಸಿಕನ್ನರು ಎಂದರೆ ವಲಸೆಗಾರರು ಎಂಬರ್ಥ ಬರುವ ಹಾಗೆ ಎಲ್ಲರೂ ಮಾತನಾಡುತ್ತಿದ್ದರು. ಅಮೇರಿಕಾದ ಆರೋಗ್ಯ ವ್ಯವಸ್ಥೆಯನ್ನು ವಲಸೆ ಬಂದ ಮೆಕ್ಸಿಕನ್ನರು ಹೇಗೆ ಹಾಳು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಬಿಸಿ ಬಿಸಿ ಚರ್ಚೆಯಾಗುತ್ತಿತ್ತು. ನನಗಿನ್ನೂ ನೆನಪಿದೆ. ನಾನು ಗ್ವಾಡಲಹಾರ ನಗರದಲ್ಲಿ ನನ್ನ ಮೊದಲ ದಿನ. ಜನ ತಮ್ಮ ಪಾಡಿಗೆ ತಾವು ಕೆಲಸಕ್ಕೆ ಹೋಗುವುದು, ದಾರಿಬದಿಯಲ್ಲಿ ರೋಲ್ ಮಾಡಿದ ಟಾರ್ಟಿಲ್ಲಾ ತಿನ್ನುವುದು, ಸಿಗರೇಟ್ ಸೇದುವುದು, ಹೊಟ್ಟೆ ತುಂಬ ನಗುವುದು - ಇಂಥದೇ ಸಹಜ ಸ್ಥಿತಿಯಲ್ಲಿದ್ದರು. ಇದನ್ನೆಲ್ಲ ನೋಡನೋಡುತ್ತಾ ನನ್ನ ದೇಹವೆಲ್ಲವೂ ನಾಚಿಕೆಯಿಂದ ಬಿಳಿಚಿತು. ಮಾಧ್ಯಮದಿಂದ ಪ್ರೇರಿತವಾದ ಮೆಕ್ಸಿಕನ್ನರ ಚಹರೆಯೊಂದು ನನ್ನ ಮನಸ್ಸಿನಲಿ ಸ್ಥಾಪಿತವಾಗಿ ಅವರಿಗೆ ಯಾವುದೇ ಬೇರೆ ಚಹರೆ ಇರಲಾರದು ಎಂಬ ಕಲ್ಪನೆಯೊಂದು ನನ್ನ ಮನಸ್ಸನ್ನು ಬಂಧಿಸಿಟ್ಟಿತ್ತು, ನಾನೂ 'ಒಂದೇ ಕಥನ'ಕ್ಕೆ ಬಲಿಯಾಗಿದ್ದೆ. ಅಂದು ನನ್ನನ್ನೇ ನಾನು ಹಳಿದುಕೊಂಡೆ. ನನ್ನೊಳಗೇ ಮೂಡಿದ ನಾಚಿಕೆಯಿಂದ ತಲೆ ತಗ್ಗಿಸಿದೆ. ಹೀಗೆಯೇ ಅಲ್ಲವೇ 'ಒಂದೇ ಕಥನ"ವನ್ನು ಸೃಷ್ಟಿಸುವುದು?

ನೀವು ಜನರಿಗೆ ಒಂದನ್ನು ಮಾತ್ರ ತೋರಿಸಿ. ಬೇರೆ ಏನನ್ನೂ ತೋರಿಸದೆ, ಒಂದನ್ನು ಮಾತ್ರ ಮತ್ತೆ ಮತ್ತೆ.ತೋರಿಸಿದಾಗ, ಅವರೇ "ಆ ಒಂದು ಕಥನ"ವಾಗುತ್ತಾರೆ. ನಮ್ಮ ಜಗತ್ತಿನಲ್ಲಿ ಕಾಣುವ 'ಅಧಿಕಾರ ಕೇಂದ್ರ'ಗಳನ್ನು ಗಮನಿಸದೆ ನಾವು 'ಒಂದೇ ಕಥನ'ದ ಬಗ್ಗೆ ಮಾತನಾಡಲಾಗುವುದಿಲ್ಲ. ಕಥೆಯನ್ನು ಯಾರು ಹೇಳುತ್ತಾರೆ, ಯಾರಿಗೆ ಹೇಳಲಾಗುತ್ತದೆ, ಯಾವಾಗ ಮತ್ತು ಎಷ್ಟು ಕಥೆಗಳನ್ನು ಹೇಳಲಾಗುತ್ತದೆ ಎನ್ನುವುದು ಈ ಶಕ್ತಿಯ ಮೇಲೆ ಅವಲಂಬಿತವಾಗಿದೆ. ಒಬ್ಬ ಮನುಷ್ಯನ ಬಗ್ಗೆ ಒಂದು ಕಥೆಯನ್ನು ಹೇಳಲು ಈ ಶಕ್ತಿ ಸಾಧ್ಯಗೊಳಿಸುತ್ತದೆ. ಇಷ್ಟು ಮಾತ್ರವಲ್ಲ. ಈ ಒಂದು ಕಥೆ ಮಾತ್ರ ಹೇಳತಕ್ಕದ್ದು ಎಂಬ ಪರಿಧಿಯನ್ನು ರಚಿಸಲೂ ಈ ಶಕ್ತಿಯ ಬಳಕೆಯಾಗುತ್ತದೆ. ಪ್ಯಾಲೆಸ್ಟೈನ್ ದೇಶದ ಕವಿ ಮೌರೀದ್ ಬಾರ್ಗೌಟಿ ಅವರು ಹೇಳಿದ ಒಂದು ಮಾತು ನೆನಪಾಗುತ್ತದೆ. 'ಒಂದು ಪ್ರದೇಶದ ಜನರನ್ನು ಅವರ ನೆನಪುಗಳಿಂದ ದೂರ ಮಾಡಲು ಒಂದು ಸುಲಭ ಸಾಧನವಿದೆ. ಅದೇನೆಂದರೆ, ಅವರ ಕಥೆಗಳನ್ನು ಹೇಳುವುದು ಮತ್ತು ಅವನ್ನು 'ಆಮೇಲೆ ಏನಾಯಿತೆಂದರೆ....' ಎಂದು ಪ್ರಾರಂಭಿಸುವುದು.' ಅಮೇರಿಕದ ಕಥೆಯನ್ನು, ಬ್ರಿಟಿಷರು ಬಂದಾಗಿನಿಂದ ಏನಾಯಿತು ಎಂಬುದರಿಂದ ಶುರು ಮಾಡದೆ, ಬಾಣಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುತ್ತಿದ್ದ ಅಮೇರಿಕದ ಮೂಲ ನಿವಾಸಿಗಳ ಕಥೆಯಿಂದ ಪ್ರಾರಂಭಿಸಲಾಯಿತು ಎಂದುಕೊಳ್ಳಿ. ಇಡೀ ಅಮೇರಿಕದ ಕಥೆಯೇ ಬೇರೆಯಾಗುವುದಿಲ್ಲವೇ? ಆಫ್ರಿಕನ್ ದೇಶಗಳು ಹೇಗೆ ಕಗ್ಗತ್ತಲ ಖಂಡವಾಗಿದೆ ಎಂಬುದರ ಬದಲಾಗಿ, ಆಫ್ರಿಕನ್ ದೇಶಗಳನ್ನು ವಸಾಹುತಿಶಾಹಿ ದೇಶಗಳು ಹೇಗೆ ಆಕ್ರಮಿಸಿದವು ಎಂದು ಪ್ರಾರಂಭಿಸಿದರೆ, ಕಥೆ ಬೇರೆಯೇ ಆಗುವುದಿಲ್ಲವೇ?

'ಒಂದೇ ಕಥನ'ವೆನ್ನುವುದು ಸ್ಟೀರಿಯೋಟೈಪ್ ಗಳನ್ನು ಸೃಷ್ಟಿಸುತ್ತದೆ. ತೊಂದರೆ ಇರುವುದು ಸ್ಟೀರಿಯೋಟೈಪ್‌ಗಳು ಸುಳ್ಳೇ ಆಗಿರುತ್ತವೆ ಎಂದಲ್ಲ. ಆದರೆ ಅವು ಅರ್ಧ ಸತ್ಯವಾಗಿರುತ್ತವೆ. ಅಪರಿಪೂರ್ಣವಾಗಿರುತ್ತವೆ. ಒಂದು ಕಥನವನ್ನು ಒಂದೇ ಕಥನವನ್ನಾಗಿ ಪರಿವರ್ತಿಸಿಬಿಡುತ್ತವೆ. ಯಾವುದಾದರೂ ಒಂದು ಸ್ಥಳವನ್ನು ಅಥವಾ ವ್ಯಕ್ತಿಯನ್ನು ಸಂಪೂರ್ಣವಾಗಿ ಅರಿಯಬೇಕೆಂದರೆ, ಅವುಗಳ ಬಗ್ಗೆ ಇರುವ ಎಲ್ಲ ಕಥನಗಳನ್ನೂ ನಾವು ಕೇಳಬೇಕು; ಅವುಗಳೊಂದಿಗೆ ಅನುಸಂಧಾನ ಮಾಡಬೇಕು. ಒಂದೇ ಕಥನದ ಪರಿಣಾಮವೆಂದರೆ ಮನುಷ್ಯನ ಘನತೆಯನ್ನು ಕಳೆಯುವುದು. ನಾವೆಲ್ಲರೂ ಒಂದೇ ಎಂಬ ಭಾವವನ್ನು ಹೊಂದುವುದು ಒಂದೇ ಕಥನದಿಂದ ಅಸಾಧ್ಯವಾಗುತ್ತದೆ. ನಾವು ಒಂದೇ ಎನ್ನುವುದರ ಬದಲಾಗಿ ನಾವೆಷ್ಟು ಭಿನ್ನ ಎಂದು ತೋರುವುದರಲ್ಲಿ "ಒಂದೇ ಕಥನ" ಆಸ್ಥೆ ವಹಿಸುತ್ತದೆ.

ನಾನು ಲಾಗೋಸ್‌ನಲ್ಲಿ ಪ್ರತಿ ವರ್ಷ ಬೇಸಗೆಯಲ್ಲಿ ಕಥೆಗಾರರ ಕಮ್ಮಟವನ್ನು ನಡೆಸುತ್ತೇನೆ. ಎಷ್ಟು ಜನರಿಗೆ ಅದರಲ್ಲಿ ಪಾಲ್ಗೊಳ್ಳುವ ಇಚ್ಛೆ ಇರುತ್ತದೆ ಮತ್ತು ತಮ್ಮ ಕಥೆಗಳನ್ನು ಹೇಳಿಕೊಳ್ಳಬೇಕೆನಿಸುತ್ತದೆ, ಬರೆಯಬೇಕೆನ್ನಿಸುತ್ತದೆ ಎಂದರೆ ನೀವು ನಂಬಲಾರಿರಿ. ನಾನು ಮತ್ತು ನನ್ನ ಪ್ರಕಾಶಕ ಮಿತ್ರರು ಸೇರಿ ಫಾರಾಫಿನ್ ಟ್ರಸ್ಟ್‌ನ್ನು ಸ್ಥಾಪಿಸಿದ್ದೇವೆ. ನಮ್ಮ ಕನಸು– ಇಡೀ ನೈಜೀರಿಯಾದಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವುದು ಮತ್ತು ಇರುವ ಗ್ರಂಥಾಲಯಗಳಲ್ಲಿ ಬಗೆ ಬಗೆಯ ಪುಸ್ತಕಗಳು ಇರುವ ಹಾಗೆ ನೋಡಿಕೊಳ್ಳುವುದು. ಕಥೆಗಳು ಬೇಕು. ಬೇರೆ ಬೇರೆ ಕಥೆಗಳು ಬೇಕು. ಬೇರೆಯವರನ್ನು ಛೇಡಿಸಲು, ಬಯಲುಗೊಳಿಸಲು ಕಥೆಗಳನ್ನು ಬಳಸಲಾಗಿದೆ. ಆದರೆ ಕಥೆಗಳನ್ನು ಮಾನವೀಯತೆಯನ್ನು ಸ್ಥಾಪಿಸಲು ಮತ್ತು ಸ್ವಂತಿಕೆಯನ್ನು ಅಭಿವ್ಯಕ್ತಿಸಲು ಕೂಡ ಬಳಸಬಹುದು. ಮನುಷ್ಯನ ಘನತೆಯನ್ನು ಕುಂದಿಸುವ ಸಾಮರ್ಥ್ಯವುಳ್ಳ ಕಥೆಗಳಿಗೆ ಆ ಘನತೆಯನ್ನು ಮತ್ತೆ ಸ್ಥಾಪಿಸುವ ಶಕ್ತಿಯೂ ಇದೆ.



(ಇದು ಲಾಗೋಸ್ ನಲ್ಲಿ ವಾಸವಾಗಿರುವ ನೈಜೇರಿಯಾದ ಪ್ರತಿಭಾವಂತ ಲೇಖಕಿ ಚಿಮಮಂಡಾ ನ್ಗೋಝಿ ಅಡಿಚೆ ಅವರ "Danger of a Single Story" ಎಂಬ ಪ್ರಸಿದ್ಧ ಭಾಷಣವೊಂದರ ಅನುವಾದ)

೬ನೇ ಪುಟದಿಂದ)

ಹಾಗೂ ಜನರು ಸಂವಿಧಾನವನ್ನು ತಮ್ಮದೆಂದು ಕಾಣುತ್ತಿದ್ದಾರೆ. ಆದರೂ ಅದುಭಾರತೀಯ ಸಾಮಾಜಿಕ ಪರಿಸ್ಥಿತಿಗಳ ಸಾಂಪ್ರದಾಯಿಕ ಬದಿಯನ್ನು ಪ್ರತಿನಿಧಿಸುತ್ತಿಲ್ಲ. ಅದು ಸಾಕಷ್ಟು ಮಟ್ಟಿಗೆ ಬಿಡುಗಡೆಯ ಪರವಾಗಿರುವುದರಿಂದ, ಜನರ ಸಹಾಯದಿಂದ ಈಗಿರುವ ಪರಿಸ್ಥಿತಿಗಳನ್ನು ಪರಿವರ್ತಿಸುವ ಕೆಲಸವನ್ನು ಕೈಗೊಳ್ಳಬಹುದಾಗಿದೆ. ಈ ದೃಷ್ಟಿಯಿಂದ ಭಾರತದ ಸಂವಿಧಾನವು, ರಾಷ್ಟ್ರೀಯ ಆಂದೋಲನವು ಜನರಿಗೆ ಕೊಟ್ಟ ಅತ್ಯುತ್ತಮ ಉಡುಗೊರೆಯಾಗಿದೆ. ಅದು ನಿಜವಾಗಿಯೂ ಭಾರತದ ಜನರ, ಭಾರತದ ಜನರಿಗೋಸ್ಕರ ಹಾಗೂ ಭಾರತದ ಜನರಿಂದಾದ ಸಂವಿಧಾನವಾಗಿದೆ.



ಇತಿಹಾಸ ಮತ್ತು ಕಾನೂನು ಶಾಸ್ತ್ರ ಕ್ಷೇತ್ರಗಳಲ್ಲಿ ಹಲವು ಕೃತಿಗಳನ್ನು ಪ್ರಕಟಿರುವ ಪ್ರೊ. ಸಲೀಲ್ ಮಿಶ್ರ ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾನಿಲಯದಲ್ಲಿನ ಕಾನೂನು ಶಾಲೆ ಮತ್ತು ವಿಶ್ವಪ್ರಜೆತನ ಕೇಂದ್ರದ ಡೀನ್ ಆಗಿ ಕೆಲಸ ಮಾಡುತ್ತಿದ್ದಾರೆ

(ಕೃಪೆ : **ಜನತಾ,** ನವೆಂಬರ್ ೨೫, ೨೦೧೮
ಕನ್ನಡಾನುವಾದ: **ಗಿರೀಶ. ವಿ.ವಾಘ್**)

೯ನೇ ಪುಟದಿಂದ)

ಇದೆ. ಸ್ವಯಂ ಶಿವಾಜಿಯೇ ಕಾರ್ಯಾರಂಭಗೊಳಿಸಿದ 'ಶಿವ ಭಾರತ' ಎಂಬ ಕಾವ್ಯದಲ್ಲಿ ಮಲ್ಲಿಕ್ ಅಂಬರ್‌ನ ಯಥೇಚ್ಛ ಗುಣಗಾನವಿದೆ. ಈತ ಸೂರ್ಯನಷ್ಟೇ ಕ್ಷಾತ್ರ ಎಂದು ವರ್ಣಿಸಲ್ಪಟ್ಟಿದ್ದಾನೆ. ಮತ್ತು ಶಿವಾಜಿಯ ತಂದೆ ಮತ್ತು ಅಜ್ಜ ಮಲ್ಲಿಕ್ ಅಂಬರ್ ನ ನಿಕಟ ವರ್ತಿಗಳು, ನಿಜಾಮ್ ಶಾನ ಆಪ್ತ ಒಡನಾಡಿಗಳು ಎಂಬುದೇ ಅವರ ಹೆಗ್ಗಳಿಕೆಯಾಗಿತ್ತು. ಎಂದು ಹೇಳಲಾಗಿದೆ.. ನಿಜಾಮ್ ಶಾ ಮುಸ್ಲಿಮನಾಗಿದ್ದ. ಆದರೆ ಆತನ ಪೂರ್ವಿಕರು ಬ್ರಾಹ್ಮಣರಾಗಿದ್ದರು. ಹಾಗಾಗಿ ಇಲ್ಲಿ ಸರಳ ಉತ್ತರಗಳಿಲ್ಲ.

ಇನ್ನು ಬಿಜಾಪುರದ ಆದಿಲ್ ಶಾಹಿ ಆಧಿಪತ್ಯ ಸ್ಥಾಪಿಸಿದ್ದು, ಯೂಸುಫ್ ಎಂಬಾತ. ಈತ ಪರ್ಷಿಯಾದಿಂದ ಹಡಗಿನಲ್ಲಿ ಬಂದು ದಖನ್ ಸೇರಿಕೊಂಡ. ಬರುವಾಗ ದಾರಿಯಲ್ಲಿ ತನಗೊಂದು ವಂಶವಾಳಿಯನ್ನು ಕೃತ್ರಿಮವಾಗಿ ಸೃಷ್ಟಿಸಲು ನಿರ್ಧರಿಸಿಕೊಂಡು, ತಾನು ಬಹಳ ಹಿಂದೆ ಕಳೆದು ಹೋದ ಒಟ್ಟೋಮನ್ ಸಾಮ್ರಾಟನ ಮಗ ಎಂದು ಹೇಳಿಕೊಂಡ. ಸ್ಥಳೀಯ ಮರಾಠ ಯುವತಿಯನ್ನು ಮದುವೆಯಾದ. ಈ ರೀತಿ ಆದಿಲ್ ಶಾಹಿ ವಂಶ ಅಸ್ತಿತ್ವಕ್ಕೆ ಬಂದಿತು. ಇದು ಭಾಗಶಃ ಪರ್ಷಿಯನ್ ವಂಶ ಕೂಡ ಹೌದು, ಇನ್ನರ್ಧ ಮರಾಠಾ-ಹಿಂದೂ ವಂಶ ಕೂಡ ಹೌದು. ಹಾಗಾಗಿ ಬಿಜಾಪುರದ ವಿವಿಧ ಆದಿಲ್‌ಶಾಹಿ ಸುಲ್ತಾನರು, ತಮ್ಮಿಚ್ಛೆಗೆ ತಕ್ಕಂತೆ ತಮ್ಮ ವಂಶಜರ ಹಿನ್ನೆಲೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದರು. ಕೆಲವರು ಪರ್ಷಿಯನ್ ಶಿಯಾ ಮೂಲವನ್ನು, ಕೆಲವರು ಮಹಾರಾಷ್ಟ್ರದ ಹಿನ್ನೆಲೆಯನ್ನು, ಕೆಲವರು ಸಂಸ್ಕೃತ ಪರಂಪರೆಯ ಹಿರಿಮೆಯನ್ನು ವೈಭವೀಕರಿಸಿದರು. ನೀವು ತಿರುಪತಿ ದೇವಸ್ಥಾನದಲ್ಲಿರುವ ಸಾಮ್ರಾಟ್ ಕೃಷ್ಣದೇವರಾಯ ತನ್ನ ಇಬ್ಬರು ಪತ್ನಿಯರೊಡನಿರುವ ಕಂಚಿನ ವಿಗ್ರಹ ಗಮನಿಸಿ, ಅದನ್ನೀಗ ಜರತಾರಿಯಲ್ಲಿ ಸುತ್ತಿದ್ದಾರೆ. ಆದರೆ ಕೃಷ್ಣದೇವರಾಯ ಧರಿಸಿರುವ ಟೋಪಿಯನ್ನು ನೋಡಿ. ಅದು ಪರ್ಷಿಯನ್ ಟೋಪಿ. ವಿಜಯನಗರದಲ್ಲೂ ಕೂಡ, ವೇಷಭೂಷಣಗಳು, ಅಲಂಕಾರಗಳು, ಉಡುಗೆತೊಡುಗೆಗಳು ಪರ್ಷಿಯನ್ ಶೈಲಿಯಿಂದ ಪ್ರಭಾವಿತಗೊಂಡಿದ್ದವು. ಅಂದಿನವರಿಗೆ ಕೂಡ ಈಗ ನಮ್ಮಂತೆಯೇ. ರಾಜಕೀಯ, ಅಧಿಕಾರ ಮೋಹ, ದುರಾಸೆ, ಹಣ, ಇವುಗಳೇ ಅವರ ಪ್ರತಿನಿತ್ಯದ ಹೋರಾಟ, ಬಡಿದಾಟ, ಕಾದಾಟಗಳಿಗೆ ಪ್ರೇರಣೆಗಳಾಗಿದ್ದವೇ ವಿನಃ ಧರ್ಮವಲ್ಲ. ಅವರಾರೂ ಬೆಳಗಾಗಿ ಎದ್ದು ಈ ದಿನ ನಾನು ಧರ್ಮಕ್ಕಾಗಿ ಹೋರಾಡುತ್ತೇನೆ ಎಂದು ಕೊಂಡಿರಲಿಲ್ಲ. ಧರ್ಮ ಎಂಬುದು ಕೇವಲ ನೆಪ ಮಾತ್ರ. ಇಂದು ನಮಗೆ ರಾಷ್ಟ್ರೀಯತೆ ಎಂಬ ನೆಪವಿದ್ದಂತೆ.



(ಮೂಲತಃ ಕೇರಳದವರಾದ ಮನು ಪಿಳ್ಳೈ, ತಮ್ಮ ದ ಐವರಿ ತ್ರೋನ್ ಮತ್ತು ರೆಬೆಲ್ ಸುಲ್ತಾನ್ಸ್ ಎಂಬ ಇತಿಹಾಸನಾ ಕೃತಿಗಳಿಂದ ಪ್ರಸಿದ್ಧರಾದವರು. ಇವರು ಬಿಬಿಸಿಗಾಗಿ ಖ್ಯಾತ ಇತಿಹಾಸ ಸಂಶೋಧಕ ಸುನೀಲ್ ಖಿಲ್ನಾನಿಯವರ ಜೊತೆ ಸಂಶೋಧನೆ ನಡೆಸಿದವರು.)

(ವಾಟ್ಸಾಪ್‌ನಿಂದ ಕನ್ನಡಕ್ಕೆ: ಬಿ ಎಸ್ ದಿವಾಕರ, ಆಲ್ಮೋರಾ)

೭ನೇ ಪುಟದಿಂದ)

ರೂಪುಗೊಂಡಿರುವ ಉತ್ಪಾದನೆ, ವಿತರಣೆ ಹಾಗೂ ಮಾರಾಟ ಜಾಲಗಳು, ವಿದೇಶೀ ಆರ್ಥಿಕ ನೆರವಿನ, ಬಂಡವಾಳ ಹೂಡಿಕೆಯ ಅಗತ್ಯಗಳು ಪರೋಕ್ಷವಾಗಿ ಭಾರತೀಯ ಏಕೀಕೃತ ವ್ಯವಸ್ಥೆಯ ಅಂತಿಮ ಹಂತವನ್ನು ಸಾಧಿಸಿಕೊಂಡಿವೆ. ಅಂತಿಮವಾಗಿ ಇದೊಂದು ಸಾಮಾಜಿಕ ಮನಃಸ್ಥಿತಿಯಂತೆ ಕಾರ್ಯ ಮಾಡತೊಡಗಿದ್ದು, ಜನರು ತಾವೇ ಗಳಿಸಿಕೊಂಡ ರಾಜ್ಯದ ಗಡಿಗಳನ್ನು, ಭಾಷೆಯ ಸಾರ್ವಭೌಮತ್ವವನ್ನು, ಸ್ವಾಭಿಮಾನವನ್ನು ಬಿಟ್ಟುಕೊಡಲು ಸಿದ್ಧರಾಗಿರುವವರಂತೆ, ಜಾಗತಿಕ ಆರ್ಥಿಕತೆಯ ಜಾಲದಲ್ಲಿ ಒಳ್ಳೆಯ ಸಂಬಳದ ನೌಕರಿಗಳನ್ನು ಸಂಪಾದಿಸುವ ಗುರಿಯೊಂದನ್ನೇ ಹೊಂದಿದವರಂತೆ ಆಡತೊಡಗಿದ್ದಾರೆ.

ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ನಿಧಿ ಮುಂತಾದವುಗಳ ನಿರ್ದೇಶನ ಮತ್ತು ನಿಯಮಗಳೇ ಶಿಕ್ಷಣ, ಆರೋಗ್ಯ, ಸಾರಿಗೆ, ಸಂಪರ್ಕ ಮುಂತಾದ ಎಲ್ಲ ಅಂಶಗಳನ್ನು ನಿಯಂತ್ರಿಸುತ್ತಿವೆ. ಅವು ಜಾಗತಿಕ ಮಾದರಿಗಳನ್ನು ಜಾರಿಗೊಳಿಸಲು ಸನ್ನದ್ಧವಾಗಿವೆ. ಪ್ರಪಂಚವೊಂದು ಗ್ರಾಮ ಎನ್ನುವ ಘೋಷಣೆ ಮತ್ತು ಅದರ ಹಿಂದೆ ನಾವು ಕಳೆದುಕೊಳ್ಳಲಿರುವ ಪ್ರಾದೇಶಿಕ ಸ್ವಾಯತ್ತತೆ, ಭಾಷಾ ಸ್ವಾಭಿಮಾನ, ಇತಿಹಾಸ ಪರಂಪರೆಗಳ ವೈಶಿಷ್ಟ್ಯತೆ ಹಾಗೂ ದೇಸೀ ಆರ್ಥಿಕ ಅಭಿವೃದ್ಧಿಯ ಸಾಧ್ಯತೆಗಳು ಕ್ಷೀಣಗೊಂಡಿವೆ. ಅವುಗಳ ವಾಸ್ತವಿಕ ಅಗತ್ಯತೆಯನ್ನು ಮನಗಾಣಲೂ ಆಗದಷ್ಟು ಕಣ್ಣುಕಾಣದ ಸ್ಥಿತಿಯ ಸಾಮಾಜಿಕ ಮನೋಭಾವ ಕ್ರಮೇಣ ರೂಪುಗೊಳ್ಳುತ್ತಿದೆ.

ಭಾಷಾ ಅಸ್ಮಿತೆ ಮತ್ತು ಹಿಂದೂ ರಾಷ್ಟ್ರವಾದ

ರಾಜ್ಯ ಸರ್ಕಾರಗಳಲ್ಲಿ ತಮ್ಮ ಪಕ್ಷದ ಬಾವುಟ ಹಾಗೂ ತಮ್ಮ ಮುಖಂಡರಿಗೆ ಮಂತ್ರಿ ಪದವಿಗಳು ಇವೆ ಎಂಬ ಮಟ್ಟಿಗೆ ಸಂತುಷ್ಟಗೊಂಡು, ಜಾಗತಿಕ ಆರ್ಥಿಕ ವ್ಯವಸ್ಥೆ ಇಲ್ಲಿ ಹೂಡುತ್ತಿರುವ ಬಂಡವಾಳದ ವಹಿವಾಟಿನಲ್ಲಿ ಸಿಗುವ ಕಳ್ಳಪಾಲನ್ನು ತಮ್ಮ ಕಪ್ಪುಹಣವನ್ನಾಗಿ ಭದ್ರಪಡಿಸಿಕೊಳ್ಳಲು ಮತ್ತು ತಮ್ಮ ಜಾತಿ ಹಾಗೂ ಕುಟುಂಬಗಳ ಹಿತಗಳ ಬಗ್ಗೆ ಮಾತ್ರ ಆಸಕ್ತಿ ಹೊಂದಿದಂತೆ ಪ್ರಾದೇಶಿಕ ಪಕ್ಷಗಳು ಕಾಣುತ್ತಿವೆ. ಇದರ ಜೊತೆಗೆ ಈಗ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು ಅಂತಾರಾಷ್ಟ್ರೀಯ ಹಾಗೂ ಭಾರತೀಯ ವಾಣಿಜ್ಯ ಮನೆತನಗಳ ಹಿತಾಸಕ್ತಿಗಾಗಿಯೇ ಟೊಂಕ ಕಟ್ಟಿದಂತಿದ್ದು, ಅದಕ್ಕೆ ಭಾರತ ರಾಷ್ಟ್ರ ಪ್ರೇಮವೂ ಸಾಲದೆಂದಾಗಿ 'ಹಿಂದೂರಾಷ್ಟ್ರ' ವಾದವೆನ್ನುವ ಹೊಸ ಅಮಲು ಪದಾರ್ಥವನ್ನು ಎಲ್ಲೆಡೆ ಹರಡುತ್ತಿದೆ. ಹಿಂದೂರಾಷ್ಟ್ರವೆನ್ನುವ ಧಾರ್ಮಿಕ ಮುಖವಾಡದ ಪದಜಾಲಕ್ಕೆ ಮತ್ತು ಅದರ ಸಾಧನೆಗೆ ಬಿಜೆಪಿ ಹಾಕಿಕೊಂಡಿರುವ ಗುಪ್ತ ಕಾರ್ಯಸೂಚಿಗೆ ಭಾಷಾವಾರು ರಾಜ್ಯಗಳ ಪ್ರಬಲ ಅಸ್ತಿತ್ವ ದೊಡ್ಡ ಅಡಚಣೆಯಾಗುತ್ತಿದೆ. ಹಿಂದೂ ಐಕ್ಯತೆಯೆನ್ನುವ ಅಖಿಲಭಾರತ ವ್ಯಾಪ್ತಿಯ ಕೋಮುವಾದಿ ಅಸ್ಮಿತೆಯ ವಿನ್ಯಾಸಕ್ಕೆ ಭಾಷಾರಾಷ್ಟ್ರೀಯತೆಯ ಅಭಿಮಾನ ನುಂಗಲಾರದ ತುತ್ತು. ಯಾಕೆಂದರೆ ಭಾಷಾ ರಾಷ್ಟ್ರೀಯತೆಯ ಅಸ್ಮಿತೆಯು ಧರ್ಮ, ಜಾತಿ, ಲಿಂಗದ ಗಡಿಗಳನ್ನು ಮೀರಿದ ಒಂದು ಜನಸಮುದಾಯದ ಲೌಕಿಕ ಅಸ್ಮಿತೆ. ಭಾಷೆ ಒಂದು ಪರಂಪರೆ ಹೇಗೋ ಹಾಗೆಯೇ ಲೌಕಿಕ ಅಭ್ಯುದಯದ ಸಾಧನ. ಅದು ಗತದಿಂದ ಪ್ರೇರಣೆ ಪಡೆದಿದೆಯೇ ಹೊರತು ಗತದಲ್ಲಿ ಮೈಮರೆಯುವುದಿಲ್ಲ. . ಆಧುನಿಕ ಕಾಲದಲ್ಲಿ ಅದನ್ನೊಂದು ಸ್ವತಂತ್ರ ಸ್ವಾಯತ್ತ ರಾಜಕೀಯ ಆರ್ಥಿಕ ವ್ಯವಸ್ಥೆಯನ್ನಾಗಿ ಪಡೆಯಲು ಅದರೊಳಗಿನ ವಿವಿಧ ಸಾಮಾಜಿಕ ಪಂಗಡಗಳನ್ನು 'ಕನ್ನಡ ಒಂದೇ ಕುಲ' ಎನ್ನುವ ನೆಲೆಗಟ್ಟಿನಲ್ಲಿ ಸಾಧ್ಯಗೊಳಿಸಲು ಹೋರಾಡುತ್ತದೆ.

ಭಾಷಾರಾಷ್ಟ್ರೀಯತೆಗಳಿಗೆ ಈ ಬಗೆಯ ಸ್ವಯಂಸಿದ್ಧ ಅಸ್ಮಿತೆಯಿರುವುದರಿಂದ ಅದಕ್ಕೆ ಪೂರಕವಾಗಿ ಸಂಯುಕ್ತ ಗಣರಾಜ್ಯ ವ್ಯವಸ್ಥೆಯನ್ನು ಉಳಿಯಗೊಟ್ಟರೆ ಬಿಜೆಪಿಯ ಕಾರ್ಯಸೂಚಿಗೆ ವಿಘ್ನ ಒದಗುತ್ತದೆ. ಆದ್ದರಿಂದಲೇ ಇತರೆ ಅಖಿಲಭಾರತೀಯ ರಾಜಕೀಯ ಪಕ್ಷಗಳಿಗಿಂತ ಶೀಘ್ರವಾಗಿ ಭಾರತೀಯ ಸಂವಿಧಾನದ ಒಕ್ಕೂಟ ವ್ಯವಸ್ಥೆಯ ಅಂಶಗಳ ಕತ್ತು ಹಿಚುಕಿ ಹರೋಹರಗೊಳಿಸಲು ಅದು ಸಮರೋಪಾದಿ ಕಾರ್ಯ ನಿರ್ವಹಿಸುತ್ತಿದೆ. ಆದರೆ ಪ್ರಾದೇಶೀಕ ಅಸ್ಮಿತೆಯ ರಾಜಕೀಯ ಶಕ್ತಿಗಳು ಏನು ಮಾಡುತ್ತಿವೆ? ಇದು ನಿಜವಾದ ಸವಾಲಿನ ಕಾಲ.



(ಹಾರೋಹಳ್ಳಿಯಲ್ಲಿ ನೆಲೆಸಿರುವ ಬಂಜಗೆರೆ ಜಯಪ್ರಕಾಶ್ ಅವರು ಕರ್ನಾಟಕದಲ್ಲಿನ ಹಲವು ಪ್ರಗತಿಪರ ಚಳುವಳಿಗಳೊಂದಿಗೆ ಒಡನಾಡಿದ ಕನ್ನಡದ ಕವಿ ಮತ್ತು ಚಿಂತಕ.)


ನವಿಲುಗರಿ

ಕಲ್ಲು ಮಂಟಪ

ಎತ್ತರದ ಬೋಳು ಗುಡ್ಡದ ತುದಿಯಲ್ಲಿ
ಕಲ್ಲು ಮಂಟಪ
ಒಂಟಿಯಾಗಿದೆ
ಗೊಮ್ಮಟನ ಹಾಗೆ–
ಎಲ್ಲ ಕಳಚಿಕೊಂಡಿದೆ–
ಜಗದ ಪರಿವೆಯೆ ಇರದೆ,ನಿರಾಳ
ಆಕಾಶಕ್ಕೆ ಮುಖ ಮಾಡಿದೆ
ಧ್ಯಾನಸ್ಥವಾದಂತಿದೆ.

ಗಾಳಿಯೂ ಚಲಿಸಲು ಸಂಕೋಚಪಡುತ್ತ
ಸುಮ್ಮನೇ ಕುಳಿತುಕೊಂಡಿದೆ.


ಕೆಳಗೆ ,ಮತ್ತೂ ಕೆಳಗೆ
ಮೂಲಾಧಾರದಲ್ಲಿ
ಮರಗಿಡಗಳು,ಹರಿಯುವ
ತೊರೆಗಳು,ಜೀವ ಜಂತುಗಳು
ಸದ್ದಿರದೆ,ನಿದ್ದೆ ಹೋದಂತಿವೆ.



ಚಿತ್ರ: ಪಿ.ಪಿ. ಗುಜ್ಜಾರಪ್ಪ

ಹಿಂದೆ ಇಲ್ಲೇ ಇದ್ದ
ಯೋಗಿಯ ಧ್ಯಾನದ ಪ್ರಭಾವಳಿ
ಕಂಬಗಳಿಗೆ, ಛಾವಣಿಗೆ
ಅಂಟಿಕೊಂಡಂತಿವೆ–ಆ ವಲಯದಲ್ಲೇ
ಎಲ್ಲ ತಟಸ್ಥವಾಗಿರುವಂತೆ
ಕಲ್ಲು ಮಂಟಪವೇ
ಯೋಗಿಯಾಗಿಬಿಟ್ಟಂತಿದೆ.

ತಾನೇನು ಧ್ಯಾನಿಸುತ್ತಿದೆಯೋ
ಅದೇ ತಾನಾಗುವ
ಹಾದಿಯಲ್ಲಿರುವಂತಿದೆ.




ಆಕಾಶದಲ್ಲಿನ ಸ್ನಿಗ್ಧ ಬೆಳಕು
ಸಮೀಪಿಸುತ್ತಿದೆ.

–ಸುಬ್ರಾಯ ಚೊಕ್ಕಾಡಿ


ಎರಡು ಚುಕ್ಕಿಗಳು

೧.
ಆಟದ ಮೈದಾನದಲ್ಲಿ
ಮಕ್ಕಳು ನೋಡಿದ್ದು
ಇರುವೆ ಗೂಡು
ಪುಟಿಯುವ ಚೆಂಡು
ಚಿಣ್ಣರ ದಂಡು
ಮರ ಏರಲೊಂದೇಣಿ
ಮರಳಿ ಮಣ್ಣಿಗೆ ನಿಲುಕಲು
ಸಲೀಸು ಜಾರುಗುಪ್ಪೆ
ಅಂಕಣದ ಚೌಕ ದಾಟಿದರೆ
ವೃತ್ತದಲೊಂದು ವೃತ್ತ
ಅಲ್ಲೊಂದು ಬಿಲ
ಅಗೋಚರ ನೆಲೆ



ಚಿತ್ರ: ವಿಜಯಶ್ರೀ ಹಾಲಾಡಿ

೨.
ಮನೆಯ ಅಂಗಳದ
ಮಳೆಯ ಚಿಟಪಟ
ಸದ್ದನ್ನು ಆಲಿಸಲೂ
ವ್ಯವಧಾನವಿರದ ಓಟ
ನನ್ನಂಥವಳ ಪರದೆಯಲಿ
ಹುದುಗಿದೆ ಹಿಮಕವಿದ ಕಣಿವೆ
ಎಂದೋ ಮಡಿಚಿಟ್ಟ ಪುಸ್ತಕದ ಕಿವಿ
ಅಳಿಸಿ ಹೋಗಿದೆ ಪುಟ್ಟ ಹಕ್ಕಿ ಕೂತು
ಹಾರಿದ ಕೊಂಬೆಯ ಗುರುತು
ಅರಳೀಮರವಾಗಿದೆ ಮರೆವು
೩.
ಚಿತ್ರವಾಗಿದೆ ಗೆರೆ
ಎಂದಿಗೂ ಮಾಯದ ಕೊರೆ



–ಆರ್. ಪವಿತ್ರ ಪ್ರಿಯಭಾಷಿಣಿ

ಕಲ್ಲು ಕರಗುವ ಸಮಯ

ಧಿಗ್ಗನೆ ಉರಿವ ಬೆಂಕಿಗೆ ಸುತ್ತಲಿನ ಗಿಡ ಹುಲ್ಲು ಹುಳು ನಾಶ
ತಣ್ಣಗಾದ ಗಾಳಿಯಲಿ ಮೈಯೊಡ್ಡದರೂ ನಿರ್ಜೀವ ಸಜೆ
ಬೇಡ ಉಣ್ಣುವ ಮಕ್ಕಳ ಸಂಕಟ ವಿಕಲಾಂಗರ ನರಳಾಟ
ಯಾರಿಗುಂಟು ಯಾರಿಗಿಲ್ಲ ಸಂಬಂಧಗಳ ಹಪಾಹಪಿ

ಬೀದಿಯಲಿ ರಕ್ತದ ಕಲೆಗಳು ನೂರೆಂಟು ಚಿಂದಿ ಬಟ್ಟೆಗೆ
ಹಸಿದವರ ಬೊಬ್ಬೆಗೆ ಕಿವಿಗೊಡದವರ ಮುಂದೆ ಶವಗಳು
ಲೋಕವೇ ನಿದ್ರಿಸುವಂತೆ ಭಾಸವಾಗುತ್ತಿದೆ ಇಲ್ಲಿ
ರೆಕ್ಕೆಯಿರದ ಹಕ್ಕಿ ಮೇಲೆ ಹಾರಲೆನ್ನುವ ವ್ಯಂಗ್ಯ

ಏನಿದ್ದು ಇಲ್ಲದೆಯೂ ದಿನವೂ ಹುಟ್ಟಿನ ಸಡಗರ
ಅನ್ನ ನೀರು ನೆರಳ ಕೊರತೆಯಲ್ಲೂ ಸಣ್ಣಗೂಡು
ಚೇತನಕೆ ದಾರಿಗಳು ಖುಲ್ಲಂಖುಲ್ಲ
ನಾವೇ ಹೆದರುತ್ತೇವೆ ಬದುಕಿನ ಹೋಈರಾಟಕ್ಕೆ



ನಗರದ ಯಂತ್ರಗಳ ಸದ್ದಿಗೂ ಕಿವಿಗೊಡುತ್ತಿಲ್ಲ
ಮೂಕ ಕಿವುಡರಾಗಿಯೂ ಹೊರಳುತ್ತಿದೆ ಕಾಲ
ಎಷ್ಟು ಸಂತಸವೋ ಅಳೆಯಲಾಗುತ್ತಿಲ್ಲ
ಪುರುಸೊತ್ತಿರದ ಜನಕ್ಕೆ ವರ್ತಮಾನವೇ ಇಲ್ಲ

ಹಕ್ಕಿ ಹಾಡಿದರೇನು ಹೂವು ಅರಳಿದರೇನು
ಕನಸದೇ ಇರದ ಬದುಕಿಗೆ ಲವಲವಿಕೆಯೂ ಇರದು
ಬೆಳಗಿನಿಂದ ಸಂಜೆಯವರೆಗಷ್ಟೇ ವೇಷಧಾರಿಗಳು!

–ಅಕ್ಬರ್ ಕಾಲಿಮಿರ್ಚಿ

ಕುಪ್ಪಳ್ಳಿ ಅಧ್ಯಯನ ಶಿಬಿರದ ಶಿಬಿರಾರ್ಥಿಗಳ ಗಮನಕ್ಕಾಗಿ

ಈ ಹಿಂದೆ ಅಕ್ಟೋಬರನಲ್ಲಿ ನಿಗದಿಯಾಗಿದ್ದ ಅಧ್ಯಯನ ಶಿಬಿರಕ್ಕೆ ಶಿಬಿರಾರ್ಥಿಗಳಾಗಿ ಹೆಸರು ನೊಂದಾಯಿಸಿಕೊಂಡಿದ್ದವರು ಈಗ ಇದೇ ಜನವರಿ ೧೨ ಹಾಗೂ ೧೩ರಂದು ನಡೆಯಲಿರುವ ಶಿಬಿರಕ್ಕೆ ಶಿಬಿರಾರ್ಥಿಗಳಾಗಿ ಬರಲು ತಮ್ಮ ಹಳೆಯ ನೊಂದಾವಣೆಯನ್ನು ನವೀಕರಿಸಿಕೊಳ್ಳುವುದು ಅಗತ್ಯ. ಹಾಗೆ ನವೀಕರಿಸಿಕೊಳ್ಳದೆ ಬಂದವರಿಗೆ ಸೀಮಿತ ವಸತಿ ಸೌಕರ್ಯದ ಕಾರಣದಿಂದಾಗಿ ಪ್ರವೇಶ ಖಚಿತವಿಲ್ಲ ಶಿಬಿರಾರ್ಥಿಗಳು ತಮ್ಮೊಂದಿಗೆ ಒಂದು ಹೊದಿಕೆ ಮತ್ತು ಒಂದು ಬ್ಯಾಟರಿಯನ್ನೂ ತರಲು ಸೂಚಿಸಬಯಸುತ್ತೇವೆ.

ಸಂಪರ್ಕ ಸಂಖ್ಯೆಗಳು: 9731929731 / 9480141984

–ಅಧ್ಯಕ್ಷರು: ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ, ಶಿವಮೊಗ್ಗ

ಕಾವ್ಯ–ನಾಟಕ–ಸಂಸ್ಕೃತಿ–ರಾಜಕಾರಣ ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

ದರ್ಶನೀಯತೆಯ ಹಂಗಿಗೆ ಸಿಕ್ಕ ದಾರ್ಶನಿಕತೆ




ಕುವೆಂಪು ವಿರಚಿತ 'ಶ್ರೀರಾಮಾಯಣದರ್ಶನಂ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತು ಐವತ್ತು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಈ ಮಹಾಕಾವ್ಯದ ನಾಟಕ ರೂಪವೊಂದನ್ನು ಸಿದ್ಧಪಡಿಸಿರುವ ಮೈಸೂರಿನ ರಂಗಾಯಣವು ರಾಜ್ಯಾದ್ಯಂತ ಇದರ ಪ್ರದರ್ಶನ ಯಾತ್ರೆಯೊಂದನ್ನು ನಡೆಸುತ್ತಿದೆ. ಈ ಯಾತ್ರೆ ಇತ್ತೀಚೆಗೆ ಶಿವಮೊಗ್ಗಕ್ಕೆ ಬಂದಿದ್ದಾಗ ಅದರ ಎರಡನೇ ದಿನದ ಪ್ರದರ್ಶನವನ್ನು ನಾನು ನೋಡಿದೆ.

ಶ್ರೀರಾಮಾಯಣದರ್ಶನಂ ಒಂದು ಬೃಹತ್ ಸಂಪುಟ. ಜೊತೆಗೆ ಅದು ಕುವೆಂಪು ಅವರ ಪ್ರಕಾರ, ಅದರ ಹೆಸರೇ ಸೂಚಿಸುವಂತೆ ಮಹಾಕಾವ್ಯ ಮಾತ್ರವಾಗಿರದೆ ಮಹಾದರ್ಶನವೂ ಆಗಿದೆ. ಹಾಗಾಗಿ ಅದಕ್ಕೆ, ಅದರ ಕುವೆಂಪು ವಿಶಿಷ್ಟವಾದ ಕಾವ್ಯಭಾಷೆಗೆ ಚ್ಯುತಿಯಾಗದಂತೆ ಸಾಮಾನ್ಯ ಪ್ರೇಕ್ಷಕರ ಆಸಕ್ತಿಯನ್ನು ಹಿಡಿದಿಡುವ ರೀತಿಯಲ್ಲಿ ಮತ್ತು ಗಾತ್ರದಲ್ಲಿ ಸಂಕಲಿಸಿ ರಂಗರೂಪ ನೀಡುವುದೂ ಮತ್ತು ಅದನ್ನು ಪ್ರಸ್ತುತಪಡಿಸುವುದೂ ದೊಡ್ಡ ಸವಾಲಿನ ಸಾಹಸವೇ ಸರಿ. ಇದರಲ್ಲಿ ರಂಗರೂಪದ ನಿರ್ಮಾಪಕರೂ (ಜಗದೀಶ ಮನೆವಾರ್ತೆ ಮತ್ತು ಕೃಷ್ಣಕುಮಾರ್ ನಾರ್ಣಕಜೆ) ಮತ್ತು ನಿರ್ದೇಶಕರೂ (ಕೆ.ಜಿ. ಮಹಾಬಲೇಶ್ವರ) ಸಾಕಷ್ಟು ಯಶಸ್ವಿಯಾಗಿದ್ದಾರೆ ಎಂದೇ ಹೇಳಬೇಕು. ಇದಕ್ಕೆ ಮುಖ್ಯ ಕಾರಣ ಈ ಇಬ್ಬರೂ ಸೇರಿ ನಾಟಕವನ್ನು ಮೂಲಕೃತಿಯ ದಾರ್ಶನಿಕತೆಯನ್ನು ಮೀರಿ ದರ್ಶನೀಯಗೊಳಿಸಿರುವುದು. ಒಟ್ಟು ಸುಮಾರು ಐದು ತಾಸುಗಳ ಅವಧಿಯ ಈ ನಾಟಕದ ಮೊದಲರ್ಧವಂತೂ ರಂಗಭೂಮಿಯ ಎಲ್ಲ ಹಳೆಯ ಮತ್ತು ಹೊಸ ಬಣ್ಣ–ಬೆಡಗು, ತಂತ್ರ–ಮಂತ್ರ, ಸ್ವರ–ಲಯಗಳನ್ನು ಸೂರೆ ಮಾಡಿ ಒಂದು ನೋಡು ಹಬ್ಬವನ್ನಾಗಿ ಮಾಡಲಾಗಿದೆ. ರಾವಣನ ರಂಗಪ್ರವೇಶ, ಪುಷ್ಪಕ ವಿಮಾನದಲ್ಲಿ ಸೀತಾಪಹರಣ,. ಕುಂಭಕರ್ಣನನ್ನು ಎಚ್ಚರಿಸುವ ಪ್ರಸಂಗ ಈ ರಂಗ ವೈಭವಕ್ಕೆ 'ಉಜ್ವಲ' ಉದಾಹರಣೆಗಳು

ಈ ಮಹಾಕಾವ್ಯ ಮೂಲ ರಾಮಾಯಣದಂತೆಯೇ ಅಂತರ್ಸಂಬಂಧ ಪಡೆದ ಅಸಂಖ್ಯಾತ ಕಥೆ–ಉಪಕಥೆಗಳ, ಪಾತ್ರ–ಉಪಪಾತ್ರಗಳ ಮಹಾ ಹೆಣಿಗೆ. ಇದನ್ನೇ ಕವಿ 'ಸೂಕ್ಷ್ಮಾತಿಸೂಕ್ಷ್ಮತಂತ್ರದಿಂ ಬಿಗಿದು ಕಟ್ಟಿಯುಂ ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯಮಂ ನೀಡಿ'ರುವ 'ನೆಯ್ದಾಳುತಿತವ ವಿರಾಣ್ಮನಂ' ಎಂದು ಕರೆದಿರುವುದು. ಜೊತೆಗೆ 'ಪಾಪಿಗುದ್ಧಾರಮಹುದೌ ಈ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್' ಎಂಬ ಪೂರ್ಣ ದೃಷ್ಟಿಯ ನಂಬಿಕೆ. ಇವೆರಡೂ ಸೇರಿ ಈ ಮಹಾಕಾವ್ಯದ ದರ್ಶನವನ್ನು ಸೃಷ್ಟಿಸಿ ಇದನ್ನು ಅನನ್ಯಗೊಳಿಸಿರುವುದು ಎಂದು ಸ್ವತಃ ಕವಿಯೂ, ಅವರ ಅಭಿಮಾನಿಗಳೂ ನಂಬಿದ್ದಾರೆ. ಇದು ಈ ನಾಟಕ ರೂಪದ ಜವಾಬ್ದಾರಿ ಹೊತ್ತವರೂ ನಂಬಿದಂತಿದ್ದು, ಅದೇ ಈ ನಾಟಕದ ಒಡಕಿಗೂ–ಮೊದಲರ್ಧದಿಂದ ಕೊನೆಯರ್ಧ–ಕಾರಣವಾಗಿದ್ದಂತೆ ತೋರುತ್ತದೆ. ಮೂಲ ಕೃತಿಯ ಗಾತ್ರವನ್ನು ಕುಗ್ಗಿಸಿರುವುದರಿಂದಾಗಿ ಕಥೆಯ ಮಹಾಹೆಣಿಗೆಯಲ್ಲಿ ಉಂಟಾಗಿರುವ ಸಿಕ್ಕುಗಳು, ಪಾತ್ರಗಳ ಅಸಮಗ್ರ ಪರಿಚಯ, ರಂಜಕತೆಯನ್ನು ಹೆಚ್ಚಿಸಲು ಕೆಲವೆಡೆ ನಾಟಕವನ್ನು ಲಂಬಿಸಿರುವುದು (ಉದಾ: ವಾಲಿ–ಸುಗ್ರೀವ ಪ್ರಸಂಗ) ಇತ್ಯಾದಿ ಕಾರಣಗಳಿಂದಾಗಿ, ಮೂಲಕಾವ್ಯದಲ್ಲೇ ಅದು ಹೇಳುವ ತತ್ವಗಳ ನಡುವೆ ಸಾವಯವವೆನ್ನಿಸುವಂತೆ ಅನುಸಂಧಾನವಾಗದೆ ಛಿದ್ರಛಿನ್ನವಾಗಿಯೇ ಉಳಿದಿರುವ ದರ್ಶನವು ಈ ನಾಟಕ ರೂಪದಲ್ಲಿ ಇನ್ನಷ್ಟು ಗೋಜಲಾಗಿ ಪರಿಣಮಿಸಿದೆ. ಹಾಗಾಗಿಯೇ ಕಥೆ ದರ್ಶನವಾಗಿ ಬಿಚ್ಚಿಕೊಳ್ಳಲೆಳಸುವ ಎರಡನೇ ಭಾಗ ಒಂದು ರಗಳೆಯಾಗಿ ಬೆಳೆಯುತ್ತಾ ನೋಡುಗರನ್ನು ಕಸಿವಿಸಿಗೆ ತಳ್ಳುತ್ತದೆ. ಕುವೆಂಪು ಅವರ ದರ್ಶನದ ಕೇಂದ್ರವೆನಿಸಿರುವ 'ದಶಾನನ ಸ್ವಪ್ನಸಿದ್ಧಿ' ಅಧ್ಯಾಯವು ಯಾವುದೇ ಕಲ್ಪನಾಶೀಲತೆ ಇಲ್ಲದೆ ಇಲ್ಲಿ ಬರೀ ಭವ್ಯ ಮಾತುಗಾರಿಕೆಯ ಬಣಗು ಎನ್ನಿಸಿಬಿಡುತ್ತದೆ. ಬದಲಿಗೆ ಇಲ್ಲಿ ಗಮಕ ಕಲೆಯಯನ್ನು ಪ್ರಯೋಗಶೀಲವಾಗಿ ಬಳಸಿದ್ದರೆ ಹೆಚ್ಚು ಪರಿಣಾಮಕಾರಿ ಯಾಗಿರುತ್ತಿತ್ತೇನೋ. ಯುದ್ಧ ದೃಶ್ಯಗಳಂತೂ ಹಳಸಲಾದ ವಾಸ್ತವವಾದಿತ್ವಕ್ಕೆ ಕಟ್ಟುಬಿದ್ದು ಒಣ ಕಸರತ್ತುಗಳಾಗಿ ಬೋರ್ ಹೊಡೆಸುತ್ತವೆ. ಇದಕ್ಕೆ ಮುಖ್ಯ ಕಾರಣ, ದರ್ಶನ ಪ್ರಧಾನ ಕೃತಿಯನ್ನು ಸಂಕಲಿಸುವಲ್ಲಿ ಕಾಣುವ ದರ್ಶನೀಯತೆಯ ಹಂಗು.


ಈ ದೌರ್ಬಲ್ಯಗಳ ನಡುವೆಯೂ ಈ ನಾಟಕ ಒಟ್ಟಾರೆಯಾಗಿ ಪ್ರೇಕ್ಷಕರ ಮನಸ್ಸನ್ನು ಗೆಲ್ಲುವಂತಾಗಿದ್ದರೆ ಅದಕ್ಕೆ ಕಾರಣಗಳೆಂದರೆ ರವಿ ಮುರೂರು ಅವರ ಯಕ್ಷಗಾನ, ಶಾಸ್ತ್ರೀಯ ಸಂಗೀತದ ನಟುವಾಂಗ, ಜಾನಪದ ಮತ್ತು ಲಘು ಸಂಗೀತದ ಹದವಾದ ಮಿಶ್ರಣವಾದ ಪ್ರಯೋಗಶೀಲ ಸಂಗೀತ ಮತು ನಿರ್ದೇಶಕನ ಕಲ್ಪನೆಗೆ ಪೂರಕವಾಗಿರುವಂತಿರುವ ರಂಗ ಸಜ್ಜಿಕೆ, ವಸ್ತ್ರ ವಿನ್ಯಾಸ ಮತ್ತು ಬೆಳಕು ನಿರ್ವಹಣೆ. ಜೊತೆಗೆ ನಟ ನಟಿಯರ ಪಳಗಿದ ಅಭಿನಯ ಪ್ರತಿಭೆ. ವಿಶೇಷ ಮೆಚ್ಚುಗೆಗೆ ಪಾತ್ರವಾಗುವುದು ಮಂಥರೆ, ಶೂರ್ಪನಖಿ ಮತ್ತು ಅನಲಳ ಪಾತ್ರಧಾರಿಗಳು. ಸೀತೆಯದು ಸ್ವಲ್ಪ ದಪ್ಪ ಗಂಟಲಾದರೆ ಆಂಜನೇಯನದು ಟೊಳ್ಳು ಧ್ವನಿಯಾಗಿ ನಾಟಕದ ಒಟ್ಟು ಪರಿಣಾಮಕ್ಕೆ ಧಕ್ಕೆಯಾಯಿತೇನೋ ಎನಿಸದಿರಲಿಲ್ಲ. ಆಂಜನೇಯನಿಗೆ ಸ್ವಲ್ಪ ನಿಗುರಿಕೊಂಡ ಬಾಲ ಹಚ್ಚಿದ್ದರೆ ನಾಟಕಕ್ಕೊಂದು ವಿಶೇಷ ಕಳೆ ಬರುತ್ತಿತ್ತು. ಹೇಗೂ ಇದು ಪ್ರಸ್ತುತವಾದದ್ದು ಅರೆ ಪೌರಾಣಿಕ ನಾಟಕವಾಗಿ ತಾನೇ?

ಅಪರೂಪದ ಅಧಿಕಾರಿ ಎನ್.ಆರ್. ವಿಶುಕುಮಾರ್



ಈ 'ಶ್ರೀರಾಮಯಣ ದರ್ಶನಂ' ನಾಟಕ ಮತ್ತು ಅದರ ಪ್ರದರ್ಶನ ಯಾತ್ರೆಯ ಪರಿಕಲ್ಪನೆಯ ರೂವಾರಿ ಇತ್ತೀಚಿನವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಎನ್.ಆರ್. ವಿಶುಕುಮಾರ್. ನನ್ನ ಹಳೆಯ ಗೆಳೆಯರಾದ ಇವರು ಕರ್ನಾಟಕ ಸರ್ಕಾರದ ಅಧಿಕಾರಿ ವೃಂದದ ಮಧ್ಯೆ ಸದಾ ಬಾಲಕರಂತೆಯೇ ನನಗೆ ಕಂಡವರು. ಹಾಗಾಗಿ ಇವರು ಕಳೆದ ನವೆಂಬರ್ ೩೦ರಂದು ಸೇವೆಯಿಂದ ನಿವೃತ್ತರಾಗುತ್ತಿದ್ದಾರೆಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ನಿವೃತ್ತರಾದಾಗ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ದಂತಹ ಸಂಪದ್ಭರಿತ ಮತ್ತು 'ತಾರಾ ಆಕರ್ಷಣೆ'ಯ ಇಲಾಖೆಯ ನಿರ್ದೇಶಕರೂ ಆಗಿದ್ದ ಇವರು ತಮ್ಮ ದೀರ್ಘ ಸೇವಾವಧಿಯುದ್ದಕ್ಕೂ ಮೃದು ಮಾತಿನ ಸುಸಂಸ್ಕೃತ ವ್ಯಕ್ತಿಯೆಂದೇ ಹೆಸರಾಗಿ ಶುದ್ಧ ಹಸ್ತರಾಗಿಯೇ ಉಳಿದವರು. ವಿದ್ಯಾರ್ಥಿ ದೆಸೆಯಿಂದಲೂ ಪ್ರಗತಿಪರ ಚಳುವಳಿಗಳು ಮತ್ತು ಸಾಹಿತ್ಯ–ಸಂಸ್ಕೃತಿಗಳ ಒಡನಾಟವಿಟ್ಟುಕೊಂಡಿದ್ದ 'ವಿಶು' ಆರಂಭದಿಂದಲೂ ನಮ್ಮ ಪತ್ರಿಕೆಯ ಅಭಿಮಾನಿ ಓದುಗರಾಗಿದ್ದರು. ಹಾಗಾಗಿಯೇ ನಮ್ಮ ಪತ್ರಿಕೆ ಸರ್ಕಾರದ ಜಾಹೀರಾತು ಎಂದರೆ ರೇಜಿಗೆಯ ಔಪಚಾರಿಕತೆಗಳು ಎಂದು ಅದರಿಂದ ದೂರವಿದ್ದಾಗ ಅವರು ವಾರ್ತಾ ಇಲಾಖೆಯ ನಿರ್ದೇಶಕರಾದಾಗ ತಮ್ಮ ವಿವೇಚನಾ ಅಧಿಕಾರ ಬಳಸಿ ಪತ್ರಿಕೆಗೆ ಜಾಹೀರಾತು ನೀಡಲು ಹಿಂಜರಿಯಲಿಲ್ಲ. ಅವರಿಗೆ ಪತ್ರಿಕೆ ನೆಮ್ಮದಿಯ ವಿಶ್ರಾಂತ ಜೀವನವನ್ನು ಹಾರೈಸುತ್ತದೆ.

ಕುವೆಂಪು ಮತ್ತು ಜಾತಿವಾಸನೆ!



'ಶ್ರೀರಾಮಾಯಣದರ್ಶನಂ' ನಾಟಕ ನೋಡಿದ ದೂರದೂರಿನ ಗೆಳೆಯರೊಬ್ಬರು ಮೊನ್ನೆ ಕರೆ ಮಾಡಿ,' ನಾಟಕ ಪ್ರದರ್ಶನ ವೇಳೆ ನೀಡಿದ ಪ್ರಚಾರ ಸಾಮಗ್ರಿಯಲ್ಲಿ ಈ ನಾಟಕ ನಿರ್ಮಾಣದ ಸಂದರ್ಭದಲ್ಲಿ ಸಲಹೆ ನೀಡಿದ ಹಲವರ ಹೆಸರುಗಳನ್ನು ನೋಡಿದೆ. ಜಿಎಸ್ಎಸ್–ಸುಜನಾ ತಲೆಮಾರಿನ ನಂತರ ಶ್ರೀರಾಮಾಯಣದರ್ಶನಂ ಸೇರಿದಂತೆ ಕುವೆಂಪು ಬಗ್ಗೆ ನಿಜವಾಗಿ ಆಳವಾದ ಅಧ್ಯಯನ ಮಾಡಿರುವವರು ನೀವೇ ಎಂದು ನನ್ನ ನಂಬಿಕೆ. ಆದರೆ ಇಲ್ಲಿ ಯಾರ್ಯಾರದ್ದೋ ಹೆಸರುಗಳಿವೆ. ನಿಮ್ಮ ಹೆಸರು ಇಲ್ಲದಿರುವುದು ಆಶ್ಚರ್ಯ' ಎಂದರು. ನಾನು ಅವರಿಗೆ 'ಅದು ನಿಮ್ಮ

ನಂಬಿಕೆ, ವಿಶ್ವಾಸ. ಆದರೆ ನಾಟಕ ಮಾಡಿದವರಾರೂ ನನ್ನ ಬರಹಗಳನ್ನು ಗಮನಿಸದಿರುವ ಸಾಧ್ಯತೆ ಇದೆ.ಅಲ್ಲದೆ ಅವು ಅವರ ಕಲ್ಪನೆಗೆ ಪ್ರತಿಕೂಲವೆನ್ನಿಸಿರಲೂಬಹುದು. ಜೊತೆಗೆ ಸಮಾಲೋಚನೆಯ ಆಯ್ಕೆ-ಆದ್ಯತೆ ಸಂಘಟಕರದ್ದು ತಾನೇ?' ಎಂದೆ. ಆದರವರು ಬಿಡದೆ 'ಸ್ವಾಮೀ ನೀವು ಅಷ್ಟು ಸರಳವಾಗಿ ಯೋಚಿಸಬಾರದು. ಸತ್ಯ ಎಂದರೆ ಅಲ್ಲಿ ಒಂದು ನಿರ್ದಿಷ್ಟ ಜಾತಿಯ ವಾಸನೆ ದಟ್ಟವಾಗಿದೆ!' ಎಂದು ಮಾತು ಮುಂದುವರೆಸಿದರು. ವಿಷಯ ಜಟಿಲಗೊಳ್ಳುತ್ತಿರುವುದನು ಗಮನಿಸಿದ ನಾನು ಹೀಗೆ ಉತ್ತರಿಸಿದೆ: 'ಎಂತಹ ದಟ್ಟ ಜಾತಿ ವಾಸನೆಯಾಗಲೀ, ರಾಜಕಾರಣವಾಗಲೀ ಕುವೆಂಪು ಸಾಹಿತ್ಯ ವ್ಯಕ್ತಿತ್ವವನ್ನು ತಾಕಲಾರದು. ಏಕೆಂದರೆ ಅವರ ಜಾತ್ಯತೀತತೆಗೆ ಅಧ್ಯಾತ್ಮಿಕತೆಯ ರಕ್ಷಾ ಕವಚವಿದೆ'. ಆದರೂ ಗೆಳೆಯರು ಕೊಸಕೊಸ ಅನ್ನುತ್ತಲೇ ಕರೆ ಅಂತ್ಯಗೊಳಿಸಿದರು


'ಚಾಯ್‌ವಾಲಾ'ರಾದ ಕವಿ ಕಣವಿ!



ಮೊನ್ನೆ 'ಮಲೆಗಳಲ್ಲಿ ಮದುಮಗಳು-೫೦' ಎರಡನೆಯ ಕಾರ್ಯಕ್ರಮಕ್ಕಾಗಿ ಧಾರವಾಡಕ್ಕೆ ಹೋಗಿದ್ದಾಗ ಅತ್ತಿಕೊಳ್ಳ, ಬೇಂದ್ರೆ ಮನೆ, ಸಾಧನಕೆ(ೕ)ರಿ ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳ ಭೇಟಿಯ ಸರಣಿಯಲ್ಲಿ ಹಿರಿಯ ಕವಿ ಚನ್ನವೀರ ಕಣವಿ ಅವರ ಮನೆಗೂ ಭೇಟಿ ನೀಡಿದ್ದೆವು. ನನ್ನ ಜೊತೆ ಸವಿತಾ ಮತ್ತು ಗೆಳೆಯರಾದ ರಾಜು ಹಾಗೂ ಸುರೇಂದ್ರ ಇದ್ದರು. ಮುದ್ದುಮೊಗದ ಹಿರಿಯ ಕವಿ ದಂಪತಿಗಳು ನಮ್ಮನ್ನೆಲ್ಲ ನಗುಮೊಗದಿಂದ ಸ್ವಾಗತಿಸಿ ಸುಮಾರು ಒಂದು ತಾಸು ಪ್ರೀತಿಯಿಂದ ಮಾತಾಡಿಸಿದರು. ತೊಂಬತ್ತನ್ನು ದಾಟಿರುವ ಕಣವಿಯವರು ಮತ್ತು ಅದರ ಹತ್ತಿರ ಬರುತ್ತಿರುವ ಶಾಂತಾದೇವಿ ಕಣವಿಯವರ ಜೀವನಪ್ರೀತಿ ಮತ್ತು ಉತ್ಸಾಹ ನಮ್ಮನ್ನೆಲ್ಲ ಬೆರಗುಗೊಳಿಸಿದವು. ಮಾತು ಮುಗಿದು ಹೊರಟಾಗ 'ಚಾ ಕುಡಿದು ಹೋಗಬೇಕು' ಎಂದು ಆಗ್ರಹಿಸಿದವರು ಶಾಂತಾದೇವಿಯವರಾದರೆ, 'ನಾ ಮಾಡ್ತೀನಿ' ಎಂದು ಎದ್ದು ಹೊರಟ ಸವಿತಾಳನ್ನು ಕೂರಿಸಿ 'ಚಾ ಮಾಡೋದರಲ್ಲಿ ನಾನು ಎಕ್ಸ್‌ಪರ್ಟ್ ಅದೀನಿ' ಎಂದು ಅಡಿಗೆಮನೆಗೆ ಹೊರಟವರು ಕಣವಿಯವರು. ನಾವು ಗಾಬರಿಯಾಗಿ ಕೂತಿರುವಾಗಲೇ ಅಡಿಗೆಮನೆಯಿಂದ ಹಣಕಿದ ಅವರು 'ಸಕ್ರಿ ಯಾರಿಗೆ ಹೆಂಗೆ?' ಎಂದು ವಿಚಾರಿಸಲು ಮರೆಯಲಿಲ್ಲ. ಐದೇ ನಿಮಿಷಗಳಲ್ಲಿ ಬಂದೇ ಬಂತು ಕಣವಿ ಸ್ಪೆಷಲ್ ಬಿಸಿ ಬಿಸಿ ಚಹಾ!! ಚಾಯ್‌ವಾಲಾ ಕಣವಿಯವರನ್ನು ಬಿಟ್ಟ ಕಣ್ಣು ಬಿಟ್ಟವರಂತೆ ನೋಡುತ್ತಿದ್ದ ನಮ್ಮ ರಾಜು ತಮ್ಮ ಕ್ಯಾಮಾರವನ್ನು ಕ್ಲಿಕ್ಕಿಸಲು ಮಾತ್ರ ಮರೆಯಲಿಲ್ಲ!


ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರಗಳು

ಈ ಬಾರಿ (೨೦೧೮) ಕೇಂದ್ರ ಸಾಹಿತ್ಯ ಅಕಾಡೆಮಿಯು ತನ್ನ ಭಾಷಾ ಸಮ್ಮಾನ್ ಪುರಸ್ಕಾರವನ್ನು ಹಿರಿಯ ನಿಘಂಟು ತಜ್ಞ ಪ್ರೊ. ಜಿ.ವಿ. ವೆಂಕಟಸುಬ್ಬಯ್ಯನವರಿಗೂ, ಸಾಹಿತ್ಯ ಕೃತಿಗೆ ನೀಡುವ ಪ್ರಶಸ್ತಿಯನ್ನು ಹಿರಿಯ ಚಿಂತಕ ಕೆ.ಜಿ. ನಾಗರಾಜಪ್ಪನವರಿಗೂ ಪ್ರಕಟಿಸಿದೆ. ವೆಂಕಟಸುಬ್ಬಯ್ಯ ಅವರು ಪದ ಪ್ರಪಂಚದ ಹಳೆಯ ಕುದುರೆ. ನಮ್ಮ ಸಾಂಸ್ಕೃತಿಕ ಲೋಕಕ್ಕೆ ಸುಪರಿಚಿತ ಮುಖ.




ಆದರೆ ನಾಗರಾಜಪ್ಪ ಹಾಗಲ್ಲ. ತಮ್ಮ ಕೆಲವೇ ಗೆಳೆಯರ ಮಧ್ಯೆ ಆಗಾಗ್ಗೆ ತಮ್ಮ 'ಸ್ಫೋಟಕ' ಸಂಶೋಧನೆಗಳಿಂದ ಸದ್ದು ಮಾಡುತ್ತಿದ್ದರಾದರೂ ಸುದ್ದಿಲೋಕದಿಂದ ದೂರವಿದ್ದವರು.! ಅವೈದಿಕ ಪರಂಪರೆಯ, ವಿಶೇಷವಾಗಿ ವಾಮಾಚರಣೆಗಳನ್ನು ಕುರಿತ ಅವರ ಆಸಕ್ತಿ ಪುರಾತನವಾದದ್ದು; ಆದರೆ ಅಷ್ಟೇ ಅವಿಶದ ಮತ್ತು ಅವಸರದ ತೀರ್ಮಾನಗಳಿಗೆ ಹೆಸರಾದದ್ದು. ಏಕೆಂದರೆ ಅವರು ಹೇಳುವ ಸಾಂಸ್ಕೃತಿಕ ಯಜಮಾನಿಕೆ ಸ್ಥಾಪಿತವಾಗುವುದು ಅಮೂರ್ತ ತಾತ್ವಿಕತೆಗಿಂತ ಹೆಚ್ಚಾಗಿ ನೆಲಮಟ್ಟದ ಆಚರಣೆಗಳ ಸ್ಥಳೀಯ ರಾಜಕಾರಣದಲ್ಲಿ. ಹಾಗಾಗಿ ಈ ಯಜಮಾನಿಕೆಯ ಪರಿಕಲ್ಪನೆಯ ಸಮಕಾಲೀನ ಅರ್ಥವನ್ನು ಇಂದು-ಸಾಮಾಜಿಕ ನ್ಯಾಯವೆಂಬುದು ರಾಜಕೀಯವಾಗಿ ಅತಿ ಪ್ರಬಲವಾಗಿರುವ ಸಂದರ್ಭದಲ್ಲಿ ಮರುಶೋಧಿಸಬೇಕಿದೆ. ಈ ದೃಷ್ಟಿಯಿಂದ ಅವರ ಪ್ರಶಸ್ತಿ ಪುರಸ್ಕೃತ ಕೃತಿ 'ಅನುಶ್ರೇಣಿ-ಯಜಮಾನಿಕೆ' ತಲಸ್ಪರ್ಶಿ ಚರ್ಚೆಗೆ ಒಳಗಾಗಬೇಕಿದೆ. ಅದೇನೇ ಇರಲಿ, ಪ್ರೊ. ವೆಂಕಟಸುಬ್ಬಯ್ಯನವರಿಗೂ, ಪ್ರೊ. ಕೆ.ಜಿ. ನಾಗರಾಜಪ್ಪನವರಿಗೂ ಪತ್ರಿಕೆಯ ಅಭಿನಂದನೆಗಳು

ರಾಜಕಾರಣಿಯೊಬ್ಬರ 'ವರ್ತಮಾನ'



ರಾಜ್ಯ ಇತ್ತೀಚಿನ ವರ್ಷಗಳಲ್ಲಿ ಕಂಡ ಓದು ಬರಹ ಮಾಡುವ ಕೆಲವೇ ಕೆಲವು ಶಾಸಕರಲ್ಲಿ ವೈ.ಎಸ್.ವಿ.ದತ್ತ ಒಬ್ಬರು. ಇದಕ್ಕೆ ಸಾಕ್ಷಿಯೆಂಬಂತೆ ವರ್ತಮಾನ' ಎಂಬ ಇವರ ಲೇಖನ/ಭಾಷಣಗಳ ಸಂಗ್ರಹವೊಂದನ್ನು ಬೆಂಗಳೂರಿನ ಭಾರತ ಯಾತ್ರಾ ಕೇಂದ್ರ ಹೊರತಂದಿದೆ. ಅಭಿವೃದ್ಧಿ ಮೀಮಾಂಸೆ, ಸಂಸ್ಕೃತಿ ಚಿಂತನೆ, ಧರ್ಮ, ರಾಜಕಾರಣ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ೧೪ ಲೇಖನಗಳು ಇಲ್ಲಿವೆ. ಇಂದಿನ ರಾಜಕಾರಣದ ಬಗ್ಗೆ ಸಾಮಾನ್ಯ ಜನರಂತೆಯೇ ವ್ಯಗ್ರರಾಗಿರುವ ದತ್ತ ಲೋಹಿಯಾರನ್ನು ಉಲ್ಲೇಖಿಸುತ್ತಾ ನಿರಾಶೆಯ ಕಾಲದ ಕ್ರಿಯಾಶೀಲತೆಯ ಭಾಗವಾಗಿ ಸಾರ್ವಜನಿಕ ಜೀವನದಲ್ಲಿ ಉಳಿದುಕೊಂಡು ಈ ಬರಹಗಳಿಗೆ ಕಾರಣರಾಗಿದ್ದಾರೆ.

ಜೆಡಿಎಸ್‌ನಂತಹ ಪಕ್ಷದಲ್ಲಿದ್ದೂ ಆರ್ಥಿಕ ಮತ್ತು ಸಾಮಾಜಿಕ ನಂಬಿಕೆಗಳಲ್ಲಿ ಸ್ವಲ್ಪ ರೂಕ್ಷವಾಗಿಯೇ ಎಡಕ್ಕೆ ವಾಲಿದಂತೆ ಬರೆಯುವ ದತ್ತ ಇಲ್ಲಿನ ಲೇಖನಗಳಲ್ಲಿ ಯಾವುದೇ ಮೂಲ ಮಾತುಗಳನ್ನಾಡದೆ ಇತರರನ್ನು ಉಲ್ಲೇಖ ಮಾಡಿ ತಮ್ಮ ವಾದ ಮಾಡುವುದೇ ಹೆಚ್ಚು. ಹೀಗಾಗಿ ಜಾತಿ-ಧರ್ಮ-ಸಮಾಜ-ರಾಜಕಾರಣಗಳ ಬಗ್ಗೆ ಬರೆಯುವಾಗ ಬಹುಪಾಲು ಇವರು ಭಗವತ್‌ಶರಣ ಉಪಾಧ್ಯಾಯ ಎಂಬುವವರ 'ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ' ಎಂಬ ಪುಸ್ತಕದಲ್ಲಿನ ವಾರೆಯಾದ ಚರಿತ್ರೆಯ ನೋಟವನ್ನೇ ಹೆಚ್ಚು ಅವಲಂಬಿಸಿ ಕೆಲವೆಡೆ ಸಾರಾಸಗಟಾದ ಮಾತುಗಳನ್ನಾಡಲು ಉದ್ಯುಕ್ತರಾಗುತ್ತಾರೆ. ನಮ್ಮ ಜಾತಿಪದ್ಧತಿಯ ಚರಿತ್ರೆ ಕುರಿತು ತೀರಾ ಸರಳೀಕೃತ ಕಲ್ಪನೆ ಹೊಂದಿದಂತೆ ತೋರುವ ಲೇಖಕರಿಂದ ಈಉದ್ಗಾರ ಹೊರಟಿರುವುದು ಸಹಜವೇ ಆಗಿದೆ: 'ಋಗ್ವೇದ ಮತ್ತು 'ಬ್ರಾಹ್ಮಣ'ದಂತಹ ಆಸ್ತಿಕ ಕೃತಿಗಳನ್ನು ಬರೆದ ಕೈಗಳೇ ಸಾಂಖ್ಯ, ವೈಶೇಷಿಕ ಮತ್ತು ನ್ಯಾಯದರ್ಶನಗಳನ್ನೂ ಬರೆದವು. ಮತ್ತೂ ಒಂದು ಹೆಜ್ಜೆ ಮುಂದೆಹೋಗಿ ಲೋಕಾಯತವಾದದ ದುಂದುಂಭಿಯನ್ನೂ ಮೊಳಗಿಸಿದವು! ಅಬ್ಬಾ! ಎಂಥ ಜಾಣ್ಮೆ!' (ಪು: ೪೧)




ಹಾಗಾದರೆ ಈ ದರ್ಶನಗಳೆಲ್ಲ ಬರೀ ಜಾಣತನದ, ಹುನ್ನಾರದ ಭಾಗವಾಗಿ ಹುಟ್ಟಿಕೊಂಡವು! ಹೀಗೆ ಚರಿತ್ರೆಯ ಜಡ ಓದಿನಲ್ಲಿ 'ಪ್ರಗತಿಪರತೆ'ಯನ್ನು ಕಂಡುಕೊಳ್ಳುವ ಚಾಳಿ ಈಗಾಗಲೇ ಹಳೆಯದಾಗಿದೆ ಎಂಬುದು ದತ್ತ ಅವರಿಗೆ ಗೊತ್ತಿದ್ದಂತಿಲ್ಲ. ಇದರಿಂದಾಗಿ ಇವರ ಕೋಮುವಾದ ವಿರೋಧಿ ವಾದ ಸರಣಿ ಬರೀ ಮಾತಿನ ಉಬ್ಬರದಂತೆ ಕೇಳಿಸತೊಡಗುತ್ತದೆ. ಆದರೆ ಅಭಿವೃದ್ಧಿ, ಬಂಡವಾಳ ಹೂಡಿಕೆ, ಪ್ರಾದೇಶಿಕ ಅಸಮಾನತೆಗಳ ಬಗ್ಗೆ ಬರೆಯುವಾಗ ದತ್ತ ಅವರು ಅಧ್ಯಯನಪೂರಿತವಾದ ಸುಸಂಬದ್ಧ ವಾದ ಮಂಡಿಸುತ್ತಾರೆ. ಜೊತೆಗೆ ಇಂದಿನ ರಾಜಕಾರಣದ ಬಗ್ಗೆ ಅವರು ತಳೆಯುವ ಸ್ವವಿಮರ್ಶೆಯ ನಿಲುವೂ ಮೆಚ್ಚುಗೆಯಾಗುತ್ತದೆ. ಇನ್ನು ಇವರು ಪಂಪ, ಕುಮಾರವ್ಯಾಸ, ವಚನ ಇತ್ಯಾದಿಗಳ ಬಗ್ಗೆ ಮಾತಾಡುವಾಗ ಪ್ರದರ್ಶನಪ್ರಿಯತೆಯೇ ಎದ್ದುಕಂಡು ಮಾತು ಹರಿಕಥೆಯ ಹಾದಿ ಹಿಡಿಯುತ್ತದೆ. ಹಾಗಾಗಿ ದತ್ತ ಅವರು ಜನಪ್ರಿಯ ಚರ್ಚಾಪಟುವಿನ ರೋಚಕ ಮಾತುಗಾರಿಕೆಯ ಜಾಡನ್ನು ತೊರೆದು ಒಂದಷ್ಟು ಅಂತರ್ಮುಖಿಯಾಗಿ ಚಿಂತಿಸಿ ಮಾತಾಡತೊಡಗುವುದು ಒಳ್ಳೆಯದು. ಅವರಿಗೂ, ನಮಗೂ ಇಬ್ಬರಿಗೂ.

-ಡಿ.ಎಸ್. ನಾಗಭೂಷಣ

ಚಂದಾದಾರರಾಗಬಯಸುವವರಿಗೆ ಸೂಚನೆ

'ಹೊಸ ಮನುಷ್ಯ'ಕ್ಕೆ ಚಂದಾದಾರರಾಗಬಯಸುವವರು ಪತ್ರಿಕೆಯ ಮುಖಪುಟದಲ್ಲಿರುವ ಪತ್ರಿಕೆಯ ವಿಳಾಸಕ್ಕೆ ಸಂಪಾದಕರ ಹೆಸರಿನಲ್ಲಿ ಬರೆದ ಚೆಕ್/ಡಿಡಿ ಕಳಿಸಬಹುದು. ಅಥವಾ ಸಂಪಾದಕರು, ಹೊಸ ಮನುಷ್ಯ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಗೀತಾಕೃಪಾ ಶಾಖೆಯಲ್ಲಿರುವ (ifsc code: sbin 0040444) ಚಾಲ್ತಿ ಖಾತೆ ಸಂಖ್ಯೆ 64110358330 ಇಲ್ಲಿಗೆ ನೆಫ್ಟ್ ಮೂಲಕ ಇನ್ನೂರು ರೂ.ಗಳನ್ನು ವರ್ಗಾವಣೆ ಮಾಡಿ (ನಗದು ಕಟ್ಟುವುದು ಮಾತ್ರ ಬೇಡ) 9449242284 ಈ ಸಂಖ್ಯೆಗೆ ಖಚಿತಪಡಿಸಿ ತಮ್ಮ ವಿಳಾಸವನ್ನು ಕಳಿಸಬೇಕು.-ಸಂ.

ಸ್ವಾಮಿ ವಿವೇಕಾನಂದರ ವಿಚಾರಗಳು



ಭಾರತ ಆಧುನಿಕವಾಗುತ್ತಿದ್ದಂತೆ ಹಿಂದೂ ಧರ್ಮವೆನ್ನುವುದು ಮೌಢ್ಯ–ಕಂದಾಚಾರ, ಅಮಾನವೀಯ ಆಚರಣೆಗಳು, ಸಾಮಾಜಿಕ ಅಸಮಾನತೆ ಮುಂತಾದ ಟೀಕೆಗಳಿಗೆ ತುತ್ತಾಗಿ ಜನರ ಮಧ್ಯೆ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವಾಗ ಅದನ್ನು ಕಾಲದ ಈ ಎಲ್ಲ ಕೊಳಚೆ–ಕೆಸರುಗಳಿಂದ ಬೇರ್ಪಡಿಸಿ ಅದರ ನಿತ್ಯನೂತನ ಚೈತನ್ಯವಾದ ವೇದಾಂತವನ್ನು ಮುನ್ನೆಲೆಗೆ ತಂದು ಅದಕ್ಕೆ ಹೊಸ ಕಳೆ ಮತ್ತು ರೂಪವನ್ನು ನೀಡಿದವರು ಸ್ವಾಮಿ ವಿವೇಕಾನಂದರು.(೧೨ ಜನವರಿ ೧೮೬೩–೪ ಜುಲೈ, ೧೯೦೨) ಕಲಕತ್ತೆಯ ಪ್ರತಿಷ್ಠಿತ ಕಾಯಸ್ಥ ಕುಟುಂಬದಲ್ಲಿ ಹುಟ್ಟಿದರೂ ಬಡತನದ ಬವಣೆಗೆ ತುತ್ತಾದ ಈನರೇಂದ್ರ ೧೯ನೇ ಶತಮಾನದ ಮಹಾಸಂತ ರಾಮಕೃಷ್ಣ ಪರಮಹಂಸರ ಆಪ್ತ ಶಿಷ್ಯನಾಗಿ ಜಗತ್ತಿನ ಸಕಲ ಧರ್ಮಗಳ ಅಂತರಾಳವನ್ನು ಅರಿತು ಸ್ವಾಮಿ ವಿವೇಕಾನಂದರಾಗಿ ವಿವಿಧ ಧರ್ಮಗಳ ಏಕತೆಯನ್ನು ಕಂಡುಕೊಂಡು ಅದನ್ನು ೧೮೯೩ರ ಶಿಕಾಗೋ ಧರ್ಮ ಸಂಸತ್ ಸಭೆಯಲ್ಲಿ ಜಗತ್ತಿಗೆ ಸಾರಿ ಜಗತ್ಪ್ರಸಿದ್ಧ ಸಂನ್ಯಾಸಿ ಎನಿಸಿಕೊಂಡವರು. ದೈವತ್ವವೆಂಬುದು ಸಕಲ ಜೀವರಾಶಿಯಲ್ಲಿದೆ; ಬೇರೆಲ್ಲೂ ಇಲ್ಲ ಎಂಬ ವೇದಾಂತದ ಸಾರವನ್ನು ಭಾರತದ ಮೂಲೆಮೂಲೆಗಳನ್ನೂ ಸುತ್ತಿ ಸಾರಿದ ಅವರು ಜೀವಕುಲದ ಸೇವೆಯೇ ದೇವರ ಪೂಜೆ ಎಂದು ಘೋಷಿಸುತ್ತಾ ತಮ್ಮನ್ನು 'ಸಮಾಜವಾದಿ' ಎಂದು ಗುರುತಿಸಿಕೊಂಡವರುಸಿದವರು. ಅವರ ಈ ಕೆಳಗಿನ ಆಯ್ದ ಸೂಕ್ತಿಗಳು ಇಂದಿನ ಧರ್ಮ ಸಂಕಟದ ಸಂದರ್ಭದಲ್ಲಿ ನಮಗೆ ದಾರಿ ದೀಪವಾಗಬಲ್ಲವು.–ಸಂ.

- ಧರ್ಮವೆಂಬ ಹಸು ಹಲವಾರು ಬಾರಿ ಒದ್ದಿದೆ ನಿಜ; ಆದರೆ ಅದು ಮನುಕುಲಕ್ಕೆ ನಿರಂತರವಾಗಿ ಹಾಲನ್ನೂ ಒದಗಿಸಿದೆ.
- ಅನುಕಂಪವೇ ಇಲ್ಲದ, ಹೃದಯವೇ ಇಲ್ಲದ ವಿರಕ್ತಿಯಲ್ಲಿ ನನಗೆ ನಂಬಿಕೆ ಇಲ್ಲ.
- ಯಾರಿಗೆ ತನ್ನಲ್ಲಿ ತನಗೇ ನಂಬಿಕೆ ಇಲ್ಲವೊ ಅವನು ನಾಸ್ತಿಕ. ಹಿಂದಿನ ಧರ್ಮಗಳು ಹೇಳಿದವು, ದೇವರನ್ನು ನಂಬದವನು ನಾಸ್ತಿಕ ಎಂದು. ಹೊಸ ಧರ್ಮವು ಹೇಳುತ್ತದೆ, ಯಾರಿಗೆ ತನ್ನಲ್ಲಿ ನಂಬಿಕೆ ಇಲ್ಲವೋ ಅವನು ನಾಸ್ತಿಕ ಎಂದು.
- ತನ್ನನ್ನು ತಾನು ದುರ್ಬಲ ಎಂದು ಭಾವಿಸುವುದೇ ಮಹಾ ಪಾಪ.
- ನಿನ್ನೊಳಗಿರುವ ದಿವ್ಯತೆ ಸ್ವಯಂ ಭಗವಂತನ ಅಸ್ತಿತ್ವಕ್ಕೆ ಸಾಕ್ಷಿ. ನೀನೊಬ್ಬ ದಿವ್ಯ ಪುರುಷನಾಗಿರದಿದ್ದರೆ ಆಗ ಭಗವಂತನ ವಿಷಯದಲ್ಲಿ ಎಂದಿಗೂ ಏನೂ ಸತ್ಯವೆಂಬುದೇ ಇರುತ್ತಿರಲಿಲ್ಲ. ನೀನು ದೇವರಲ್ಲದಿದ್ದರೆ ಹಿಂದೆ ಯಾವ ದೇವರೂ ಇರಲಿಲ್ಲ, ಮುಂದೆಯೂ ಇರುವುದಿಲ್ಲ.
- ದೇವಾಲಯಕ್ಕೆ ಧರ್ಮವನ್ನು ನೀವು ಪ್ರದಾನ ಮಾಡಬೇಕೇ ಹೊರತು ಅದು ನಿಮಗೆ ಧರ್ಮವನ್ನು ಪ್ರದಾನ ಮಾಡಲಾರದು.
- ದುಃಖ ದಾರಿದ್ರ್ಯಗಳೇ ಧರ್ಮ ಎನಿಸಿಕೊಳ್ಳುವುದಾದರೆ ನರಕ ಬೇರೆಲ್ಲಿದೆ? ಯಾವ ಮನುಷ್ಯನಿಗೂ ತನ್ನನ್ನೇ ತಾನು ದುಃಖಿತನನ್ನಾಗಿ ಮಾಡಿಕೊಳ್ಳಲು ಹಕ್ಕಿಲ್ಲ. ಹಾಗೆ ಮಾಡಿಕೊಳ್ಳುವುದು ಒಂದು ತಪ್ಪು,; ಅದೊಂದು ಪಾಪ. ಪ್ರತಿಯೊಂದು ನಗುವಿನ ತರಂಗವೂ ದೇವರೆಡೆಗೆ ಕಳುಹಿಸಿದ ಪ್ರಾರ್ಥನೆ.
- ನಿಮ್ಮ ಹೃದಯ ಆತ್ಮಗಳನ್ನು ಸಮರ್ಪಿಸಿ ಕೆಲಸ ಮಾಡಿ. ಇತರರಿಗೆ ಒಳಿತು ಮಾಡುತ್ತ ನರಕಕ್ಕೆ ಹೋದರೆ ತಾನೆ ಏನು? ನಾನು ಇದು ನಿಮಗಷ್ಟೇ ಗಳಿಸಿಕೊಂಡ ಸ್ವರ್ಗಕ್ಕಿಂತ ಸಾವಿರ ಪಾಲು ಚೆನ್ನ.
- ನಾನೊಬ್ಬ ಸಮಾಜವಾದಿ. ಹಾಗೆಂದ ಮಾತ್ರಕ್ಕೆ ಅದೊಂದು ದೋಷರಹಿತ ವ್ಯವಸ್ಥೆ ಎಂದೇನೂ ಅಲ್ಲ, ಅರ್ಧ ತುಂಡು ರೊಟ್ಟಿ ಏನೂ ಇಲ್ಲದೇ ಇರುವುದಕ್ಕಿಂತಲೂ ಮೇಲು.
- ನೋಡಿ ಮಹಾಶಯರೆ, ಈ ದೇಶದ ಕಟ್ಟಕಡೆಯ ಒಂದು ನಾಯಿ ಹಸಿದಿರುವ ತನಕ ಆ ನಾಯಿಯ ಹಸಿವನ್ನು ತಣಿಸುವುದು ನನ್ನ ಧರ್ಮ ಮಿಕ್ಕಿದ್ದೆಲ್ಲವೂ ಧರ್ಮವೇ ಅಲ್ಲ, ಅಂಥಹದೊಂದಿದ್ದರೆ ಅದೊಂದು ಪೊಳ್ಳು ಧರ್ಮ ಅಷ್ಟೆ
- ಜನಸಾಮಾನ್ಯರನ್ನು ಕಡೆಗಣಿಸಿದ್ದು ಒಂದು ರಾಷ್ಟ್ರೀಯ ಪಾಪ ಎಂದು ನಾನು ಪರಿಗಣಿಸುತ್ತೇನೆ. ನಮ್ಮ ಅವನತಿಗೆ ಇದೂ ಒಂದು ಕಾರಣ. ಜಾತಿ ನಿರ್ಬಂಧಗಳ ಮೂಲಕ ಮಹಿಳೆಯರನ್ನು ತುಳಿದು ದೀನ–ದಲಿತರನ್ನು ಅರೆಯುತ್ತಿದ್ದೇವೆ.
- ಎಲ್ಲಿಯವರೆಗೆ ಜನಗಳಿಗೆ ತಮಗೆ ತಾವೇ ಸಹಾಯ ಮಾಡಿಕೊಳ್ಳುವುದನ್ನು ನಾವು ಕಲಿಸುವುದಿಲ್ಲವೋ, ಅಲ್ಲಿಯವರೆಗೆ ಪ್ರಪಂಚದ ಸಂಪತ್ತನ್ನೆಲ್ಲ ತಂದು ಸುರಿದರೂ ಭಾರತದ ಒಂದು ಹಳ್ಳಿಯನ್ನೂ ಸಹ ನಾವು ಉದ್ಧಾರ ಮಾಡಲು ಸಾಧ್ಯವಿಲ್ಲ
- ಮೊದಲು ನಿಮ್ಮ ಮಹಿಳೆಯರಿಗೆ ಶಿಕ್ಷಣ ನೀಡಿ ಅವರನ್ನು ಅವರ ಪಾಡಿಗೆ ಬಿಟ್ಟುಬಿಡಿ; ಆನಂತರ ಅವರು ತಮಗೆ ಅಗತ್ಯವಾದ ಸುಧಾರಣೆ ಯಾವುದೆಂದು ತಿಳಿಸುತ್ತಾರೆ.
- ಪೋಷಕರು ಅನಗತ್ಯವಾಗಿ ಮಕ್ಕಳ ಮೇಲೆ ನಿಯಂತ್ರಣ ಹೇರುವುದರಿಂದ ನಮ್ಮ ಹುಡುಗರಿಗೆ ಮುಕ್ತವಾಗಿ ಬೆಳೆಯಲು ಅವಕಾಶವೇ ಸಿಗುವುದಿಲ್ಲ... ಒಬ್ಬನನ್ನು ನೀವು ಸಿಂಹವಾಗಿ ಬೆಳೆಯಲು ಬಿಡದಿದ್ದರೆ ಅವನು ನರಿಯಾಗುತ್ತಾನೆ.
- ಈ ಪ್ರಪಂಚದಲ್ಲಿ ನೂರು ವರ್ಷಗಳ ಹಿಂದೆ ಇದ್ದಷ್ಟು ಸಂತೋಷಕ್ಕಿಂತ ಈಗ ಹೆಚ್ಚು ಸಂತೋಷವಿದೆಯೆ? ನೀವು ಕಂಡುಹಿಡಿಯುವ ಒಂದೊಂದು ಯಂತ್ರವೂ ಇಪ್ಪತ್ತು ಜನರನ್ನು ಶ್ರೀಮಂತರನ್ನಾಗಿ ಮಾಡಿದರೆ ಇಪ್ಪತ್ತು ಸಾವಿರ ಜನರನ್ನು ಬಡತನಕ್ಕೆ ನೂಕುತ್ತದೆ.
- ಅನುಕರಣೆ ನಾಗರಿಕತೆಯಲ್ಲ, ಅದು ಮನುಷ್ಯ ಅವನತಿಯ ನಿಕೃಷ್ಟ ಸಂಕೇತ. ಇತರರಲ್ಲಿರುವ ಎಲ್ಲಾ ಒಳ್ಳೆಯದನ್ನೂ ಕಲಿಯಿರಿ, ನಿಮ್ಮತನದೊಳಗೆ ಸೆಳೆದುಕೊಳ್ಳಿ, ಆದರೆ ಮತ್ತೊಬ್ಬನಾಗಬೇಡಿ. ಇತರ ಜನಾಂಗದವರಂತೆ ಬಟ್ಟೆ ಹಾಕಿಕೊಳ್ಳುವುದು, ತಿನ್ನುವುದು ಅವರ ಭಾಷೆಯಲ್ಲಿ ಮಾತಾಡುವುದು ಮತ್ತು ನಡೆದುಕೊಳ್ಳುವುದರಿಂದ ಇಂಡಿಯಾ ದೇಶಕ್ಕೆ ಒಳ್ಳೆಯದು ಎಂದು ಭಾವಿಸಬೇಡಿ.
- ಜಗತ್ತಿಗೆ ಸಹಿಷ್ಣುತೆ ಮತ್ತು ಸಾರ್ವತ್ರಿಕ ಸ್ವೀಕಾರವನ್ನು ಬೋಧಿಸಿದ ಧರ್ಮಕ್ಕೆ ಸೇರಿದವನು ನಾನು ಎಂಬುದು ನನಗೆ ಹೆಮ್ಮೆಯ ವಿಷಯ. ನಾವು ಸಾರ್ವತ್ರಿಕ ಸಹಿಷ್ಣುತೆಯನ್ನು ಮಾತ್ರ ನಂಬುತ್ತೇವೆ ಎಂದಲ್ಲ. ಆದರೆ ಜಗತ್ತಿನ ಧರ್ಮಗಳೆಲ್ಲವೂ ಸತ್ಯ ಎಂದು ಒಪ್ಪಿಕೊಳ್ಳುತ್ತೇವೆ.
- ಮನುಕುಲದ ಪ್ರವಾದಿಗಳ ನಡುವೆ ಮೆದುಳಿನಲ್ಲಿ ಜೇಡರಬಲೆ ಇಲ್ಲದ ಮನುಷ್ಯ ಎಂದರೆ ಇವನೆ, ಬುದ್ಧ. ಸ್ವಸ್ಥಚಿತ್ತದ ಶಕ್ತಿಶಾಲಿ. ಸಾಮ್ರಾಜ್ಯಗಳೇ ಇವನ ಪಾದದಡಿ ಬಿದ್ದಾಗಲೂ ಇವನು ಅದೇ ಮನುಷ್ಯನಾಗಿದ್ದ. ನಾನು ಮನುಷ್ಯರ ನಡುವೆ ಇರುವ ಒಬ್ಬ ಮನುಷ್ಯ ಎಂದವನು ಆತ.
- ಬೌದ್ಧಮತ ಚಾರಿತ್ರಿಕವಾಗಿ ಅತ್ಯಂತ ಮುಖ್ಯವಾದ ಧರ್ಮ. ಚಾರಿತ್ರಿಕವಾಗಿ, ತತ್ತ್ವಶಾಸ್ತ್ರೀಯವಾಗಿ ಅಲ್ಲ. ಆದರೆ ಬೌದ್ಧಧರ್ಮವನ್ನುಳಿದು ಹಿಂದೂಧರ್ಮವಾಗಲಿ, ಹಿಂದೂಧರ್ಮವನ್ನುಳಿದು ಬೌದ್ಧ ಧರ್ಮವಾಗಲಿ ಬದುಕಲಾರದು... ಬ್ರಾಹ್ಮಣರ ಮೆದುಳು–ತತ್ತ್ವಶಾಸ್ತ್ರದ ಹೊರತಾಗಿ ಬೌದ್ಧರು ನಿಲ್ಲಲಾರರು. ಅಂತೆಯೇ ಬೌದ್ಧ ಹೃದಯವಿಲ್ಲದೆ ಬ್ರಾಹ್ಮಣರಿಗೆ ನೆಲೆ ಇಲ್ಲ. ಬೌದ್ಧರು ಮತ್ತು ಬ್ರಾಹ್ಮಣರ ನಡುವಿನ ಅಂತರವೇ ಭಾರತದ ಅವನತಿಗೆ ಕಾರಣವಾಗಿದೆ.
- ಅದ್ವೈತ ಸಿದ್ಧಾಂತವನ್ನು ಸ್ವೀಕರಿಸಿದವರಲ್ಲಿ ಮೊದಲಿಗರು ಎಂಬ ಪಟ್ಟ ಹಿಂದೂಗಳಿಗೆ ಸಿಕ್ಕಿರಬಹುದು.. ಯಾಕೆಂದರೆ ಅವರು ಹೀಬ್ರೂ ಮತ್ತು ಅರಬ್ಬ ಜನಾಂಗಕ್ಕಿಂತ ಅದೆಷ್ಟೋ ಹಳೆಯ ಕಾಲದವರು.ಆದರೆ ಸಂಪೂರ್ಣ ಮನುಕುಲವನ್ನು ಒಂದೇ ಎಂದು ಸಾರಿ ಅದರಂತೆಯೇ ವ್ಯವಹರಿಸುವಂತೆ ಸೂಚಿಸುವ ಅದ್ವೈತ ಸಿದ್ಧಾಂತವನ್ನು ಸಾರ್ವತ್ರಿಕವಾಗಿ ಕಾರ್ಯರೂಪಕ್ಕೆ ತರಲು ಹಿಂದೂಗಳಿಗೆ ಸಾಧ್ಯವಾಗಿರಲಿಲ್ಲ. ನನ್ನ ಅನುಭವದಲ್ಲಿ ಈ 'ಏಕತ್ವ' ಭಾವವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿದ್ದು ಅದು ಕೇವಲ ಇಸ್ಲಾಂ ಧರ್ಮ, ಹಾಗಾಗಿ ವಾಸ್ತವವಾದಿ ಇಸ್ಲಾಂನ ಸಹಕಾರದ ಹೊರತು ಈ ವೇದಾಂತ ತತ್ವಗಳೆಲ್ಲ ಅದೆಷ್ಟು ಅದ್ಭುತವಾಗೇ ಇರಲಿ, ಅದರಿಂದ ಮನುಕುಲಕ್ಕೆ ಪ್ರಯೋಜನವಿಲ್ಲ.
- ಭಾರತವನ್ನು ಮಹಮ್ಮದೀಯರು ಗೆದ್ದುಕೊಂಡಾಗ ಇಲ್ಲಿನ ದಮನಿತರಿಗೆ, ಬಡವರಿಗೆ ಅದೊಂದು ವಿಮೋಚನೆಯಾಗಿ ಕಂಡಿತು. ಹಾಗಾಗಿಯೇ ನಮ್ಮ ಜನರುದ ಐದನೇ ಒಂದಂಶ ಮಹಮ್ಮದೀಯವಾಯಿತು. ಇದಕ್ಕೆಲ್ಲ ಕತ್ತಿ ಅಥವಾ ಬೆಂಕಿಯ ಭಯ ಕಾರಣವೆಂದು ಭಾವಿಸುವುದು ಮತಿಭ್ರಾಂತಿಯ ಪರಮಾವಧಿಯಾದೀತು.

, ಸೂಕ್ತಿ ಸಂಗ್ರಹ : ಜಿ.ಎಸ್. ಜಯದೇವ)

ಪುಸ್ತಕಾವಲೋಕನ

ಪು: ಅನುಶ್ರೇಣಿ–ಯಜಮಾನಿಕೆ ಲೇ: ಕೆ.ಜಿ. ನಾಗರಾಜಪ್ಪ ಪ್ರ: ಅಭಿನವ, ಬೆಂಗಳೂರು ಪು: ೨೦೮ ಬೆಲೆ: ರೂ. ೧೫೦/–

'ಭಕ್ತಿ'ಯ ನೆಲೆಯಿಂದ ಸಂಸ್ಕೃತಿ ಶೋಧನೆ



ಕನ್ನಡದಲ್ಲಿ ಸಂಸ್ಕೃತಿ ನೆಲೆಗಟ್ಟನ್ನು ಆಧರಿಸಿದ ಅನೇಕ ಅಧ್ಯಯನ ವಿಧಾನಗಳು ಹಿಂದಿನಿಂದಲೂ ಬಳಕೆಯಲ್ಲಿವೆ. ಶಂಬಾ ಅವರ ಸಂಸ್ಕೃತಿ ಅಧ್ಯಯನವು ಮಾನವಶಾಸ್ತ್ರೀಯವಾದ ನೆಲೆಗಟ್ಟಿನಲ್ಲಿ ವೈದಿಕ ದರ್ಶನಗಳನ್ನೂ ಜಾನಪದೀಯ ದರ್ಶನಗಳನ್ನೂ ಶೋಧಿಸುವ ರೀತಿ ಕನ್ನಡದ ಒಂದು ಸಂಸ್ಕೃತಿ ಓದಿನ ಧಾರೆಯನ್ನು ಪರಿಚಯಿಸಿತು. ದೇವುಡು, ಕೃಷ್ಣಶರ್ಮ, ಡಿವಿಜಿ ಮೊದಲಾದವರು ಅನುಸರಿಸಿದ ಸಂಸ್ಕೃತಿ ಅನುಸಂಧಾನದ ಮಾದರಿಗಳು ವಸಾಹತುಶಾಹಿ ನೋಟಕ್ರಮಕ್ಕೆ ಎದುರಾಗಿ 'ಭಾರತೀಯ ಸಂಸ್ಕೃತಿ' ಎನ್ನುವ ಕಲ್ಪನೆಯನ್ನು ಅಧಿಕೃತಗೊಳಿಸಲು ಯತ್ನಿಸಿದವು. ಪ್ರಸ್ತುತ ಸಂಸ್ಕೃತಿ ಅಧ್ಯಯನಗಳು ಆಚರಣೆ, ಜಾತಿ–ಜನಾಂಗ ಕೇಂದ್ರಿತ ಅಧ್ಯಯನಗಳಾಗಿ ಹೊರ ವಿವರಗಳ ಸಂಪನ್ಮೂಲಗಳನ್ನು ಕಲೆ ಹಾಕುತ್ತಾ ಅವನ್ನು ಸಂಸ್ಕೃತಿ ಅಧ್ಯಯನಗಳೆಂದು ಬಿಂಬಿಸುತ್ತಲಿವೆ. ಇನ್ನೊಂದೆಡೆ, ಸಾಮಾಜಿಕ ನ್ಯಾಯದ ಆಧಾರದ ಮೇಲೆ ರೂಪುಗೊಂಡ ಸಾಮಾಜಿಕ ನಿಶ್ಚಿತತೆಗಳನ್ನು ಆಧರಿಸಿದ ಶ್ರೇಣೀಕರಣದ ಪದ್ಧತಿಯನ್ನು ವಿಮರ್ಶಿಸುವ ನೋಟಕ್ರಮವೂ ಪ್ರಚಲಿತವಾಗಿದೆ. ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಯಲ್ಲಿ ಈ ಸಂಸ್ಕೃತಿ ಅಧ್ಯಯನಗಳು ಎಷ್ಟರಮಟ್ಟಿಗೆ ಆಕ್ರಮಿಸಿವೆ ಎಂದರೆ ಶ್ರೇಣೀಕರಣದ, ಸಾಮಾಜಿಕ ನ್ಯಾಯದ ಭಾಷೆಯಿಲ್ಲದೆ ಈ ಹೊತ್ತು ಸಾಹಿತ್ಯ ವಿಮರ್ಶೆಯನ್ನು ಕಲ್ಪಿಸಿಕೊಳ್ಳುವುದೇ ಕಷ್ಟ ಎನ್ನುವಂತೆ. ಈ ಎರಡು ಕ್ರಮಗಳ ಅಪಾಯಗಳೂ ಸಾಮರ್ಥ್ಯಗಳೂ ಸಂಸ್ಕೃತಿ ವಿಮರ್ಶೆಯ ಇತಿಮಿತಿಗಳೇ ಆಗಿವೆ. ಸಂಸ್ಕೃತಿ ಶೋಧಕರಾಗಿರುವ ಕೆ.ಜಿ.ನಾಗರಾಜಪ್ಪ ಅವರು ರೂಢಿಸಿಕೊಳ್ಳುವ ಸಂಸ್ಕೃತಿ ವಿಮರ್ಶೆಯೂ ಇದೇ ಬಗೆಯ ಮೇಲ್ಸ್ತರ ಲಕ್ಷಣಗಳನ್ನು ಹೊಂದಿದ್ದರೂ ಅದು ತಡಕುವ ಆಳ, ಶೋಧಿಸಕೊಳ್ಳುವ ಸಂಗತಿಗಳು ವಿಷಯ ವಿಸ್ತಾರದ ಕಾರಣದಿಂದ, ವಿಫುಲತೆಯ ಕಾರಣದಿಂದ ವಿಭಿನ್ನವಾದ ಓದು ಎನ್ನಿಸಿಕೊಳ್ಳುತ್ತದೆ.

ಅವೈದಿಕ ನೆಲೆಯಲ್ಲಿ ನಿಂತು ಭಾರತೀಯ ಸಂಸ್ಕೃತಿಯನ್ನು ಒಂದು ಶೋಷಕ–ಶೋಷಿತ ಸಂಸ್ಕೃತಿಯನ್ನಾಗಿ ಓದಿದ ಅಂಬೇಡ್ಕರ್ ಅವರ ನೋಟಕ್ರಮವು ಸಾಮಾಜಿಕ ನ್ಯಾಯವನ್ನು ಚಾರಿತ್ರಿಕವಾಗಿ ಶೋಧಿಸಿಕೊಳ್ಳುವ ರೀತಿಯನ್ನು ತೋರಿಸಿಕೊಟ್ಟಿದೆ. ನಾಗರಾಜಪ್ಪ ಅವರ ಚಿಂತನಾ ಕ್ರಮವೂ ಒಂದು ರೀತಿ ಇದೇ ಬಗೆಯದು. ನಾಗರಾಜಪ್ಪ ಅವರು ಕೆಳವರ್ಗಗಳ ಎಪಿಸ್ಟೀಮಾಲಾಜಿಯ ಬಗೆಗೆ ಅಧಿಕೃತವಾಗಿ ಮಾತನಾಡುವಾಗ ಸಾಮಾಜಿಕ ನ್ಯಾಯದ ದೀಪ ಹೊತ್ತಿಕೊಳ್ಳುತ್ತದೆ. ಈ ಬಗೆಯ ತಕ್ಕಡಿ ತೂಗುವಿಕೆ ಒಂದು ಅರ್ಥದಲ್ಲಿ ಪರ್ಯಾಯ ದೃಷ್ಟಿಯನ್ನು ಸೃಷ್ಟಿಸುತ್ತಿದ್ದರೆ ಇನ್ನೊಂದೆಡೆ ದ್ವಿತ್ವದ ಮಿತಿಯನ್ನು ಹೇಳುತ್ತಿರುತ್ತದೆ ಎನಿಸುತ್ತದೆ.

ಪ್ರಸ್ತುತ ನಾಗರಾಜಪ್ಪ ಅವರ 'ಅನುಶ್ರೇಣಿ–ಯಜಮಾನಿಕೆ' ಕೃತಿಯು ಭಕ್ತಿಯನ್ನು ಕೇಂದ್ರ ವಿಷಯವನ್ನಾಗಿರಿಸಿಕೊಂಡು ಸಂಸ್ಕೃತಿಯ ಪ್ರಶ್ನೆಗಳನ್ನು ಎತ್ತುತ್ತದೆ. ನಾಗರಾಜಪ್ಪ ಅವರು ಒರೆಹಚ್ಚಲೆತ್ನಿಸುವ ವೈದಿಕ ಮತ್ತು ಅವೈದಿಕ(ಶೂದ್ರ) ಪರಂಪರೆಗಳ ನಡುವೆ ಇರುವ ಕಂದರಗಳು ಅಗಾಧವಾದುದು. ಹಾಗೆಂದ ಮಾತ್ರಕ್ಕೆ ಇಲ್ಲಿ ಭಿನ್ನತೆಗಳ ಕಂದರಗಳು ಮಾತ್ರವೇ ಇದೆ ಎನ್ನಲಾಗದು. ವೈದಿಕ ಮತ್ತು ಅವೈದಿಕ ಸಂಸ್ಕೃತಿಗಳು ಭಿನ್ನಧಾರೆಗಳಾಗಿದ್ದರೂ ಕೊಡುಕೊಳುವಿಕೆಯ ಕೂಡುಸ್ಥಳಗಳಲ್ಲಿ ಯಾವುದು ನೀಡಿತು, ಯಾವುದು ಪಡೆದುಕೊಂಡಿತು ಎನ್ನುವುದನ್ನು ಊಹಿಸುವುದು ಕಷ್ಟ ಅದನ್ನು ವಿಶ್ಲೇಷಿಸುವುದಕ್ಕೆ ಅಪಾರವಾದ ಓದು, ವಿದ್ವತ್ತು ಅಪೇಕ್ಷಣೀಯವಾಗಿದೆ. ಅಂತಹ ಓದು ನಾಗರಾಜಪ್ಪ ಅವರಿಗೆ ಇದೆ ಎನ್ನುವುದನ್ನು ಈ ಕೃತಿ ತೋರಿಸುತ್ತದೆ.

ಸದ್ಯ ಈ ಕೃತಿಯಲ್ಲಿ ಇರುವ ಕ್ರಮವು ಒಂದು ರೂಢಿಗತ ಕ್ರಮದಲ್ಲಿ ಇರುವ ಶ್ರೇಣಿಯನ್ನು ಮುರಿದು ಕಟ್ಟಿಕೊಳ್ಳುವುದರ ಮೂಲಕ ನಿರಚನೆ ಮಾಡಿಕೊಳ್ಳುತ್ತದೆ. ಅದಕ್ಕಾಗಿ ಭಕ್ತಿಯ ಸಂಗತಿಯನ್ನೇ ತನ್ನ ನಿರಚನೆಯ ತತ್ವಕ್ಕೆ ಕೇಂದ್ರವಾಗಿರಿಸಿಕೊಳ್ಳುತ್ತದೆ. ಭಕ್ತಿ ಎನ್ನುವುದು ಮೇಲ್ನೋಟಕ್ಕೆ ಕಾಣುವಷ್ಟು ಸರಳ ಸಂಗತಿಯಲ್ಲ. ಅದರೊಳಗೆ ಅನೇಕ ವೈದಿಕ ಮತ್ತು ಅವೈದಿಕ ಧಾರೆಗಳು ಮುಖಾಮುಖಿಯಾಗಿವೆ. ಇಲ್ಲಿ ಯಜಮಾನಿಕೆಯ ಪ್ರಶ್ನೆ ಕೂಡ ಒಂದು ಅಧಿಕೃತತೆಯನ್ನು ಒದಗಿಸುವುದರಿಂದ ಭಕ್ತಿಯಂತಹ ವಿಷಯದಲ್ಲಿಯೂ ಶ್ರೇಣೀಕರಣವು ಇಣುಕುತ್ತದೆ. ಭಕ್ತಿ, ಅನುಭಾವ, ತಂತ್ರ ಮುಂತಾದ ಅನುಸರಣೆಗಳಲ್ಲಿ ಯಾರು ಭಾಗವಹಿಸುತ್ತಾರೆ? ಅವರ ಸ್ಥಾನಗಳೇನು? ಅವರ ಉದ್ದೇಶಗಳೇನು? ಎಂಬುದನ್ನು ಅನೇಕ ರೀತಿಗಳಲ್ಲಿ ಶೋಧಿಸಿಕೊಳ್ಳಬೇಕಾಗುತ್ತದೆ. ನಾಗರಾಜಪ್ಪ ಅವರು ಇದಕ್ಕಾಗಿ ಭೌತವಾದಿ–ಸಾಂಸ್ಕೃತಿಕ ಮಾದರಿಯನ್ನು ಅನುಸರಿಸುವಂತೆ ಕಾಣುತ್ತದೆ. ಅವರು ಭಕ್ತಿಯೆನ್ನುವುದನ್ನು 'ಪರ'ದ ವೈಭವೀಕರಣವನ್ನಾಗಿ ಭಾವಿಸದೆ ಇಹದ ಉತ್ಪನ್ನವಾಗಿ ನೋಡುತ್ತಾರೆ. ಇದರಿಂದ ಸಿಗುವ ಸಾಮಾಜಿಕ ಆಯಾಮವು ಭಕ್ತಿಯೊಳಗೆ ಇರಬಹುದಾದ ಶ್ರೇಣೀಕರಣದ ವಿನ್ಯಾಸವನ್ನು ಕೆದಕುತ್ತದೆ. ಆದರೆ ನಾಗರಾಜಪ್ಪ ಅವರು ತಮ್ಮ ಸಂಶೋಧನಾ ಸಲಕರಣೆಗಳ ಬಗೆಗೆ ಎಚ್ಚರದಿಂದ ಇದ್ದಾರೆ. ಅವರಿಗೆ ಪಾಶ್ಚಾತ್ಯ ಮತ್ತು ಪೌರ್ವಾತ್ಯ ತಂತ್ರಗಳ ಮಿತಿಗಳು ತಿಳಿದಿದ್ದು ತಮ್ಮದೇ ಆದ ದಾರಿಯನ್ನು ಅವರು ಕಂಡುಕೊಳ್ಳುವುದಕ್ಕೆ ಹೊರಡುತ್ತಾರೆ.

ಈ ಕೃತಿಯಲ್ಲಿ ಭಕ್ತಿಯ ಮೀಮಾಂಸೆಯನ್ನು ನಾಲ್ಕು ಭಾಗಗಳಲ್ಲಿ ಮಾಡಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಭಕ್ತಿಯ ಕಾರ್ಯಸ್ವರೂಪವನ್ನು ಕುರಿತು ವಿಶ್ಲೇಷಣೆ ಇದೆ. ಸಾಮಾನ್ಯ ತಿಳಿವಳಿಕೆಯ ಪ್ರಕಾರ ಭಕ್ತಿಯೆಂಬ ಕ್ರಿಯೆ ಮೂಲತ: ಸಾಮಾನ್ಯರಿಗೆ ಸಂಬಂಧ ಪಟ್ಟಿರುವಂತದ್ದು. ಈ ಸಂಪ್ರದಾಯವು ಗುರು–ಶಿಷ್ಯ, ಭಗವಂತ–ಭಕ್ತ ಎನ್ನುವ ದ್ವಿತ್ವದಲ್ಲಿ ನಿಜವಾಗುವಂತಹ ಅನುಭವವನ್ನು ರೂಢಿಸಿಕೊಡಿದೆ. ಈ ದ್ವಿತ್ವದಲ್ಲಿ ಇರುವ ಶ್ರೇಣೀಕರಣವು ಒಂದು ಹಿರಿದು, ಇನ್ನೊಂದು ಕಿರಿದು ಎನ್ನುವ ಒಪ್ಪಿತ ಸಂಗತಿಯೊಂದಿಗೇ ಆರಂಭವಾಗುತ್ತದೆ. ಆದರೆ ಭಕ್ತಿ ಪಂಥದಲ್ಲಿ ಈ ಶ್ರೇಣೀಕರಣವು ಸ್ಥಿರವಾದುದಲ್ಲ. ಆದರೆ ಭಕ್ತಿ ಪಂಥಗಳು ಸಾಂಸ್ಥೀಕರಣಗೊಳ್ಳುತ್ತಾ ಬಂದಂತೆ ವೈದಿಕ ಮತ್ತು ಅವೈದಿಕ ಪರಂಪರೆಗಳು ಸಂಕೀರ್ಣವಾಗಿ ಬೆರೆತುಕೊಂಡು ಅಲ್ಲಿ ಒಂದು ಮರುಶ್ರೇಣೀಕರಣವೂ ಉಂಟಾಗಿದೆ. ಶೂದ್ರೀಕರಣಗೊಳ್ಳುವ ಮೂಲಕ ವೈದಿಕ ಪರಂಪರೆಯು ಪಡೆದುಕೊಂಡಿದ್ದೇನು? ಎನ್ನುವ ಅಂಶವನ್ನು ಅವರು ಒತ್ತುಕೊಟ್ಟು ನೋಡಿದ್ದಾರೆ. ತಂತ್ರ ಮುಂತಾದ ಪರ್ಯಾಯ ಧಾರೆಗಳನ್ನು ಅನುಸರಿಸಿ, ಆನಂತರ ಅವುಗಳನ್ನು ಬ್ರಾಹ್ಮಣೀಕರಣಗೊಳಿಸಿ ಅವುಗಳ ಸತ್ವವನ್ನು ಬದಲಾಯಿಸಿದರು ಎನ್ನುವುದು. ಆದುದರಿಂದ ಭಕ್ತಿಯ ಮಾರ್ಗಗಳು ಚಾರಿತ್ರಿಕ ಗತಿಯಲ್ಲಿ ಸಾಗಿ ಬರುತ್ತಾ ವರ್ಣಾಶ್ರಮ ಧರ್ಮವನ್ನು ಅಪ್ಪಿಕೊಳ್ಳುವಂತಾಯಿತು. ಈ ಸಂಗತಿಗಳನ್ನು ನಾಗರಾಜಪ್ಪನವರು ಅಪಾರವಾದ ತಾತ್ವಿಕ ಮತ್ತು ಸಾಹಿತ್ಯಿಕ ಪಠ್ಯಗಳ ಉಲ್ಲೇಖಗಳೊಂದಿಗೆ ಪರಿಶೀಲಿಸುತ್ತಾ ಹೋಗುತ್ತಾರೆ.

ಇನ್ನೊಂದು ಸೂಕ್ಷ್ಮವಾದ ಸ್ತರದಲ್ಲಿ ಭಕ್ತಿ ಎನ್ನುವುದು ಭಾರತೀಯ ಪರಂಪರೆಯಲ್ಲಿ ಇರುವ ಶೈವ ಮತ್ತು ವೈಷ್ಣವ ಪಂಥಗಳಲ್ಲಿ ಯಾವ ಸ್ವರೂಪ ತಳೆಯುತ್ತದೆ ಎನ್ನುವುದನ್ನು ಕೃತಿ ಶೋಧಿಸುತ್ತದೆ. ಶೈವ ಧಾರೆಗಳಲ್ಲಿ ಇರುವ ಮುಕ್ತತೆಯು ವೈಷ್ಣವ ಪಂಥಗಳಲ್ಲಿ ಸಂಕುಚಿತವಾಗುತ್ತದೆ ಎನ್ನುವುದನ್ನು ಅವರು ತಮಿಳಿನ ಶೈವ ಪಂಥಗಳ ಸ್ವರೂಪವನ್ನು ವಿವರಿಸುವ ಮೂಲಕ ನಿರೂಪಿಸುತ್ತಾರೆ. ಆದುದರಿಂದ ವಚನಗಳು ಸಾಧನೆಯ ಮಾರ್ಗವನ್ನು ಸೂಚಿಸಿದರೆ ಕೀರ್ತನೆಗಳು ಕಲಾತ್ಮಕ(ಪು೫೧) ಎನ್ನುವ ಅಭಿಪ್ರಾಯವನ್ನು ಇಲ್ಲಿ ವ್ಯಕ್ತ ಪಡಿಸಲಾಗಿದೆ.

ಭಕ್ತಿಯ ಆಚರಣೆಗಳಲ್ಲಿ ಇರುವ ಹಿಂಸೆಯನ್ನು ಕೃತಿ ಅವಲೋಕಿಸುತ್ತದೆ. ಅಲ್ಲದೆ ಭಾರತೀಯ ಸಾಧನಾ ಪರಂಪರೆಗಳಲ್ಲಿ ಇರುವ ಹಿಂಸೆಯ ಆಚರಣೆಗಳನ್ನು ಅವಲೋಕಿಸಿದಾಗ ಅವು ಬ್ರಾಹ್ಮಣ ಮತ್ತು ಶೂದ್ರ ಪರಂಪರೆಗಳಲ್ಲಿ ವಿಭಿನ್ನವಾಗಿ ಕಾಣಿಸಿಕೊಳ್ಳುವುದನ್ನು ಗಮನಿಸಲಾಗಿದೆ.


ಈ ಕೃತಿಯಲ್ಲಿ ಮುಖ್ಯವಾಗಿ ಅವರು ಎತ್ತುವ ಪ್ರಶ್ನೆಗಳೆಂದರೆ ಶೂದ್ರ ಪರಂಪರೆಗಳು ಕಟ್ಟುವ ಪರ್ಯಾಯ ಜ್ಞಾನಗಳು ಯಾಕಾಗಿ ಭಾರತೀಯ ಪರಂಪರೆಯಲ್ಲಿ ಮರೆಯಲ್ಲಿಯೇ ಉಳಿದುಕೊಂಡವು? ಎನ್ನುವುದು ಹಾಗು ಶೂದ್ರ ಸಮುದಾಯಗಳು ಕಟ್ಟಿಕೊಂಡ ಜ್ಞಾನಗಳು ರೂಪಾಂತರ ಹೊಂದಿದ್ದು ಯಜಮಾನಿಕೆಯ ಸಂಚಿನ ಭಾಗವಾಗಿಯೇ? ಎನ್ನುವುದು. ಈ ಎರಡೂ ಪ್ರಶ್ನೆಗಳು ಸಾಮಯಿಕವೇ ಆದರೂ ಸಂಸ್ಕೃತಿಯ ಇಬ್ಬಾಯ ಖಡ್ಗಗಳು ಎಲ್ಲರನ್ನೂ ತಿವಿಯುತ್ತವೆ ಎನ್ನುವುದನ್ನು ಸಹ ಈ ಸಂದರ್ಭದಲ್ಲಿ ವಿಷಾದದಿಂದಲೇ ಗಮನಿಸಬೇಕಿದೆ.

–ಆರ್. ತಾರಿಣಿ ಶುಭದಾಯಿನಿ

(

ಪು: ನುಡಿಗಳ ಅಳಿವು: ಬೇರೆ ದಿಕ್ಕಿನ ನೋಟ ಲೇ: ಕೆ.ವಿ. ನಾರಾಯಣ, ಪ್ರ: ಅಹಿರ್ನಿಶಿ ಪ್ರಕಾಶನ, ಶಿವಮೊಗ್ಗ ಪುಟ: ೮೮ ಬೆಲೆ : ರೂ. ೧೦೦/-

ಭಾಷೆಯೊಂದರ ಅಳಿವು ಎಂದರೆ ಏನು?



ಭಾಷೆಗೆ ಸಂಬಂಧಪಟ್ಟಂತೆ ವ್ಯಾಕರಣ, ಭಾಷಣ ಕಲೆ, ಛಂದಸ್ಸು, ಅಲಂಕಾರ ಶಾಸ್ತ್ರ ಮುಂತಾದ ಅಧ್ಯಯನಗಳಿಗೆ ದೊಡ್ಡ ಇತಿಹಾಸವೆ ಇದೆ. ಆದರೆ ಭಾಷೆಗಳ ತೌಲನಿಕ ಅಧ್ಯಾಯನಗಳು ವಿಶೇಷವಾಗಿ ಪಶ್ಚಿಮದಲ್ಲಿ ೧೯ನೆಯ ಶತಮಾನದಲ್ಲಿ ಬೆಳೆದು ಬಂದಿವೆ. ಭಾಷಾ ಅಧ್ಯಯನದ ಮೂಲಕ ಮನುಷ್ಯ ಸ್ವಭಾವ, ಸಂಸ್ಕೃತಿಗಳನ್ನು ಅರ್ಥ ಮಾಡಿಕೊಳ್ಳುವ ಈ ಪ್ರಯತ್ನಗಳು ಮುಗ್ಧತೆಯಿಂದ ಕೂಡಿರಲಿಲ್ಲ ಎಂಬುದು ಗೊತ್ತಿದ್ದ ಸಂಗತಿ. ಅಂದರೆ ಅವು ಸಾಮ್ರಾಜ್ಯಶಾಹಿಯ ರಾಜಕೀಯದ ಭಾಗವಾಗಿಯೇ ಬಂದಿವೆ.

ಭಾಷೆ ಮತ್ತು ಭಾಷಾ ಅಧ್ಯಯನಗಳು ೨೦ನೆಯ ಶತಮಾನದಲ್ಲಿ ಹೊಸ ಕ್ರಾಂತಿಯನ್ನೇ ಉಂಟುಮಾಡಿದ್ದು ಇನ್ನೊಂದು ವಿಶೇಷ. ಆ ಶತಮಾನದ ದೊಡ್ಡ ಕಥಾನಕವೆ ಆದ ರಾಷ್ಟ್ರೀಯತೆಯ ಮುಖ್ಯ ಪಾತಳಿಯಾಗಿದ್ದು ಭಾಷೆಯೇ. ಆಧುನಿಕ ಭಾರತದ ನಿರ್ಮಾಣದಲ್ಲಿ ರಾಜ್ಯಗಳನ್ನು ರಚಿಸಿದ್ದು ಭಾಷಾವಾರು ಪ್ರಾಂತದ ತರ್ಕದ ಮೂಲಕವೆ. ಇದಕ್ಕೆ ಸಂಬಂಧಪಟ್ಟಂತೆ ಹಲವಾರು ಅಧ್ಯಯನಗಳು ನಡೆದಿವೆ. ಇನ್ನು ಸ್ವಿಟ್ಜರ್‌ಲ್ಯಾಂಡ್‌ನ ಸಂಸ್ಕೃತ ಭಾಷಾ ತಜ್ಞನಾದ ಫರ್ಡಿನಾಂಡ್ ದ ಸಸ್ಯೂ (೧೮೫೭-೧೯೧೩) ಪರಿಚಯಿಸಿದ ವಿವರಣಾತ್ಮಕ ಹಾಗೂ ಸಂರಚನಾ ಭಾಷಾ ಅಧ್ಯಯನವು ಮಾನವಿಕ ಹಾಗೂ ಸಮಾಜ ಅಧ್ಯಯನಗಳ ದಿಕ್ಕನ್ನೆ ಬದಲಿಸಿತು. ಸಾಹಿತ್ಯ, ಸಾಂಸ್ಕೃತಿಕ ಅಧ್ಯಯನಗಳಲ್ಲಿ ಇದನ್ನು 'ಭಾಷಿಕ ತಿರುವು' ಎಂದು ಕರೆಯುವುದುಂಟು. ಇದರ ಜೊತೆಗೆ ಭಾಷೆಯನ್ನು ಸಾಮಾಜಿಕ ಸಂಗತಿಯಾಗಿ ಅಧ್ಯಯನ ಮಾಡುವ ಸಾಮಾಜಿಕ-ಭಾಷಾ ವಿಜ್ಞಾನ, ದಿನನಿತ್ಯ ಜೀವನದಲ್ಲಿ ಭಾಷೆಯ ಬಳಕೆಯನ್ನು ಅಧ್ಯಯನ ಮಾಡುವ 'ಪ್ರಾಯೋಜಿಕ ಭಾಷಾ ವಿಜ್ಞಾನ' (ಪ್ರ್ಯಾಗ್ಮ್ಯಾಟಿಕ್ಸ್) ಹಾಗೂ ನೊಮ್ ಚಾಮಸ್ಕಿ, ಹ್ಯಾಲಿಡೆ ಮುಂತಾದವರ ಭಾಷಾ ವಿಜ್ಞಾನ ಮಾದರಿಗಳು ೨೦ನೆಯ ಶತಮಾನದ ಮಹತ್ವದ ಹೆಜ್ಜೆಗಳಾಗಿವೆ.

ಹೀಗೆ ೨೦ನೆಯ ಶತಮಾದ ಉತ್ತರಾರ್ಧದಲ್ಲಿ 'ಅಂಚಿಗೆ ತಳ್ಳಲ್ಪಟ್ಟ ಭಾಷೆಗಳ', ಗಂಡಾಂತರ ಎದುರಿಸುತ್ತಿರುವ ಭಾಷೆಗಳ' ವಿಶ್ಲೇಷಣೆಗಳ ಜೊತೆಗೆ ಮನುಷ್ಯ ಭಾಷೆಗಳ ಸಾವಿನ ಬಗ್ಗೆಯೂ ಅಧ್ಯಯನಗಳು ಪ್ರಾರಂಭವಾದವು. ಒಂದು ಕಾಲದಲ್ಲಿ ಭಾಷೆಗಳ ಹುಟ್ಟಿಗೆ ಸಂಬಂಧಪಟ್ಟ ಪ್ರಶ್ನೆಗಳು ಕುತೂಹಲ ಕೆರಳಿಸುವ ಅಧ್ಯಯನಗಳಾಗಿ ಕಂಡರೆ, ಈಗಿನ ಭಾಷೆಯ ಸಾವನ್ನು ಕುರಿತ ಅಧ್ಯಯನಗಳು ಆತಂಕವನ್ನು ವ್ಯಕ್ತಪಡಿಸುವ ನಡೆಗಳಾಗಿ ಕಾಣುತ್ತಿವೆ. ಭಾಷೆಗಳ ಸಾವಿನ ಕುರಿತು ಡೆವಿಡ್ ಕ್ರಿಸ್ಟಲ್‌ನ ಲ್ಯಾಂಗ್ವಿಜ್ ಡೆತ್(೨೦೦೦) ಎಂಬ ಪುಸ್ತಕ ಹೆಚ್ಚು ಪ್ರಚಲಿತವಾಗಿದೆ. ಭಾಷೆಗಳ ಅಳಿವನ್ನು ಕುರಿತ ಹೆಚ್ಚಿನ ಅಧ್ಯಯನಗಳು, ಭಾಷೆಗಳ ಸಾವನ್ನು ತಡೆಗಟ್ಟುವ (ಅಧಿಕಾರ ಕೇಂದ್ರಗಳಿಂದ ಪ್ರಾಯೋಜಿತವಾದ) ಯೋಜನೆಗಳು ಇತ್ತೀಚೆಗೆ ಬೆಳೆದುಬಂದ ವಿದ್ಯಮಾನಗಳಾಗಿವೆ. ಇಂತಹ ಬೆಳವಣಿಗೆಯ ರಾಜಕಾರಣವನ್ನೊಳಗೊಂಡಂತೆ, ಭಾಷಾ ಸಾವಿನ ಇತರ ಮಗ್ಗಲುಗಳನ್ನು ಸೂಕ್ಷ್ಮವಾಗಿ ಶೋಧಿಸುವ ಅಧ್ಯಯನವಾಗಿ ಕೆ.ವಿ.ನಾರಾಯಣ ಅವರ ಪುಸ್ತಿಕೆ ನುಡಿಗಳ ಅಳಿವು (೨೦೧೮) ಮೂಡಿಬಂದಿದೆ.

೭೭ ಪುಟಗಳನ್ನೊಳಗೊಂಡ ಈ ಚಿಕ್ಕ ಪುಸ್ತಿಕೆ ನಾನು ಇತ್ತೀಚೆಗೆ ಓದಿದ (ಇಂಗ್ಲಿಶ್ ಭಾಷಾ ಪುಸ್ತಕಗಳನ್ನೊಳಗೊಂಡಂತೆ) ಅತ್ಯುತ್ತಮ ಗ್ರಂಥಗಳಲ್ಲೊಂದು. ಇಂದಿನ ದಿನಗಳಲ್ಲಿ ಇಂತಹದೊಂದು ಆಲೋಚನೆ ಕನ್ನಡದಲ್ಲಿ ಹುಟ್ಟುತ್ತಿದೆ ಎಂಬುದು ಆಶಾದಾಯಕವೂ, ಹೆಮ್ಮೆ ಪಡುವ ಸಂಗತಿಯೂ ಆಗಿದೆ. ಹಾಗಾದರೆ ಅಂತಹ ವಿಶೇಷತೆ ಈ ಪುಸ್ತಿಕೆಯಲ್ಲಿ ಏನಿದೆ? 'ಭಾಷೆ' ಎನ್ನುವ ಪರಿಭಾಷೆಯನ್ನು ಬಿಟ್ಟು, 'ನುಡಿ' ಎನ್ನುವ ಪರಿಕಲ್ಪನೆ ಪುಸ್ತಿಕೆ ಉದ್ದಕ್ಕೂ ಬಳಸಲಾಗಿದೆ. ಜನ ಸಾಮಾನ್ಯರ ನಡುವೆ ಬಳಕೆಯಲ್ಲಿರುವ ಜೀವಂತ ನುಡಿಯನ್ನು ಮನದಲ್ಲಿಟ್ಟುಕೊಂಡು, ನುಡಿಗಳ ಅಳಿವಿನ ಬಗೆಗೆ ನಮಗಿರುವ ತಪ್ಪು ಕಲ್ಪನೆಗಳನ್ನು ಈ ಪುಸ್ತಿಕೆ ಸ್ಪಷ್ಟವಾಗಿ ವಿವರಿಸುತ್ತದೆ. ನುಡಿಗಳ ಅಳಿವನ್ನು ಅಧ್ಯಯನ ಮಾಡುವ ಪ್ರಯತ್ನಗಳ ಹಿಂದೆ ಇರುವ ತಪ್ಪು ಗ್ರಹಿಕೆಗಳನ್ನು ತೆರೆದಿಡುತ್ತ, ನುಡಿಗಳನ್ನು ಕಾಪಿಡುವ ಸರಕಾರಿ, ಜಾಗತಿಕ ಸಂಸ್ಥೆಗಳ ಹಾಗೂ ಇನ್ನಿತರ ಅಧಿಕಾರ ಕೇಂದ್ರಗಳ ರಾಜಕೀಯವನ್ನು ಇದು ಕಟು ವಿಮರ್ಶೆಗೆ ಒಳಪಡಿಸುತ್ತದೆ. ಹೀಗೆ ಮಾಡುವಾಗ ತಾತ್ವಿಕತೆಯನ್ನೇ ತನ್ನ ಬೌದ್ಧಿಕ ಹತಾರವಾಗಿ, ವಿವೇಕ ಮತ್ತು ಆಳವಾದ ಅಲೋಚನಾ ತಂತ್ರಗಳನ್ನೇ ತನ್ನ ತರ್ಕವಾಗಿ ಈ ಪುಸ್ತಿಕೆ ಬಳಸಿಕೊಂಡಿದೆ.

ಭಾಷೆಗಳ ಬಗ್ಗೆ ವಿವಿಧ ಪರಂಪರೆಗಳಲ್ಲಿ ಮೂಡಿಬಂದ ವಿಚಾರಗಳ ಸಾರಾಂಶಗಳನ್ನು ಮುಂದಿಡುವ ಪುಸ್ತಕಗಳ ಮಧ್ಯೆ ಈ ಪುಸ್ತಕವು ಓದುಗರನ್ನು ಹೊಸ ಆಲೋಚನೆಗೆ ಪ್ರೇರೇಪಿಸುತ್ತದೆ. ಇದು ಪ್ರಾರಂಭವಾಗುವುದೆ 'ಒಂದು ವಾಗ್ವಾದವನ್ನು ಬಯಸುವ' (೧೧) ಬೌದ್ಧಿಕ ಮಹತ್ವಾಕಾಂಕ್ಷೆಯೊಂದಿಗೆ. ಈ ಮಹದಾಸೆ ಕೇವಲ ಪುಸ್ತಿಕೆಯಲ್ಲಿ ಮಂಡಿಸಿದ ವಿಚಾರಗಳನ್ನಷ್ಟೆ ಅಲ್ಲದೆ, ಅದರಾಚೆ ಇಲ್ಲಿಯ ವಿಚಾರಗಳು ಸೃಷ್ಟಿಸಬಹುದಾದ ವಾಗ್ವಾದಗಳ ಬಗ್ಗೆ ಭರವಸೆ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಅಂದರೆ ಲೇಖಕರ ಈ ಹೆಬ್ಬಯಕೆಯನ್ನು ಅವರ ವಿಚಾರಗಳು ಹೆಚ್ಚು ಅರ್ಥಪೂರ್ಣಗೊಳಿಸಿವೆ; ಅವರು ಮಂಡಿಸುವ ವಾದಗಳಿಗೆ ಹೆಚ್ಚಿನ ಕಸುವೂ ಇದೆ.

ಹಾಗಾದರೆ ಅಂತಹ ವಿಚಾರಗಳು ಈ ಪುಸ್ತಿಕೆಯಲ್ಲಿ ಏನೇನಿವೆ? ಮನುಕುಲದ ನುಡಿಗಳನ್ನು ಕಾಪಿಡುವ ಕಾಳಜಿಯನ್ನು ಅಲ್ಲಗಳೆಯದೆ, ನುಡಿಗಳ ಅಳಿವನ್ನು ಒಟ್ಟು ಮಾನವ ವ್ಯಾಪಾರದಿಂದ ಬೇರೆಯಾಗಿಸಿ ನೋಡುವುದನ್ನು ಈ ಲೇಖಕರು ಒಪ್ಪುವುದಿಲ್ಲ. ಅಂದರೆ ಜನಪದರನ್ನು ಕಾಳಜಿ ಮಾಡದೇ ಜಾನಪದವನ್ನು ಉಳಿಸಲು ಸಾಧ್ಯವಿಲ್ಲ ಎನ್ನುವುದು ಇವರ ವಾದ ಒಪ್ಪಬೇಕಾದುದೇ. ಆದರೆ ನಮ್ಮ ಹೆಚ್ಚಿನ ಅಧ್ಯಯನಗಳು ಹಾಗೂ ಯೋಜನೆಗಳು ಈ ನಿಟ್ಟಿನಲ್ಲಿ ಅಲೋಚನೆ ಮಾಡುವುದು ವಿರಳ. ಕೆವಿಎನ್ ಪ್ರಕಾರ ಮನುಷ್ಯರ ನುಡಿಗಳು ಅಳಿಯಬಹುದು, ಮಾರ್ಪಾಡುಗೊಳ್ಳಲೂಬಹುದು; ಆದರೆ ಮನುಷ್ಯರಿಗಿರುವ 'ನುಡಿ ಕಸುವು' (ಯಾವ ಭಾಷೆಯನ್ನಾದರೂ ಬಳಸುವ ಮನುಷ್ಯರ ಸಹಜ ಶಕ್ತಿ) ಅಳಿಯುವುದಿಲ್ಲ. ಈ ಒಳನೋಟದ ಭಾಗವಾಗಿ 'ಕನ್ನಡ ಅಳಿಯುತ್ತಿರುವ ನುಡಿ' ಎಂದು ದಿಗಿಲುಪಡಲು ಯಾವ ಕಾರಣವನ್ನು ಕಾಣದ ಇವರು ಪುಸ್ತಿಕೆಯ ಪ್ರಾರಂಭದಲ್ಲಿಯೇ ಇದನ್ನು ಸ್ಪಷ್ಟವಾಗಿ ವಿವರಿಸುತ್ತಾರೆ. ಈ ಚರ್ಚೆ ಬಹಳ ಕುತೂಹಲಕರವಾಗಿದೆ.

ನುಡಿಗಳ ಅಳಿವಿಗೆ ಸಂಬಂಧಪಟ್ಟಂತಹ ವಿಚಾರಗಳಾದ 'ಆತಂಕ', 'ಹಿನ್ನೆಲೆ', 'ಲೋಕ ದೃಷ್ಟಿ', 'ಬಹುತ್ವ', 'ನುಡಿ ಸಮುದಾಯಗಳು', 'ನುಡಿ ಮೂಲಕ ಸಮುದಾಯಗಳ ತಿಳಿವಳಿಕೆ', 'ನುಡಿ ಅಳಿವಿನ ಕಾರಣಗಳು', 'ನುಡಿ ಮತ್ತು ಸಾಂಸ್ಕೃತಿಕ ನೆನಪು', 'ನುಡಿಗಳ ಅಳಿವನ್ನು ತಡೆಯುವ ಕಾರ್ಯಯೋಜನೆಗಳ ತಾತ್ವಿಕತೆ', 'ಯುನೆಸ್ಕೋದ ಪ್ರಯತ್ನಗಳು' ಇತ್ಯಾದಿಗಳನ್ನು ಬಹಳ ತಾರ್ಕಿಕವಾಗಿ ಈ ಪುಸ್ತಿಕೆ ವಿವರಿಸುತ್ತದೆ. ಈ ಸಂಗತಿಗಳ ಮಧ್ಯ ನುಡಿ ಮತ್ತು ತಿಳಿವಳಿಕೆಗಳ ನಂಟನ್ನು ಕುರಿತಂತೆ ಭಾರತೀಯ ಚಿಂತನಾಕ್ರಮವನ್ನು ಎರಡು ಪುಟಗಳಲ್ಲಿ ಚರ್ಚಿಸಲಾಗಿದೆ. 'ಶಬ್ದಪ್ರಮಾಣ' ಎಂಬ ಪರಿಕಲ್ಪನೆ ಇಲ್ಲಿ ಉಲ್ಲೇಖಿತವಾಗಿಲ್ಲ ಎನ್ನುವುದನ್ನು ಬಿಟ್ಟರೆ, ಈ ಭಾಗವು ಭಾರತೀಯ ಚಿಂತನಾಕ್ರಮವನ್ನು ಉಪಯೋಗಿಸಿ ನುಡಿಗಳ ಅಳಿವನ್ನು ಹೇಗೆ ಶೋಧಿಸಬಹುದೆಂಬ ಸಾಧ್ಯತೆಯನ್ನು ತೋರಿಸುತ್ತದೆ. ನಂತರ ನುಡಿಯ ಹುಟ್ಟು, ಬೆಳವಣಿಗೆ ಹಾಗೂ ಭಾಷಾ-ನಿರ್ಧಾರತೆ (ಲಿಗ್ವಿಸ್ಟಿಕ್ ಡಿಟರ್ಮಿನಿಜಮ್) ಕುರಿತು ಗಹನವಾದ ಚಿಂತನೆ ಇದೆ. ಸಪೀರ್-ವೂರ್ಫ್ ಪ್ರಮೇಯವನ್ನು ಆಳವಾಗಿ ಅರ್ಥೈಸಿಕೊಂಡ ಕೆವಿಎನ್ ಒಂದು ದಿಟ್ಟ ನಿಲುವನ್ನು ತಾಳುತ್ತಾರೆ. ಅದೆಂದರೆ ಭಾಷೆ ನಮ್ಮ ಲೋಕಗ್ರಹಿಕೆಯನ್ನು ನಿರ್ಧರಿಸುವುದಿಲ್ಲ, ಮತ್ತು ಭಾಷೆ ಬದಲಾದರೆ ಲೋಕದೃಷ್ಟಿ, ತಿಳಿವಳಿಕೆಗಳು ಬದಲಾಗುವುದಿಲ್ಲ ಎನ್ನುವ ವಾದ.

ವೈಯಕ್ತಿಕವಾಗಿ ಈ ಪುಸ್ತಕ 'ಭಾಷೆ', 'ನುಡಿಗಳ ಅಳಿವು' ಕುರಿತು ನನ್ನ ಅರಿವನ್ನು ಹಿಗ್ಗಿಸಿದೆ. ಕೆವಿಎನ್ ಅವರ ಬರವಣಿಗೆ ಓದುಗರೊಂದಿಗೆ ಸಂವಾದವನ್ನು ನಡೆಸುತ್ತದೆ. ಅವರ ನಿರೂಪಣೆ, ಆಲೋಚನಾ ಕ್ರಮಗಳು ಓದುಗರಿಗೆ ಹಿಡಿಸದೆ ಇರಲಾರವು. ಹಾಗೆಯೇ ಕಲಿಸದೇ ಇರಲಾರವು. ಗಹನವಾದ ವಿಚಾರವುಳ್ಳ ಈ ಪುಸ್ತಿಕೆಯನ್ನು ಅಂದವಾಗಿ ಮುದ್ರಿಸಿದ ಅಹರ್ನಿಶಿ ಪ್ರಕಾಶನಕ್ಕೂ ಚಪ್ಪಾಳೆ!

-ಡಾ. ಎನ್.ಎಸ್. ಗುಂಡೂರ

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು



ವಿಜಯಾನಂದ್ ಡಯಾಬಿಟಿಕ್ ಸೆಂಟರ್
೮೩೩, ವಿನಯ ಮಾರ್ಗ,
ಸಂಗೀತ ಕಾರ್ನರ್ ಎದುರು
ಸಿದ್ಧಾರ್ಥ ನಗರ, ಮೈಸೂರು-೫೭೦೦೧೧
ದೂ : ೦೮೨೧-೨೪೭೯೬೩೩/೪೨೪೭೮೩೩

'ಹೊಸ ಮನುಷ್ಯ'ದ ಓದುಗರೆಲ್ಲರಿಗೂ
ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು



ಬಿ.ವಿ. ಸುರೇಂದ್ರ
ಮತ್ತು ಕುಟುಂಬ
ಶಿವಮೊಗ್ಗ

ತಿಂಗಳ ಸಾಲುಗಳು...



ಇನ್ನೊಬ್ಬರಿಂದ ನಾವು ಅಪೇಕ್ಷಿಸುವ ಗುಣಗಳನ್ನು ನಾವು ಮೊದಲು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಪ್ರಯೋಗ ಮಾಡಿದ ನಂತರವಷ್ಟೇ ಅಂತಹ ಅಪೇಕ್ಷೆಯನ್ನು ಇಟ್ಟುಕೊಳ್ಳುವುದು ವಿಹಿತ.

-ಮಹಾತ್ಮ ಗಾಂಧಿ

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)